ಮಂಗಳವಾರ, ಆಗಸ್ಟ್ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 234 | ಪುಟ 14

• www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಕೋಪವೆಂಬುದು ವರವೂ ಹೌದು, ಶಾಪವೂ ಹೌದು. ಕೋಪವನ್ನು ನಿಗ್ರಹಿಸಿ, ನಿರ್ವಹಿಸುವುದು ಒಂದು ಕಲೆ.



ಸಂಖ್ಯೆ-ಸುದ್ದಿ ದೇಶದಾದ್ಯಂತ ಮಾಂಸಾಹಾರ ವೈವಿಧ್ಯ | ಮಳೆ: 5.28 ಲಕ್ಷ ಹೆಕ್ಟೇರ್ ಬೆಳೆ ಹಾನಿ 4A | ಕೇಂದ್ರ ಸರ್ಕಾರದ ವಿರುದ್ಧ ರೈತರ ಆಕ್ರೋಶ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,773 ▼	17,490 ▼	₹53,300 (ಬೆಂಗಳೂರು)	₹ 57,600 (ಬೆಂಗಳೂರು)	79.84

ದೂರು ಕೊಟ್ಟರೆ ಬಳಕೆಯಾಗಲಿದೆ 'ದಂಡಾಸ್ತ್ರ' • ಹೈಕೋರ್ಟ್ ತೀರ್ಪು ಬಗ್ಗೆ ತಜ್ಞರೊಂದಿಗೆ ಚರ್ಚೆ

ಎಫ್‌ಐಆರ್‌ಗೆ 'ಲೋಕಾ' ಅಣಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಸರ್ಕಾರದಲ್ಲಿನ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅಧಿಕಾರ ದುರ್ಬಳಕೆ ವಿರುದ್ಧ 'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ'ಯ ಅಸ್ತ್ರ ಝಳಪಿಸಲು ಲೋಕಾಯುಕ್ತ ಮತ್ತೆ ಸಜ್ಜಾಗಿದೆ. ದೂರು ಬಂದರೆ ತಕ್ಷಣದಲ್ಲೇ ಪ್ರಕರಣ ದಾಖಲಿಸಲು ಲೋಕಾಯುಕ್ತ ಪೊಲೀಸ್ ಘಟಕವು ಸನ್ನದ್ಧವಾಗಿದೆ.

ಹೈಕೋರ್ಟ್ ತೀರ್ಪಿನ ಕುರಿತು ಕಾನೂನು ತಜ್ಞರ ಜತೆ ಸಮಾಲೋಚನೆ ನಡೆಸಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಸಂಸ್ಥೆಯ ಪೊಲೀಸ್ ಘಟಕ ಹಾಗೂ ನ್ಯಾಯಾಂಗ ವಿಭಾಗದ ಅಧಿಕಾರಿಗಳ ಜತೆಗೂ ಸರಣಿ ಸಭೆಗಳನ್ನು ನಡೆಸಿದ್ದಾರೆ. ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಆರೋಪದಡಿ ಚುನಾಯಿತ ಪ್ರತಿನಿಧಿಗಳ ಹಾಗೂ ಸರ್ಕಾರಿ ನೌಕರರ ವಿರುದ್ಧ ದೂರುಗಳು ಸಲ್ಲಿಕೆಯಾದರೆ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಿ, ತನಿಖೆ ಆರಂಭಿಸುವಂತೆ ಪೊಲೀಸ್ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಲೋಕಾಯುಕ್ತ ಮೂಲಗಳು 'ಪ್ರಜಾವಾಣಿ'ಗೆ ಖಚಿತಪಡಿಸಿವೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ -1988ರ ಅಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸುವ ಅಧಿಕಾರವನ್ನು ಲೋಕಾಯುಕ್ತ ಪೊಲೀಸ್ ಘಟಕದ ಎಲ್ಲ ಇನ್‌ಸ್ಪೆಕ್ಟರ್‌ಗಳಿಗೆ ನೀಡಿ 1991ರ ಫೆಬ್ರುವರಿ 2ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಲೋಕಾಯುಕ್ತದ ಪೊಲೀಸ್ ಇನ್‌ಸ್ಪೆಕ್ಟರ್ ಕಚೇರಿಗಳನ್ನು ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಸೆಕ್ಷನ್‌2ರ ಅಡಿ ಪೊಲೀಸ್ ಠಾಣೆಗಳೆಂದು ಘೋಷಿಸಿ 2002ರ ಮೇ 8 ಮತ್ತು ಡಿಸೆಂಬರ್ 12ರಂದು ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು.

ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಬಳಕೆಗೆ ಅಧಿಕಾರ ನೀಡಿದ್ದ ಮೂರೂ ಆದೇಶಗಳನ್ನು ಹಿಂಪಡೆದು, ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಅಸ್ತಿತ್ವಕ್ಕೆ ತಂದಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 2016ರ ಮಾರ್ಚ್ 14ರಂದು ಆದೇಶ ಹೊರಡಿಸಿತ್ತು. ಈ ಅಧಿಸೂಚನೆಯನ್ನು ರದ್ದುಗೊಳಿಸಿ ಇದೇ ಆಗಸ್ಟ್ 11ರಂದು ತೀರ್ಪು ನೀಡಿರುವ ಹೈಕೋರ್ಟ್, ಲೋಕಾಯುಕ್ತಕ್ಕೆ ಬಲ ನೀಡಿದ್ದ ಹಿಂದಿನ ಎಲ್ಲ ಅಧಿಸೂಚನೆಗಳನ್ನೂ ಕಾಪಾಡಿಕೊಂಡು ಹೋಗುವಂತೆ ಆದೇಶಿಸಿತ್ತು.

5ನೇ ಪುಟ ನೋಡಿ

ಭವಿಷ್ಯದ ಯೋಚನೆಯಲ್ಲಿ ಎಸಿಬಿ ಅಧಿಕಾರಿಗಳು

ಪ್ರಜಾವಾಣಿ ವಿಶೇಷ

ಎಸಿಬಿಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ 322 ಹುದ್ದೆಗಳಿಗೆ ಮಂಜೂರಾತಿ ಇದ್ದು, ಬಹುತೇಕ ಭರ್ತಿಯಾಗಿಯೇ ಇವೆ. ಈಗ ಸಂಸ್ಥೆಯೇ ರದ್ದಾಗಿರುವುದರಿಂದ ಮುಂದೆ ತಮ್ಮನ್ನು ಯಾವ ಹುದ್ದೆಗಳಿಗೆ ವರ್ಗಾಯಿಸಬಹುದೆಂಬ ಚರ್ಚೆ ಎಸಿಬಿ ಅಧಿಕಾರಿಗಳ ಮಟ್ಟದಲ್ಲಿ ನಡೆದಿದೆ.

ಲೋಕಾಯುಕ್ತದಲ್ಲಿ 166 ಪೊಲೀಸ್ ಅಧಿಕಾರಿಗಳ ಹುದ್ದೆಗಳಲ್ಲಿ 37 ಖಾಲಿ ಇವೆ. 376 ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ಪೈಕಿ 159 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಲೋಕಾಯುಕ್ತ ಪೊಲೀಸ್ ವಿಭಾಗವು ಸಿದ್ಧತೆ ನಡೆಸಿದೆ.

'ಪ್ರಭಾವಿಗಳ ವಿರುದ್ಧವೂ ತನಿಖೆ ಸಾಧ್ಯ'

'ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಹಿಂದಿನ ಅಧಿಕಾರ ಪುನಃ ದೊರಕಿರುವುದರಿಂದ ಶಾಸಕರು, ಸಚಿವರು, ಮುಖ್ಯಮಂತ್ರಿ ವಿರುದ್ಧವೂ ಪ್ರಕರಣ ದಾಖಲಿಸಿ, ತನಿಖೆ ನಡೆಸಬಹುದು. ಯಾವುದೇ ಹಂತದ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಲು ಅವಕಾಶ ಸಿಕ್ಕಿದೆ' ಎನ್ನುತ್ತಾರೆ ಮಾಜಿ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ.

ಎಸಿಬಿಯಲ್ಲಿ ದೊಡ್ಡವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸಿದ ಉದಾಹರಣೆ ಕಡಿಮೆ. ಈಗ ಲೋಕಾಯುಕ್ತ ಪೊಲೀಸ್ ವಿಭಾಗ ಹೆಚ್ಚು ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶವಿದೆ. ದಕ್ಷ ಮತ್ತು ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು ಅಲ್ಲಿಗೆ ನಿಯೋಜಿಸಿದರೆ ಅದು ಸಾಧ್ಯವಾಗುತ್ತದೆ ಎಂದರು.

ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಪೂರ್ಣ ಅಧಿಕಾರ ಮರಳಿದೆ. ದೂರು ಬಂದರೆ ಯಾವುದೇ ಕ್ಷಣದಲ್ಲೂ ತನಿಖೆ ಆರಂಭಿಸಲು ಅವಕಾಶವಿದೆ

ನ್ಯಾ.ಬಿ.ಎಸ್. ಪಾಟೀಲ, ಲೋಕಾಯುಕ್ತ



ಧ್ವಜ ಹಿಡಿದರೂ ಏಟು

ಪಟ್ನಾದಲ್ಲಿ ಪ್ರತಿಭಟನೆ ವೇಳೆ ಕೈಯಲ್ಲಿ ತ್ರಿವರ್ಣಧ್ವಜ ಹಿಡಿದು ಉದ್ಯೋಗ ಕೊಡಿ ಎಂದು ಕೇಳಿದ ಯುವಕನಿಗೆ ಹೆಚ್ಚುವರಿ ಜಿಲ್ಲಾಧಿಕಾರಿ ಕೆ.ಕೆ. ಸಿಂಗ್ ಸೋಮವಾರ ಲಾಠಿಯಿಂದ ಥಳಿಸಿದರು –ಪಿಟಿಐ ಚಿತ್ರ

ಸುದ್ದಿ 8

ಕೆಪಿಟಿಸಿಎಲ್‌ನ ಕಿರಿಯ ಸಹಾಯಕರ ನೇಮಕಾತಿ

ಪರೀಕ್ಷಾ ಅಕ್ರಮ: 9 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯ ಅಕ್ರಮಕ್ಕೆ ಸಂಬಂಧಿಸಿ ಪೊಲೀಸರು, ಉಪ ಪ್ರಾಂಶುಪಾಲ ಮತ್ತು ಅವರ ಪುತ್ರ ಸೇರಿದಂತೆ ಒಟ್ಟು 9 ಮಂದಿ ಮುಖ್ಯ ಆರೋಪಿಗಳನ್ನು ಬಂಧಿಸಿದ್ದಾರೆ. ನಾಲ್ವರು ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆದಿದೆ.

'ಸದ್ಯ ಎರಡು ಕೇಂದ್ರಗಳ ಅಕ್ರಮ ಬಯಲಿಗೆ ಬಂದಿದೆ. ರಾಜ್ಯದ ಇನ್ನೂ ಹಲವೆಡೆ ನಡೆದಿರುವ ಸಾಧ್ಯತೆ ಇದೆ ಎಂದು ಪೊಲೀಸರು ಹೇಳಿದ್ದಾರೆ.

ಸೋಮವಾರ ಈ ಬಗ್ಗೆ ವಿವರ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ, 'ಗೋಕಾಕ ನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಹಾಗೂ ಗದಗ ನಗರದ ಮುನ್ಸಿಪಲ್ ಕಾಲೇಜಿನಲ್ಲಿ ನಡೆದ ಅಕ್ರಮಗಳು ಖಚಿತಪಟ್ಟಿವೆ. ಅಥಣಿ ಸೇರಿದಂತೆ ವಿವಿಧ ಕೇಂದ್ರಗಳಲ್ಲಿ ಅಕ್ರಮ ನಡೆದಿರುವ ಅನುಮಾನಗಳಿವೆ' ಎಂದರು.

5ನೇ ಪುಟ ನೋಡಿ

'ಅಕ್ರಮ ನಡೆದಿಲ್ಲ, ಭಯಪಡಬೇಕಿಲ್ಲ'

ಕಲಬುರಗಿ: 'ಕೆಪಿಟಿಸಿಎಲ್ ನೇಮಕಾತಿಯಲ್ಲಿ ಅಕ್ರಮ ನಡೆದಿಲ್ಲ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಒಂದು ವೇಳೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದರೆ, ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಸ್ಪಷ್ಟಪಡಿಸಿದರು. 'ನೇಮಕಾತಿ ಪ್ರಕ್ರಿಯೆ ಇಲಾಖೆಯಿಂದ ನಡೆದರೂ ಪರೀಕ್ಷೆ ಆಯೋಜಿಸಿದ್ದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ. ಪ್ರಾಥಮಿಕ ತನಿಖೆಯಲ್ಲಿ ಅಕ್ರಮ ನಡೆದಿಲ್ಲ ಎಂಬುದು ಗೊತ್ತಾಗಿದೆ. ಅಭ್ಯರ್ಥಿಗಳು ಭಯಪಡಬೇಕಿಲ್ಲ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.'ಅಭಿವೃದ್ಧಿ ಕುರಿತು ಚರ್ಚಿಸಲು ಕಾಂಗ್ರೆಸ್ ನಾಯಕರ ಸವಾಲು ಸ್ವೀಕರಿಸುತ್ತೇನೆ. ನನ್ನ ಇಲಾಖೆ, ಸರ್ಕಾರದ ಸಾಧನೆ ಬಗ್ಗೆ ಬಹಿರಂಗ ಚರ್ಚೆಗೆ ಸಿದ್ಧನಿದ್ದೇನೆ' ಎಂದರು.

ಸಿಒಎ ರದ್ದು: ಸುಪ್ರೀಂ ಕೋರ್ಟ್ ತೀರ್ಪು

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ದೈನಂದಿನ ವ್ಯವಹಾರಗಳ ಮೇಲ್ವಿಚಾರಣೆಗೆ ನೇಮಿಸಿದ್ದ ಮೂವರು ಸದಸ್ಯರ ಆಡಳಿತ ಸಮಿತಿಯನ್ನು (ಸಿಒಎ) ಸುಪ್ರೀಂ ಕೋರ್ಟ್ ಸೋಮವಾರ ರದ್ದುಗೊಳಿಸಿದೆ.

'ಎಐಎಫ್‌ಎಫ್ ಆಡಳಿತವನ್ನು ಫೆಡರೇಷನ್‌ನ ಹಂಗಾಮಿ ಕಾರ್ಯದರ್ಶಿ ವಹಿಸಿಕೊಳ್ಳಬೇಕು' ಎಂದು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ಪೀಠ ನಿರ್ದೇಶನ ನೀಡಿದೆ. ಅಕ್ಟೋಬರ್‌ನಲ್ಲಿ ಆಯೋಜನೆಯಾಗಿರುವ 17 ವರ್ಷದೊಳಗಿನವರ ಮಹಿಳಾ ವಿಶ್ವಕಪ್ ಟೂರ್ನಿಯನ್ನು ನಿಗದಿಯಂತೆ ಭಾರತದಲ್ಲಿ ನಡೆಸಲು ಮತ್ತು ಫುಟ್‌ಬಾಲ್ ಸಂಸ್ಥೆಗಳ ಅಂತರರಾಷ್ಟ್ರೀಯ ಒಕ್ಕೂಟವು (ಫಿಫಾ) ಎಐಎಫ್‌ಎಫ್ ಮೇಲೆ ಹೇರಿರುವ ಅಮಾನತು ವಾಪಸ್ ಪಡೆಯಲು ತನ್ನ ಈ ಹಿಂದಿನ ಆದೇಶವನ್ನು ಮಾರ್ಪಾಡು ಮಾಡಿರುವುದಾಗಿ ಹೇಳಿದೆ. ಆ.28 ರಂದು ನಡೆಯಬೇಕಿದ್ದ ಎಐಎಫ್‌ಎಫ್ ಚುನಾವಣೆಯನ್ನು ಸುಪ್ರೀಂ ಕೋರ್ಟ್ ಒಂದು ವಾರ ಮುಂದೂಡಿದೆ.

10

ಪಕ್ಷ ವಿಭಜಿಸುವಂತೆ ಬಿಜೆಪಿಯಿಂದ ಸಂದೇಶ: ಸಿಸೋಡಿಯಾ

'ಎಎಪಿ ಒಡೆದರೆ ಪ್ರಕರಣ ರದ್ದು'

ಪ್ರಜಾವಾಣಿ ವಾರ್ತೆ

ನವದೆಹಲಿ: ಎಎಪಿಯನ್ನು ಒಡೆದು ಬಿಜೆಪಿ ಸೇರಿದರೆ ತಮ್ಮ ವಿರುದ್ಧ ಇರುವ ಎಲ್ಲ ಪ್ರಕರಣಗಳನ್ನು ಕೈಬಿಡಲಾಗುವುದು ಎಂಬ ಸಂದೇಶವನ್ನು ತಮಗೆ ನೀಡಲಾಗಿತ್ತು ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಸೋಮವಾರ ಹೇಳಿದ್ದಾರೆ. ಇದರ ಆಡಿಯೊ ರೆಕಾರ್ಡ್ ಇದೆ. ಸೂಕ್ತ ಸಂದರ್ಭದಲ್ಲಿ ಅದನ್ನು ಬಹಿರಂಗಪಡಿಸಲಾಗುವುದು ಎಂದು ಎಎಪಿ ಮೂಲಗಳು ತಿಳಿಸಿವೆ. ಅಬಕಾರಿ ನೀತಿ ಜಾರಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದಲ್ಲಿ ಸಿಸೋಡಿಯಾ ವಿರುದ್ಧ ಸಿಬಿಐ ತನಿಖೆ ನಡೆಸುತ್ತಿದೆ.

ಆದರೆ, ಸಿಸೋಡಿಯಾ ಆರೋಪವನ್ನು ಬಿಜೆಪಿ ಅಲ್ಲಗಳೆದಿದೆ. ಭ್ರಷ್ಟಾಚಾರ ಪ್ರಕರಣದಲ್ಲಿ ಸಿಕ್ಕಿ ಬಿದ್ದಿರುವ ಸಿಸೋಡಿಯಾ ಅವರು ಕತೆ ಕಟ್ಟುತ್ತಿದ್ದಾರೆ ಎಂದು ಬಿಜೆಪಿ ಸಂಸದ ಮನೋಜ್ ತಿವಾರಿ ಹೇಳಿದ್ದಾರೆ.

ಅರವಿಂದ ಕೇಜ್ರಿವಾಲ್ ಮಾದರಿ ಏನು ಎಂಬುದು ಈಗ ಬಹಿರಂಗವಾಗಿದೆ. ಅದು ಮೊಹಲ್ಲಾ ಕ್ಲಿನಿಕ್‌ನಿಂದ ಮೊಹಲ್ಲಾ ಮದ್ಯದ ಅಂಗಡಿವರೆಗೆ ಸಾಗಿದೆ. ಸ್ವರಾಜ್ ಈಗ ಶರಾಬುರಾಜ್ ಆಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಶಿಮ್ಲಾದಲ್ಲಿ ಹೇಳಿದ್ದಾರೆ.

8ನೇ ಪುಟ ನೋಡಿ

ಭಾರತದ ನಾಯಕರೊಬ್ಬರ ಹತ್ಯೆಗೆ ಸಂಚು: ರಷ್ಯಾದಲ್ಲಿ ಉಗ್ರನ ಬಂಧನ

ಮಾಸ್ಕೊ (ಪಿಟಿಐ): 'ಭಾರತದ ಆಡಳಿತಾರೂಢ ಪಕ್ಷದ ನಾಯಕರೊಬ್ಬರನ್ನು ಹತ್ಯೆ ಮಾಡಲು ನಿಯೋಜಿತನಾಗಿದ್ದ ಇಸ್ಲಾಮಿಕ್ ಸ್ಟೇಟ್‌ನ (ಐಎಸ್) ಉಗ್ರನೊಬ್ಬನನ್ನು ಬಂಧಿಸಲಾಗಿದೆ' ಎಂದು ರಷ್ಯಾ ಹೇಳಿದೆ. ರಷ್ಯಾದ ಫೆಡರಲ್ ಸೆಕ್ಯೂರಿಟಿ ಸರ್ವೀಸಸ್ (ಎಫ್‌ಎಸ್‌ಬಿ) ಈ ಬಗ್ಗೆ ಮಾಹಿತಿ ನೀಡಿದೆ. ಈ ಬೆಳವಣಿಗೆಯನ್ನು ಟರ್ಕಿಯ ಸರ್ಕಾರಿ ಸುದ್ದಿ ಸಂಸ್ಥೆ ತಾಸ್ ಸಹ ದೃಢಪಡಿಸಿದೆ.

'ಬಂಧಿತನು ಮಧ್ಯ ಏಷ್ಯಾದ ದೇಶವೊಂದಕ್ಕೆ ಸೇರಿದವನು. ಪ್ರವಾದಿ ಮಹಮ್ಮದ್ ಅವರನ್ನು ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಕ್ಕಾಗಿ ಈ ದಾಳಿಯನ್ನು ಯೋಜಿಸಲಾಗಿತ್ತು ಮತ್ತು ಆ ಹೇಳಿಕೆ ನೀಡಿದವರನ್ನು ಆತ್ಮಾಹುತಿ ಬಾಂಬ್ ದಾಳಿಯ ಮೂಲಕ ಕೊಲ್ಲಲು ಯೋಜನೆ ರೂಪಿಸಿದ್ದಾಗಿ ಬಂಧಿತ ಉಗ್ರ ಒಪ್ಪಿಕೊಂಡಿದ್ದಾನೆ' ಎಂದು ಎಫ್‌ಎಸ್‌ಬಿ ಮಾಹಿತಿ ನೀಡಿದೆ.

ಇನ್ನೊಂದು ಸುದ್ದಿ 9

ಶಿವಾನಂದ ವೃತ್ತದ ಮೇಲ್ಸೇತುವೆ ಈ ವಾರಾಂತ್ಯಕ್ಕೆ ಮುಕ್ತ

ಬೆಂಗಳೂರು: ನಗರದ ಶಿವಾನಂದ ವೃತ್ತದ ಮೇಲ್ಸೇತುವೆಯಲ್ಲಿ ಕೊನೆಯ ಹಂತದ ಕಾಮಗಾರಿಗಳು ನಡೆಯುತ್ತಿದ್ದು, ಈ ವಾರಾಂತ್ಯ ಮೇಲ್ಸೇತುವೆಯನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗುತ್ತದೆ.

'ಮೇಲ್ಸೇತುವೆಯ ಒಂದು ಬದಿಯನ್ನು ಆಗಸ್ಟ್ 15ರಿಂದ ಪ್ರಾಯೋಗಿಕ ಸಂಚಾರಕ್ಕೆ ಮುಕ್ತವಾಗಿಸಲಾಗಿತ್ತು. ನಂತರ ಕೆಲವು ದೂರುಗಳು ಬಂದವು. ಜಾಯಿಂಟ್ ಏರುಪೇರು, ಕೆಲವು ಭಾಗಗಳಲ್ಲಿ ಸಿಮೆಂಟ್ ಕಾಣುತ್ತಿದೆ ಎಂದರು. ನಾವು ಪ್ರಾಯೋಗಿಕ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದರಿಂದ ಇವುಗಳನ್ನು ಪರಿಶೀಲಿಸಿ ಸರಿಪಡಿಸಲಾಗುತ್ತದೆ. ಕಾಮಗಾರಿ ಪೂರ್ಣವಾಗದಿರುವುದರಿಂದ ಇವೆಲ್ಲ ಕಂಡುಬಂದಿವೆ' ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



'ಆಧಾರ್ ಜೋಡಣೆ ಕಡ್ಡಾಯವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆಯನ್ನು ಜೋಡಿಸುವುದು ಕಡ್ಡಾಯವಲ್ಲ ಎಂದು ಚುನಾವಣಾ ಆಯೋಗದ ಪ್ರಕಟಣೆ ತಿಳಿಸಿದೆ.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ದತ್ತಾಂಶದೊಂದಿಗೆ ಆಧಾರ್ ಸಂಖ್ಯೆ ಜೋಡಣೆ ಕಡ್ಡಾಯವಲ್ಲ. ಮತದಾರರು ಸ್ವಯಂಪ್ರೇರಿತರಾಗಿ ಮತದಾರರ ಪಟ್ಟಿಯ ದತ್ತಾಂಶದೊಂದಿಗೆ ಆಧಾರ್ ಸಂಖ್ಯೆಯನ್ನು ಬಳಸಿ ಅಥವಾ ಇತರೆ ನಿಗದಿತ ದಾಖಲೆಗಳ ಮೂಲಕವೂ ಗುರುತಿಸಿ, ದೃಢೀಕರಿಸಿ ಜೋಡಣೆ ಮಾಡಬಹುದಾಗಿದೆ ಎಂದು ಹೇಳಿದೆ.

ಎಡ ಪಕ್ಷಗಳಿಂದ ನಾಳೆ ಪ್ರತಿಭಟನೆ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ವಿರೋಧಿಸಿ ಇದೇ 24ಕ್ಕೆ ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಒಕ್ಕೂಟ ತಿಳಿಸಿದೆ. 'ಕೇಂದ್ರ, ರಾಜ್ಯ ಸರ್ಕಾರಗಳು ಕಾರ್ಪೊರೇಟ್ ಕಂಪನಿಗಳ ಲೂಟಿಗೆ ಅವಕಾಶ ನೀಡಿ, ಜನರ ಗಮನ ಬೇರೆಡೆ ಸೆಳೆಯುವ ತಂತ್ರ ರೂಪಿಸುತ್ತಿವೆ. ಧರ್ಮದ ಆಧಾರದಲ್ಲಿ ಜನರನ್ನು ಒಡೆಯುವ ಕೆಲಸ ಮಾಡಲಾಗುತ್ತಿದೆ' ಎಂದು ಒಕ್ಕೂಟದ ಸದಸ್ಯ ಯು. ಬಸವರಾಜು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

CORRIGENDUM

Refer to the High Court Notice Published in Prajavani Newspaper on dated **06.08.2022**, please read the Case No. as **R.F.A No.1537/2010** instead of R.F.A. No: 1527/2010 and all other matter of same remain unchanged.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬೆಂಅಪ್ರಾ/ವಿಭೂಸ್ವಾಅ-4/ಡಾ॥ ಎಸ್.ಕೆ.ಎಲ್/98/2022-23

ದಿನಾಂಕ: 22.08.2022

ಸಾರ್ವಜನಿಕ ಪ್ರಕಟಣೆ

ಭೂಸ್ವಾಧೀನ ಕಾಯ್ದೆ 1894 ಕಲಂ 9 ಮತ್ತು 10 ರ ಮೇರೆಗೆ,

ಬೆಂಗಳೂರು, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, **ವೀರಸಾಗರ** ಗ್ರಾಮದಲ್ಲಿರುವ ಖಾತೆದಾರರು/ ಆಸಕ್ತದಾರರಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ;

ಈ ಕೆಳಗೆ ವಿವರಿಸಿರತಕ್ಕ ಜಮೀನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ **"RMP-2015 Road & Bye-Pass Road to Improve Connectivity in Dr. K. Shivarama Karantha Layout"**ಗೆ ಬೇಕಾಗಿರುವುದರಿಂದ ಸದರಿ ಜಮೀನನ್ನು ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ನಂ. 7661-63/2018 (Arising out of SLP 10216-10218/2018), ದಿನಾಂಕ: 12/07/2022 ರ ಆದೇಶದಂತೆ ಭೂಸ್ವಾಧೀನಪಡಿಸಲು ಸರ್ಕಾರದಿಂದ ಬಿ.ಡಿ.ಎ ಕಾಯ್ದೆ 1976 ಕಲಂ 19(1) ರಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/3/ಎಂಎನ್‌ಎಕ್ಸ್/2022(**E**), ದಿನಾಂಕ: 06/08/2022ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದ ಭಾಗ-03, ಸಂಚಿಕೆ ಸಂಖ್ಯೆ: 159, ಸಂಪುಟ 157, ಪುಟ ಸಂಖ್ಯೆ: 9314 ರಿಂದ 9339 ರವರೆಗೆ ದಿನಾಂಕ: 08/08/2022ರಂದು ಪ್ರಕಟಿಸಲಾಗಿರುತ್ತದೆ.

ಸದರಿ ವೀರಸಾಗರ ಗ್ರಾಮದ ಸರ್ವೆ ನಂ. 3/1, 3/2, 4/1, 4/3ಎ, 4/3ಬಿ, 4/4, 33/1, 33/2, 38, 40 ಹಾಗೂ ಗ್ರಾಮಠಾಣಾ ಸ್ವತ್ತಗಳಿಗೆ ಮೇಲೆ ನಿಮಗೆ ಇರಬಹುದಾದಂತಹ ಹಕ್ಕು ಭಾದ್ಯತೆಯ ಸ್ವಭಾವವನ್ನು ಮತ್ತು ಅದಕ್ಕೆ ನೀವು ಅಪೇಕ್ಷಿಸುವ ಪರಿಹಾರಕ್ಕೆ ಏನಾದರೂ ಆಕ್ಷೇಪಣೆ ಇದ್ದರೆ ಅದನ್ನೂ ಸಹ ತಿಳಿಸುವುದಕ್ಕಾಗಿ ನಿಮ್ಮಲ್ಲಿರಬಹುದಾದ ದಾಸ್ತಾವೇಜುಗಳೊಂದಿಗೆ ಸರಿಯಾಗಿ ಈ ಅಧಿಕಾರಿಯರವರ ರೂಬ ರೂಬ್ ಮೊಕ್ಕಾಂನಲ್ಲಿ ಖುದ್ದಾಗಿ ಅಥವಾ ಕ್ರಮವಾಗಿ ಮೊಖ್ತ್ಯಾರಿ ವಹಿಸಿದ ಏಜೆಂಟರ ಮುಖಾಂತರವಾಗಲಿ ಜಾರಿಯಾದ 15 ದಿನಗಳ ಒಳಗಾಗಿ ಹಾಜರಾಗಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕಾನೂನು ಅನುಸರಿಸಿ ಕ್ರಮಜರುಗಿಸಲಾಗುವುದು ಮತ್ತು ಸದರಿ ಜಮೀನಿನ ಮೇಲಾಗಲಿ/ ಅಥವಾ ಅದರ ಯಾವ ಭಾಗದ ಮೇಲಾಗಲಿ ಇತರರಿಗೆ ಇರಬಹುದಾದ ಭೋಗ್ಯ, ಆಧಾರ, ಹಿಡುವಳಿ ಅಥವಾ ಸಾಗುವಳಿ ಹಿಸ್ಸೆ ಅಥವಾ ಅನುಭವ ಮುಂತಾದ ಹಕ್ಕು ಭಾದ್ಯತೆಗಳನ್ನು ಸಾಧ್ಯವಾದ ಮಟ್ಟಿಗೂ ಕರಾರುವಕ್ಕಾಗಿ ತೋರಿಸುವಂತೆ ತಪಶೀಲ್ ನಮೂದಿಸಿ, ಒಂದು ಲಿಖಿತ ಹೇಳಿಕೆಯನ್ನು ಈ ನೋಟೀಸ್ ನಿಮಗೆ ಜಾರಿಯಾದ 15 ದಿನಗಳ ಒಳಗಾಗಿ ಈ ಕೆಳಕಾಣಿಸಿದ ಅಧಿಕಾರಿಯವರ ರೂಬರೂಬ್ ಹಾಜರ್ಪಡಿಸತಕ್ಕದ್ದಿರುತ್ತೆ.

ಸಹಿ/-ವಿಶೇಷ ಭೂಸ್ವಾಧೀನಾಧಿಕಾರಿಗಳು-4,
ಡಾ॥ ಕೆ.ಶಿವರಾಮಕಾರಂತ ಬಡಾವಣೆ, ಬೆಂ.ಅ.ಪ್ರಾ., ಬೆಂಗಳೂರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ

ಯುವಿಸಿಇಗೆ ವಿಷನ್ ಡಾಕ್ಯುಮೆಂಟ್

ನವೋದ್ಯಮ ಉತ್ತೇಜನಕ್ಕೆ ಲಾಂಛನ

ನವೋದ್ಯಮಗಳನ್ನು ಉತ್ತೇಜಿಸುವುದಕ್ಕೆ ಪೂರಕವಾಗಿ ನಗರದ ಪ್ರಮುಖ ಸ್ಥಳವೊಂದರಲ್ಲಿ ಲಾಂಛನವೊಂದನ್ನು ಅಳವಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು.

'ಬೆಂಗಳೂರು ದೇಶದಲ್ಲಿಯೇ ಅತಿ ಹೆಚ್ಚು ನವೋದ್ಯಮ ಮತ್ತು ಯೂನಿಕಾರ್ನ್‌ಗಳನ್ನು ಹೊಂದಿರುವ ನಗರ. ಈ ಕ್ಷೇತ್ರಕ್ಕೆ ಉತ್ತೇಜನ ನೀಡಲು ಯೂನಿಕಾರ್ನ್ ಚಿಹ್ನೆಯುಳ್ಳ ಲಾಂಛನ ಅಳವಡಿಸಬೇಕು' ಎಂದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು (ಯುವಿಸಿಇ) ಮಾದರಿ ಉನ್ನತ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸುವುದಕ್ಕೆ ಪೂರಕವಾಗಿ ಮುನ್ನೋಟ ದಾಖಲೆ (ವಿಷನ್ ಡಾಕ್ಯುಮೆಂಟ್) ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಯುವಿಸಿಇ ಅಭಿವೃದ್ಧಿ ಹಾಗೂ ರಾಜ್ಯದ ಐದು ಎಂಜಿನಿಯರಿಂಗ್ ಕಾಲೇಜುಗಳನ್ನು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕೆಐಟಿ) ಹೆಸರಿನಲ್ಲಿ ಮೇಲ್ದರ್ಜೆಗೇರಿಸುವ ಕುರಿತು ಯುವಿಸಿಇ ಆಡಳಿತ ಮಂಡಳಿ ಅಧ್ಯಕ್ಷ ಬಿ. ಮುತ್ತುರಾಮನ್ ಜತೆ ಸೋಮವಾರ ನಡೆದ ಸಭೆಯಲ್ಲಿ ಅವರು ಈ ಸೂಚನೆ ನೀಡಿದರು.

ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿ ಕೈಗೊಳ್ಳಬಹುದಾದ ಯೋಜನೆಗಳಿಗೆ ಗುರಿ ನಿಗದಿಪಡಿಸಬೇಕು. ಅತ್ಯುತ್ತಮ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಕೆಲಸ ಮಾಡುವುದಕ್ಕೂ ಪ್ರಸ್ತಾವನೆಗಳನ್ನು ಸಿದ್ಧಪಡಿಸಬೇಕು. ಯುವಿಸಿಇ ಯಶಸ್ಸು ಇತರ ಶಿಕ್ಷಣ ಸಂಸ್ಥೆಗಳಿಗೆ ಮಾದರಿಯಾಗುವಂತೆ ಮುನ್ನೋಟ ವರದಿ ಸಿದ್ಧಪಡಿಸಿ ಎಂದರು.

ಕೆಐಟಿಗೆ ಆಯ್ಕೆಯಾಗುವ ಪ್ರತಿ ಸಂಸ್ಥೆಗೂ ಸಮಿತಿಯನ್ನು ರಚಿಸಬೇಕು. ಮೌಲ್ಯ ಹಾಗೂ ನೈತಿಕತೆಯ ಆಧಾರದ ಮೇಲೆ ಈ ಸಂಸ್ಥೆಗಳನ್ನು ಕಟ್ಟಬೇಕು. ಆಯಾ ಪ್ರದೇಶದಲ್ಲಿ ದೂರಗಾಮಿ ಪರಿಣಾಮವನ್ನು ಉಂಟು ಮಾಡುವಂತೆ ಈ ಸಂಸ್ಥೆಗಳನ್ನು ರೂಪಿಸಬೇಕು ಎಂದು ಸೂಚಿಸಿದರು.

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥ ನಾರಾಯಣ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಮತ್ತು ನವೋದ್ಯಮಗಳಿಗೆ ಸಂಬಂಧಿಸಿದ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ಸಭೆಯಲ್ಲಿದ್ದರು.

ಅಲೆಮಾರಿಗಳಿಗೆ ಗ್ರಂಥಾಲಯ
ಸರ್ಕಾರಕ್ಕೆ ಹೈಕೋರ್ಟ್ ಗಡುವು

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳಿಗೆ ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸುವ ಕುರಿತಂತೆ ತುರ್ತು ಕ್ರಮ ಕೈಗೊಳ್ಳಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಕುರಿತಂತೆ, 'ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಸಂಘ'ದ ಅಧ್ಯಕ್ಷ ರಾಮಸ್ವಾಮಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳಿಗೆ ಗ್ರಂಥಾಲಯಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ ತಾತ್ವಿಕ ಅನುಮೋದನೆ ನೀಡಿದೆ. ಕೋವಿಡ್-19 ಹಾಗೂ ಆರ್ಥಿಕ ಮುಗ್ಗಟ್ಟಿನ ಕಾರಣಕ್ಕೆ ಸರ್ಕಾರದ ತೀರ್ಮಾನವನ್ನು ತಡೆಹಿಡಿಯಲಾಗಿತ್ತು. ಈಗ, ಅದನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು' ಎಂದು ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ಗ್ರಂಥಾಲಯಗಳನ್ನು ಸ್ಥಾಪಿಸುವ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ 12 ವಾರಗಳ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ವಕೀಲ ವಿ. ಶ್ರೀನಿವಾಸ ವಾದ ಮಂಡಿಸಿದರು.



ಬೆಂಗಳೂರಿನ ಕಬ್ಬನ್ ರಸ್ತೆಯ ವೃತ್ತದಲ್ಲಿ ಸೋಮವಾರ ಸಂಜೆ ಸುರಿದ ತುಂತುರು ಮಳೆಯ ನಡುವೆ ಸಾಗಿದ ವಾಹನಗಳು ಪ್ರಜಾವಾಣಿ ಚಿತ್ರ– ಪ್ರಶಾಂತ್ ಎಚ್‌.ಜಿ.

ನಗರದ ವಿವಿಧೆಡೆ ಮಳೆ

ಬೆಂಗಳೂರು: ನಗರದ ವಿವಿಧ ಬಡಾವಣೆಗಳಲ್ಲಿ ಸೋಮವಾರ ಮಧ್ಯಾಹ್ನ ಮತ್ತುಜ ಸಂಜೆ ಸಾಧಾರಣ ಮಳೆಯಾಗಿದೆ.

ಪೀಣ್ಯ, ಜಾಲಹಳ್ಳಿ, ದಾಸರಹಳ್ಳಿ, ಸುಂಕದಕಟ್ಟೆ, ಶ್ರೀರಾಮಪುರ, ಯಶವಂತಪುರ ಹಾಗೂ ಮಲೇಶ್ವರದ ಸುತ್ತಮುತ್ತ ಮಧ್ಯಾಹ್ನ ಮಳೆಯಾಗಿತ್ತು.

ಸಂಜೆ 5.30ರ ಸುಮಾರಿಗೆ ಎಂ.ಜಿ. ರಸ್ತೆ, ಕೆಂಗೇರಿ, ಕೆ.ಆರ್. ಮಾರುಕಟ್ಟೆ, ಬಿಬಿಎಂಪಿಯ ಸುತ್ತಮುತ್ತ, ಜೆ.ಸಿ. ರಸ್ತೆ ಮತ್ತು ಕೋರಮಂಗಲ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಜೈಪುರದಲ್ಲಿ ಜೂಜು ಕೋಲಾರ ಇನ್‌ಸ್ಪೆಕ್ಟರ್ ಆಂಜಿನಪ್ಪ ಅಮಾನತು

ಕೋಲಾರ: ರಾಜಸ್ತಾನದ ಜೈಪುರ ರೆಸಾರ್ಟ್‌ನಲ್ಲಿನ ಜೂಜು ಅಡ್ಡೆ ಮೇಲೆ ಅಲ್ಲಿನ ಪೊಲೀಸರು ನಡೆಸಿದ ದಾಳಿಯಲ್ಲಿ ಬಂಧಿತರಾಗಿರುವ ಕೋಲಾರದ ಇನ್‌ಸ್ಪೆಕ್ಟರ್ ಆಂಜಿನಪ್ಪ ಅವರನ್ನು ಅಮಾನತುಗೊಳಿಸಲಾಗಿದೆ.

'ವಿಷಯ ಗೊತ್ತಾಗುತ್ತಿದ್ದಂತೆ ಆಂಜಿನಪ್ಪ ಅವರನ್ನು ಅಮಾನತುಗೊಳಿಸಿದ್ದೇವೆ. ಇನ್ನುಳಿದವರ ಬಂಧನದ ಬಗ್ಗೆ ಮಾಹಿತಿ ಇಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ದೇವರಾಜ್ ಸೋಮವಾರ 'ಪ್ರಜಾವಾಣಿ'ಗೆ ತಿಳಿಸಿದರು.

ಕೋಲಾರದ ಸೈಬರ್ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಆಗಿ ಅವರು ಕೆಲಸ ಮಾಡುತ್ತಿದ್ದರು. ಜೂಜು ಅಡ್ಡೆಯಲ್ಲಿದ್ದರು ಎನ್ನಲಾದ ಕೋಲಾರದ ಶಿಕ್ಷಕ, ವ್ಯಾಪಾರಿ, ಆರ್‌ಟಿಒ ಸಿಬ್ಬಂದಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಪನೋಂದಣಾಧಿಕಾರಿಯೊಬ್ಬರನ್ನು ಬಂಧಿಸಿರುವುದು ತಿಳಿದುಬಂದಿದೆ.

ದಾಳಿಯ ವೇಳೆ ಕರ್ನಾಟಕವಲ್ಲದೇ ಹರಿಯಾಣ, ಪಂಜಾಬ್, ಉತ್ತರಪ್ರದೇಶ, ಮಹಾರಾಷ್ಟ್ರದ 13 ಮಹಿಳೆಯರು ಸೇರಿದಂತೆ 84 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಎಲ್‌ಐಸಿ, ಬಜಾಜ್ ಹೌಸಿಂಗ್ ಸಾಲದ ಬಡ್ಡಿ ಹೆಚ್ಚಳ

ಮುಂಬೈ (ಪಿಟಿಐ): ಬಜಾಜ್ ಹೌಸಿಂಗ್ ಫೈನಾನ್ಸ್ ಮತ್ತು ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಕಂಪನಿಗಳು ಸಾಲದ ಮೇಲಿನ ಬಡ್ಡಿ ದರವನ್ನು ಶೇಕಡ 0.50ರಷ್ಟು ಹೆಚ್ಚಳ ಮಾಡಿವೆ.


ಆರ್‌ಬಿಐನಿಂದ ರೆಪೊ ದರ ಹೆಚ್ಚಳಕ್ಕೆ ಅನುಗುಣವಾಗಿ ಕಂಪನಿಗಳು ಈ ನಿರ್ಧಾರ ತೆಗೆದುಕೊಂಡಿವೆ. ಹಣದುಬ್ಬರವನ್ನು ನಿಯಂತ್ರಿಸಲು ಮೇ ತಿಂಗಳಿನಿಂದ ಈವರೆಗೆ ರೆಪೊ ದರವನ್ನು ಒಟ್ಟು ಶೇ 1.40ರಷ್ಟು ಹೆಚ್ಚಿಸಲಾಗಿದೆ.

ಬಜಾಜ್ ಹೌಸಿಂಗ್ ಫೈನಾನ್ಸ್, ವೇತನದಾರರು ಮತ್ತು ವೃತ್ತಿಪರರಿಗೆ ಶೇ 7.70ರಷ್ಟು ಬಡ್ಡಿದರ ನಿಗದಿಪಡಿಸಿದೆ.

ಎಲ್‌ಐಸಿ ಹೌಸಿಂಗ್ ಫೈನಾನ್ಸ್ ತನ್ನ ಪ್ರೈಮ್ ಲೆಂಡಿಂಗ್ ರೇಟ್ ಅನ್ನು ಶೇ 0.50ರಷ್ಟು ಹೆಚ್ಚಿಸಿದೆ. ಇದರಿಂದ ಗೃಹ ಸಾಲಗಳ ಹೊಸ ಬಡ್ಡಿದರವು ಶೇ 8 ರಿಂದ ಆರಂಭ ಆಗಲಿದೆ.

ನಿಧನ ವಾರ್ತೆ

ಅಣ್ಣಪ್ಪ ಗೌಡ



ಬೆಂಗಳೂರು: ನಿವೃತ್ತ ಪಶು ಮೇಲ್ವಿಚಾರಕ ಡಾ. ಅಣ್ಣಪ್ಪ ಗೌಡ (87) ಸೋಮವಾರ ಮಧ್ಯಾಹ್ನ ನಿಧನರಾದರು.

ತೀರ್ಥಹಳ್ಳಿ ತಾಲ್ಲೂಕಿನ ನಾಗಲಾಪುರದವರಾದ ಅಣ್ಣಪ್ಪ ಗೌಡರಿಗೆ ಒಬ್ಬ ಮಗ, ಮೂವರು ಹೆಣ್ಣುಮಕ್ಕಳು ಇದ್ದಾರೆ. ಮಂಗಳವಾರ ಮಧ್ಯಾಹ್ನ ಹೆಬ್ಬಾಳದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಬೆಂಗಳೂರಿನ ಸುಲ್ತಾನ್ ಪಾಳ್ಯದಲ್ಲಿ ವಾಸವಾಗಿದ್ದ ಅಣ್ಣಪ್ಪ ಗೌಡರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು. 'ಅಂತಃಕರಣ' ಎಂಬ ಆತ್ಮಕಥೆಯನ್ನೂ ಇತ್ತೀಚೆಗೆ ಪ್ರಕಟಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands Call:7411265189

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/9606701007

WANTED BUSINESS Partner Veg Hotel 1 Crore Investment Monthly Income 5 Lakhs Contact: 8892501007/ 9606701007

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

BANKING SECTOR Jobs. Office work, Field work. Telecaller Qualification: SSLC,PUC and Degree. Salary: 20k. 7483098280

Multiple Vacancy

REQUIRED TEAMLEADER, Telecaller, & FieldExecutive For BankLoan collection. Direct recruitment to company Contact:- 9620206756, 9620200756.

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

PERSONAL

Change of Name

CHAVAN ADINATH SOPAN, 14833060M, HAV, Vill- Deolali Pravara, Rahuri, Ahmednagar, Maharashtra, changed Son's name MAYUR to MAYUR ADINATH CHAVAN, 22/08/2022 Notary K.V. Mani, Bangalore

RUBEE DEVI, Wife/o, 6497457F, NK/ASH, SANDEEP SINGH, Vill- Sarurpur Kalan, Baraut, Baghpat, Uttar Pradesh, changed name from RUBEE DEVI to RUBY DEVI 19/08/2022 Notary K.V. Mani, Bangalore

CHAVAN ADINATH SOPAN, 14833060M, HAV, Vill- Deolali Pravara, Rahuri, Ahmednagar, Maharashtra, changed Son's name RAJ to RAJ ADINATH CHAVAN, 22/08/2022, Notary K.V. Mani Bangalore

NAGA AMMA, Mother/o, 14832243W, SEP/MT, RAMA SUBBA REDDY GURAKA, Vill - Somidevipalli, Giddalur, Prakasam, Andhra Pradesh, changed name NAGA AMMA to GURAKA NAGAMMA 19/08/2022 Notary K.V. Mani Bangalore

672379H SUB K. Baskar 1ATC daughter name service record DIVYA instead of DIVYA B notary K.V. Mani, Bangalore.

I, BABY Smitha Prathap residing at no. 15, Bourdillion Road, Frazer town, Bangalore- 560005 have changed my name to Smitha Chavan vide affidavit dated 19/08/2022 before notary. L. Gopalakrishna.

I, JOSE R/o. No. 330, 10th Cross, M.V.Garden, Ulsoor, Bangalore, have changed my name to VIMAL. J. affidavit dated 22.08.2022, notary A.R. Muneer Ahmed, Bangalore.

ಬನಶಂಕರಿ ದೇಗುಲ ಅಭಿವೃದ್ಧಿಗೆ 'ಮಾಸ್ಟರ್ ಪ್ಲಾನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಇಲಾಖೆಯ 'ದೈವಸಂಕಲ್ಪ' ಯೋಜನೆಯಡಿ ನಗರದ ಬನಶಂಕರಿ ದೇವಸ್ಥಾನದ ಆವರಣದಲ್ಲಿರುವ ವರಪ್ರಸಾದ ಆಂಜನೇಯ ದೇವಸ್ಥಾನದ ಪುನರ್‌ನಿರ್ಮಾಣ, ಅನ್ನದಾಸೋಹ ಭವನದ ಮುಂಭಾಗ ಶಾಶ್ವತ ಚಾವಣಿ ನಿರ್ಮಾಣ, ಅನ್ನಪ್ರಸಾದ ವಿತರಣಾ ಕೌಂಟರ್ ಮತ್ತು ಆಸನಗಳ ವ್ಯವಸ್ಥೆಯ ಜೊತೆಗೆ ಲಿಫ್ಟ್ ಅಳವಡಿಸಲು ತೀರ್ಮಾನಿಸಲಾಗಿದೆ.

ಈ ಸಂಬಂಧ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್‌ವೊಂದನ್ನು ರೂಪಿಸುವಂತೆ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅಧಿಕಾರಿಗಳಿಗೆ ಸೂಚಿಸಿದರು.

ಕಂದಾಯ ಸಚಿವ ಆರ್.ಅಶೋಕ ಜತೆ ಸೋಮವಾರ ದೇವಸ್ಥಾನದ ಅಭಿವೃದ್ಧಿ ವಿಚಾರವಾಗಿ ಸಭೆ ನಡೆಸಿದರು.

ಬಳಿಕ ಅವರು ಹಿರಿಯ ಅಧಿಕಾರಿಗಳ ಜತೆಗೆ ಬನಶಂಕರಿ ದೇವಸ್ಥಾನಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.


ಬನಶಂಕರಿ ದೇವಸ್ಥಾನದ ದಾಸೋಹ ಭವನದಲ್ಲಿ ಬೇಳೆ–ಕಾಳುಗಳನ್ನು ಪರಿಶೀಲಿಸುತ್ತಿರುವ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ. ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ ಮತ್ತು ಇತರರು ಇದ್ದಾರೆ.

ಈ ದೇವಸ್ಥಾನವನ್ನು 'ದೈವಸಂಕಲ್ಪ' ಯೋಜನೆಯ ಮೊದಲ ಹಂತದ ದೇವಾಲಯಗಳ ಪಟ್ಟಿಯಲ್ಲಿ ಸೇರ್ಪಡೆ ಗೊಳಿಸಲಾಗಿದೆ. ದೇವಾಲಯದ ಖಾತೆಯಲ್ಲಿ ₹48 ಕೋಟಿ ಇದ್ದು, ಈ ಹಣವನ್ನು ಬಳಸಿ ಭಕ್ತರ ಸ್ನೇಹಿ ಪರಿಸರವನ್ನು ನಿರ್ಮಾಣ ಮಾಡಲು ಯೋಜನೆ ರೂಪಿಸಬೇಕು ಎಂದು ಜೊಲ್ಲೆ ಹೇಳಿದರು.

ದೇವಸ್ಥಾನದ ಆವರಣದಲ್ಲಿರುವ 1915ರಲ್ಲಿ ನಿರ್ಮಾಣಗೊಂಡಿದ್ದ ವರಪ್ರಸಾದ ಆಂಜನೇಯ ದೇವಸ್ಥಾನ ಈಗ ಶಿಥಿಲಾವಸ್ಥೆಯಲ್ಲಿದೆ.

ಅದರ ಜೀರ್ಣೋದ್ಧಾರಕ್ಕಾಗಿ ಮೂಲ ದೇವಾಲಯದ ಗರ್ಭಗುಡಿಯ ಹಿಂಭಾಗ ಅಲಂಕಾರ ಮೂರ್ತಿಯಾಗಿ ಮತ್ತೊಂದು ಹೊಸ ಮೂರ್ತಿ ಪ್ರತಿಷ್ಠಾಪಿಸಲು ಮತ್ತು ಮೂಲ ದೇವಾಲಯದ ಗರ್ಭಗುಡಿ, ಪ್ರಾಂಗಣಗಳ ವಿಸ್ತೀರ್ಣವನ್ನು ವಿನ್ಯಾಸಗೊಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರಿಗೆ ದರ್ಶನಕ್ಕೆ ಅನುಕೂಲಕರವಾಗುವ ರೀತಿಯಲ್ಲಿ ನಕ್ಷೆಯನ್ನು ತಯಾರಿಸುವಂತೆಯೂ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅನ್ನದಾಸೋಹ ಭವನದ ಮುಂಭಾಗ ಶಾಶ್ವತ ಚಾವಣಿ ನಿರ್ಮಾಣ, ಅನ್ನಪ್ರಸಾದ ವಿತರಣಾ ಕೌಂಟರ್ ಮತ್ತು ಆಸನಗಳ ನಿರ್ಮಾಣಕ್ಕಾಗಿ ಯೋಜನೆ ರೂಪಿಸಬೇಕು. ದೇವಾಲಯದ ಹಿಂಭಾಗದಲಿರುವ ಕಾಂಪೌಂಡ್ ಅನ್ನು ಎತ್ತರಿಸುವುದರ ಜೊತೆಗೆ ಗಾಳಿ-ಬೆಳಕು ಸರಾಗವಾಗಿ ಒಳಬರಲು ಕಾಂಪೌಂಡಿನ ಮೇಲ್ಭಾಗದಲ್ಲಿ ಲೂವರ್ಸ್‌ಗಳನ್ನು ಅಳವಡಿಸಬೇಕು. ದಾಸೋಹ ಭವನಕ್ಕೆ ನೆಲ ಮಾಳಿಗೆಯಿಂದ ಲಿಫ್ಟ್ ವ್ಯವಸ್ಥೆಯನ್ನೂ ಮಾಡಬೇಕು ಎಂದು ಸಲಹೆ ನೀಡಿದರು.

ದೇವಸ್ಥಾನದ ಆವರಣದಲ್ಲಿರುವ ಸಾರ್ವಜನಿಕ ಶೌಚಾಲಯ ಕಟ್ಟಡ ತುಂಬ ಹಳೆಯದಾಗಿದೆ. ಪುರುಷರು ಮತ್ತು ಮಹಿಳೆಯರಿಗೆ ಒಂದೇ ಪ್ರವೇಶವಿದೆ. ಇದರಿಂದ ಭಕ್ತರಿಗೆ ಅನನುಕೂಲವಾಗುತ್ತಿದೆ. ಆದ್ದರಿಂದ ಆಧುನಿಕ ಮಾದರಿಯ ಶೌಚಾಲಯ ನಿರ್ಮಿಸಬೇಕು. ಇದಕ್ಕೆ ಅಂದಾಜುಪಟ್ಟಿ ಸಲ್ಲಿಸುವಂತೆಯೂ ಅವರು ಸೂಚಿಸಿದರು.

ಸಭೆಯಲ್ಲಿ ಮುಜರಾಯಿ ಆಯುಕ್ತೆ ರೋಹಿಣಿ ಸಿಂಧೂರಿ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಬನಶಂಕರಿ ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ಕೆ.ಪದ್ಮಾ ಹಾಗೂ ಇತರರು ಇದ್ದರು.

ಮಂಗನ ಕಾಟಕ್ಕೆ ಎಸ್‌ಒಪಿ: ಪಿಐಎಲ್ ವಿಲೇವಾರಿ

ಬೆಂಗಳೂರು: 'ಮಂಗಗಳನ್ನು ಸೆರೆ ಹಿಡಿಯುವ ಮತ್ತು ಪುನರ್ವಸತಿ ಕಲ್ಪಿಸುವ ಕುರಿತಾದ ನಿರ್ದಿಷ್ಟ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು' ಎಂದು ಹೈಕೋರ್ಟ್, ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸಿದೆ.

ಹಾಸನ ಜಿಲ್ಲೆಯ ಬೇಲೂರು ಬಳಿ ನಡೆದ ಮಂಗಗಳ ಮಾರಣ ಹೋಮಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂ-ಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಮಂಗಗಳ ಹಾವಳಿ ತಡೆಗೆ ಎಸ್‌ಒಪಿ ಜಾರಿಗೊಳಿಸಲಾಗಿದೆ ಎಂದು ಸರ್ಕಾರದ ಪರ ವಕೀಲರು ತಿಳಿಸಿದ್ದಾರೆ. ಹಾಗಾಗಿ, ಅರಣ್ಯ ಇಲಾಖೆ, ಬಿಬಿಎಂಪಿ, ನಗರ ಸ್ಥಳೀಯ ಸಂಸ್ಥೆಗಳು ಈ ಕುರಿತ ಮಾರ್ಗಸೂಚಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು'ಎಂದು ನಿರ್ದೇಶಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ವನಿತೆಯರಿಗಾಗಿ 'ಭೂಮಿಕಾ ಕ್ಲಬ್'

ಬೆಂಗಳೂರು: ಮಹಿಳೆಯರ ಜೀವನ ಶೈಲಿಯನ್ನು ಉತ್ಕೃಷ್ಟಗೊಳಿಸಲು 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವಿಶೇಷ ವೇದಿಕೆ 'ಭೂಮಿಕಾ ಕ್ಲಬ್' ನಿರ್ಮಿಸಿದ್ದು, ಶುಕ್ರವಾರ (ಆಗಸ್ಟ್ 26) ಮಧ್ಯಾಹ್ನ 2.30ಕ್ಕೆ ಉದ್ಘಾಟನೆಯಾಗಲಿದೆ.

ಅಶೋಕ ನಗರದಲ್ಲಿರುವ ಸೇಂಟ್ ಜೋಸೆಫ್ಸ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಗಾಯಕಿ ಎಂ.ಡಿ. ಪಲ್ಲವಿ ಹಾಗೂ ಕಿರುತೆರೆ ಕಲಾವಿದೆ ರಂಜನಿ ರಾಘವನ್ 'ಭೂಮಿಕಾ ಕ್ಲಬ್' ಉದ್ಘಾಟಿಸಲಿದ್ದಾರೆ.

ಕೂದಲು ಮತ್ತು ಚರ್ಮ ಆರೋಗ್ಯದ ಬಗ್ಗೆ ಮಣಿಪಾಲ್ ಆಸ್ಪತ್ರೆಯ ವೈದ್ಯರಾದ ಡಾ. ದೀಪಾ ಕೃಷ್ಣಮೂರ್ತಿ ಹಾಗೂ ಡಾ. ಸುಚಿಸ್ಮಿತಾ ರಾಜಮಾನ್ಯ ಅರಿವು ಮೂಡಿಸುವರು. ಫ್ಯಾಷನ್ ಬಗ್ಗೆ ಶಚಿನ ಹೆಗ್ಗಾರ್, ಮೇಕಪ್ ಬಗ್ಗೆ ಸುಷ್ಮಾ ನಾಣಯ್ಯ ಮಾತನಾಡಲಿದ್ದಾರೆ. ತಾಜ್ ಹೋಟೆಲ್‌ನ ಬಾಣಸಿಗ ಆ್ಯಂಡ್ರಿಯಾ ಜುಡಿತ್ ಡಯಾಸ್ ಅವರು ಅಡುಗೆ ಬಗ್ಗೆ ತಿಳಿಸಿಕೊಡಲಿದ್ದು, ಅಶ್ವಿನಿ ರವೀಂದ್ರ ಅವರಿಂದ ಸ್ಟ್ಯಾಂಡಪ್ ಕಾಮಿಡಿ ನಡೆಯಲಿದೆ. ವಿವಿಧ ಸ್ಪರ್ಧೆಗಳನ್ನು ನಡೆಸಲಾಗುತ್ತದೆ.

ಹೆಸರು ನೋಂದಾಯಿಸಿದವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ. ಐವರು ಅದೃಷ್ಟಶಾಲಿ ನೋಂದಾಯಿತರಿಗೆ ₹15 ಸಾವಿರ ಮೌಲ್ಯದ ಎಒ ಸ್ಮಿತ್ ವಾಟರ್ ಪ್ಯೂರಿಫೈರ್ ಗೆಲ್ಲುವ ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ. ಸ್ಮೂರ್ ಚಾಕಲೇಟ್‌ನಿಂದ ಬಹುಮಾನ ಹಾಗೂ ಉಡುಗೊರೆ ಗೆಲ್ಲುವ ಅವಕಾಶವೂ ಉಂಟು.

'ಕರ್ನಾಟಕ ಸಾಮರಸ್ಯದ ನೆಲೆವೀಡು'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಭಾರತ ಮತ್ತು ಕರ್ನಾಟಕವು ಸಾಮರಸ್ಯ ಮತ್ತು ವಿವಿಧ ಧರ್ಮಗಳ ಸಾಮರಸ್ಯದ ನೆಲೆವೀಡಾಗಿದೆ. ಹೀಗಾಗಿ ಧರ್ಮಗಳ ವೈವಿಧ್ಯ ನಮ್ಮಲ್ಲಿ ಶ್ರೀಮಂತವಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಮಲ್ಲೇಶ್ವರದ 8 ನೇ ಮುಖ್ಯರಸ್ತೆಯಲ್ಲಿ ಜೀರ್ಣೋದ್ಧಾರ ಮಾಡಿರುವ ಕ್ರೈಸ್ಟ್‌ದ ಕಿಂಗ್ ಚರ್ಚ್ ಅನ್ನು ಉದ್ಘಾಟಿಸಿ ಮಾತನಾಡಿದರು.

'ಶಾಂತಿ ಮತ್ತು ಕರುಣೆಗಳನ್ನು ಬೋಧಿಸಿದ ಏಸು ಕ್ರಿಸ್ತನ ಪ್ರಾರ್ಥನೆಗೆ ಈ ಆಲಯ ಭವ್ಯವಾಗಿ ತಲೆ ಎತ್ತಿರುವುದು ಐತಿಹಾಸಿಕ ದಿನವಾಗಿದೆ. ಭಾರತದಲ್ಲಿ ಇರುವಷ್ಟು ಧಾರ್ಮಿಕ ಪರಿಸರ ಬೇರೆಲ್ಲೂ ಇಲ್ಲ. ಇದು ಇಡೀ ಜಗತ್ತಿಗೆ ಮಾದರಿಯಾಗಿದೆ. ನಾವೆಲ್ಲರೂ ವಿಶ್ವ ಮಾನವರಾಗಬೇಕು' ಎಂದು ಅವರು ಹೇಳಿದರು.


ಮಲ್ಲೇಶ್ವರದಲ್ಲಿರುವ ವೇಣುಗೋಪಾಲ ಕೃಷ್ಣ ದೇವಸ್ಥಾನದಲ್ಲಿ ಸಚಿವ ಡಾ.ಸಿ.ಎನ್ ಅಶ್ವತ್ಥ ನಾರಾಯಣ ಸೋಮವಾರ ಕಲ್ಯಾಣಿಯನ್ನು ಉದ್ಘಾಟಿಸಿ, ತೆಪ್ಪೋತ್ಸವದಲ್ಲಿ ಪಾಲ್ಗೊಂಡಿದ್ದರು

ಕಾರ್ಯಕ್ರಮದಲ್ಲಿ ಆರ್ಚ್ ಬಿಷಪ್ ರೆ.ಪೀಟರ್ ಮಚಾಡೋ, ಆರ್ಚ್ ಬಿಷಪ್ ಎಮಿರೈಟಸ್ ರೆ.ಬರ್ನಾರ್ಡ್ ಮೊರಾಸ್, ರೆ.ಫಾ. ನೋರ್ಮನ್ ಬರ್ನಾರ್ಡ್ ಮುಂತಾದವರು ಇದ್ದರು. ಕಾರ್ಯಕ್ರಮದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಜಯನಗರ ಆಸ್ಪತ್ರೆಗೆ ₹ 5 ಕೋಟಿ ಅನುದಾನ: ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ಸಾರ್ವಜನಿಕ ಆಸ್ಪತ್ರೆ ಅಭಿವೃದ್ಧಿಗೆ ₹ 5 ಕೋಟಿ ಅನುದಾನ ಒದಗಿಸುವುದಾಗಿ ಆರೋಗ್ಯ ಸಚಿವ ಸುಧಾಕರ್ ಭರವಸೆ ನೀಡಿದರು.

ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿ, ಆಸ್ಪತ್ರೆ ಅಭಿವೃದ್ಧಿ ಕುರಿತು ಅಧಿಕಾರಿಗಳ ಜತೆ ಚರ್ಚಿಸಿದರು.

ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಭೇಟಿಗೆ ಆನ್‌ಲೈನ್ ಮೂಲಕ ಅನುಮತಿ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ವೈದ್ಯರು ಗುಣಮಟ್ಟಕ್ಕೆ ಆದ್ಯತೆ ನೀಡಬೇಕು. ಉತ್ತಮ ಸೇವೆ ಒದಗಿಸಬೇಕು. ಮತ್ತೊಮ್ಮೆ ಪರಿಶೀಲನೆ ನಡೆಸಿ, ಗುರಿ ತಲುಪಿದ ಕುರಿತು ಖಾತ್ರಿ ಮಾಡಿಕೊಳ್ಳಲಾಗುವುದು. ಅನುದಾನವನ್ನು ಆಸ್ಪತ್ರೆಯಲ್ಲಿ ಚಾವಣಿ ಸೇರಿದಂತೆ ಕೆಲವೆಡೆ ದುರಸ್ತಿ ಕಾರ್ಯಗಳಿಗೆ ಬಳಸಿಕೊಳ್ಳಬೇಕು ಎಂದರು.

51 ಹಾಸಿಗೆಗಳ ಐಸಿಯು ಇದೆ. ಕೋವಿಡ್ ಬಳಿಕ ಹಾಸಿಗೆಗಳ ಸಂಖ್ಯೆ ಹೆಚ್ಚಿಸಲಾಗಿದೆ. ಇದಕ್ಕೆ ಪೂರಕವಾಗಿ ಅಗತ್ಯ ಸಿಬ್ಬಂದಿ ನೀಡಲಾಗುವುದು. ಕಾಯಂ ಸಿಬ್ಬಂದಿ ನೇಮಕಕ್ಕೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗುವುದು. ಕೀಲು, ಮೂಳೆ ವಿಭಾಗದಲ್ಲಿ ನಾಲ್ವರು ತಜ್ಞರು ಇದ್ದರೂ, ನಿತ್ಯ 40 ರೋಗಿಗಳಿಗೆ ಮಾತ್ರ ಚಿಕಿತ್ಸೆ ದೊರೆಯುತ್ತಿದೆ.

ಈ ಸಂಖ್ಯೆ 100 ತಲುಪಬೇಕು. ವಿವಿಧ ವಿಭಾಗಗಳ ಮಧ್ಯೆ ಸಮನ್ವಯತೆ ತರಬೇಕು. ಪ್ರಸೂತಿ ವಿಭಾಗದಲ್ಲಿ ಕೆಲ ದೂರುಗಳಿವೆ. ಪ್ರತಿ ವಿಭಾಗಗಳ ಮುಖ್ಯಸ್ಥರಿಗೆ ನಿಗದಿತ ಗುರಿ ನೀಡಲಾಗಿದೆ. ಜನರು ಖಾಸಗಿ ಆಸ್ಪತ್ರೆಗೆ ಹೋಗದಂತೆ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಲಂಚ ಪಡೆದ ಹೊರಗುತ್ತಿಗೆ ವೈದ್ಯರೊಬ್ಬರ ವಿರುದ್ಧ ತನಿಖೆ ನಡೆಯುತ್ತಿದೆ. ತಕ್ಷಣ ಕೆಲಸದಿಂದ ವಜಾಗೊಳಿಸಲು ಸೂಚಿಸಲಾಗಿದೆ. ರಾಜ್ಯದ ಬೇರೆ ಆಸ್ಪತ್ರೆಗಳಿಗೂ ಭೇಟಿ ನೀಡಲಾಗುವುದು ಎಂದು ಹೇಳಿದರು.

ಜಯನಗರ ಶಾಸಕಿ ಸೌಮ್ಯಾ ರೆಡ್ಡಿ, ಆರೋಗ್ಯ ಇಲಾಖೆ ಆಯುಕ್ತ ಡಿ.ರಂದೀಪ್ ಇದ್ದರು.

ಬೆದರಿಕೆ ನಡುವೆಯೂ ಟಾರ್ಪಾಲ್ ವಿತರಿಸಿದ ಕಾಂಗ್ರೆಸ್ ನಾಯಕಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಲಕ್ಷ್ಮಿದೇವಿ ನಗರ ವಾರ್ಡ್‌ನ ತ್ಯಾಗಿನಗರ ಕ್ವಾರ್ಟರ್ಸ್ ಬಳಿ ಶೆಡ್ಡಿನಲ್ಲಿ ವಾಸ ಮಾಡುತ್ತಿದ್ದ ಕುಟುಂಬಗಳಿಗೆ ಕಾಂಗ್ರೆಸ್ ನಾಯಕಿ ಎಚ್.ಕುಸುಮಾ ಅವರು ಟಾರ್ಪಾಲ್ ನೀಡುವ ಸಮಯದಲ್ಲಿ ತಡೆಯೊಡ್ಡಿ, ಅಡ್ಡಿಪಡಿಸಿದ ಘಟನೆ ಭಾನುವಾರ ನಡೆದಿದೆ.

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಲಿ ತ್ಯಾಗಿನಗರ ಕ್ವಾರ್ಟರ್ಸ್ ನೆಲಸಮ ಮಾಡಿ, ಹೊಸ ಕಟ್ಟಡಗಳನ್ನು ನಿರ್ಮಿಸಲು ಫಲಾನುಭವಿಗಳನ್ನು ಖಾಲಿ ಮಾಡಿಸಲಾಗಿತ್ತು.

280 ಬಡ ಕುಟುಂಬಗಳಿಗೆ ತಾತ್ಕಾಲಿಕ ಶೆಡ್‌ಗಳನ್ನು ಪಕ್ಕದ ಜಾಗದಲ್ಲೇ ನಿರ್ಮಿಸಿಕೊಳ್ಳಲು ಅನುಮತಿ ನೀಡಲಾಗಿತ್ತು. ಮಳೆ ಬಂದಾಗ ಶೆಡ್‌ಗಳಲ್ಲಿ ನೀರು ಸೋರುತ್ತಿತ್ತು. ಈ ಬಗ್ಗೆ ನಿವಾಸಿಗಳು ಕಾಂಗ್ರೆಸ್ ಮುಖಂಡರಲ್ಲಿ ಮನವಿ ಮಾಡಿದರು.

ಹೀಗಾಗಿ ಕುಸುಮಾ ಟಾರ್ಪಾಲ್ ವಿತರಣೆ ಮಾಡಲು ಮುಂದಾದರು.


ತ್ಯಾಗಿನಗರ ಕ್ವಾರ್ಟರ್ಸ್ ಬಡವರಿಗೆ ಕಾಂಗ್ರೆಸ್ ನಾಯಕಿ ಎಚ್.ಕುಸುಮಾ ಅವರು ವೈಯಕ್ತಿಕವಾಗಿ ಉಚಿತ ಟಾರ್ಪಾಲ್‌ಗಳನ್ನು ವಿತರಿಸಿದರು. ಮುಖಂಡರಾದ ಮುನಿಬೈರಪ್ಪ ಆರ್.ರಮೇಶ್‌ಗೌಡ, ಪುಟ್ಟರಾಜು, ವಿಮಲ, ರವಿಕುಮಾರ್ ಇದ್ದರು.

ಆಗ ಬಿಜೆಪಿ ಕಾರ್ಯಕರ್ತರು ಅಡ್ಡಿಪಡಿಸಿದರು.

ಕಾಂಗ್ರೆಸ್ ನಾಯಕಿ ಎಚ್.ಕುಸುಮಾ ಮಾತನಾಡಿ, 'ಬಡವರ ಸೇವೆ ಮಾಡಲು ಮುಂದಾದರೆ ಬಿಜೆಪಿ ಮುಖಂಡರು ಬೆದರಿಕೆ ಹಾಕುತ್ತಿದ್ದಾರೆ. ದಬ್ಬಾಳಿಕೆ ನಡೆಯುತ್ತಿದ್ದರೂ ಪೋಲೀಸರು ಮೂಕಪ್ರೇಕ್ಷಕರಂತೆ ವರ್ತಿಸುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಕೆಪಿಸಿಸಿ ಸದಸ್ಯ ಬೆಟ್ಟಸ್ವಾಮಿಗೌಡ, ಮುಖಂಡ ಆರ್.ರಮೇಶ್‌ಗೌಡ, ಮುನಿಬೈರಪ್ಪ, ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಪುಟ್ಟರಾಜು, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ವಿಮಲ ಅವರೂ ಇದ್ದರು.

ಪ್ರಕರಣದ ಕುರಿತು ನಂದಿನಿ ಪೊಲೀಸ್ ಠಾಣೆಯಲ್ಲಿ ಕಾಂಗ್ರೆಸ್, ಬಿಜೆಪಿ ಕಡೆಯಿಂದ ದೂರು–ಪ್ರತಿದೂರು ದಾಖಲಾಗಿತ್ತು. ಯಾರ ಮೇಲೆಯೂ ಪ್ರಕರಣ ದಾಖಲಾಗಿಲ್ಲ.

ನಗರದಲ್ಲಿ ಇಂದು

ಮನೆ- ಮನಗಳಲ್ಲಿ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ- ವಚನ ಪ್ರವಚನ ಕಾರ್ಯಕ್ರಮ: ಸುನಂದಾ ಜಿ. ಅನಿಗೋಲ, ಸ್ಥಳ: ಎಲ್. ಬಿ ಶಾಸ್ತ್ರಿನಗರ, ಡೆ ಟುಡೆ ಸೂಪರ್ ಮಾರ್ಕೆಟ್ ಹತ್ತಿರ, ಬೆಳಿಗ್ಗೆ 7.30

2021–22ನೇ ಶೈಕ್ಷಣಿಕ ಸಾಲಿನ ಕ್ರೀಡಾ, ಎನ್‌ಎಸ್‌ಎಸ್, ಎನ್‌ಸಿಸಿ ಮತ್ತು ಯುವ ರೆಡ್‌ಕ್ರಾಸ್ ಕಾರ್ಯಕ್ರಮಗಳ ಸಮಾರೋಪ ಸಮಾರಂಭ: ಅಧ್ಯಕ್ಷತೆ: ಎಲ್. ಗೋಮತಿ ದೇವಿ, ಅತಿಥಿಗಳು: ಸುಧೀರ್.ಎಂ ಹೆಗಡೆ, ಶಶಾಂಕ್, ರಚನಾ ಇಂದರ್, ಪ್ರವೀಣ್, ಆಯೋಜನೆ: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಸ್ಥಳ: ಮಹಾರಾಣಿ ವಿಜ್ಞಾನ ಕಾಲೇಜು ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10.30

ಮಾದಿಗ ಮತ್ತು ಅದರ ಉಪ ಸಮುದಾಯಗಳ ಸಮಾಜೋ–ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಮುಕ್ತ ಅವಲೋಕನ- ರಾಜ್ಯ ಮಟ್ಟದ ಕಾರ್ಯಗಾರ: ಉದ್ಘಾಟನೆ: ಕೋಟ ಶ್ರೀನಿವಾಸ ಪೂಜಾರಿ, ಅತಿಥಿ: ಸುಧೀರ್ ಕೃಷ್ಣಸ್ವಾಮಿ, ದಾಸನೂರು ಕೂಸಣ್ಣ, ಪಿ. ಮಣಿವಣ್ಣನ್, ಅಧ್ಯಕ್ಷತೆ: ಇ. ವೆಂಕಟಯ್ಯ, ಆಯೋಜನೆ:ತಳ ಸಮುದಾಯಗಳ ಅಧ್ಯಯನ ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ, ಸಮಾಜ ಕಲ್ಯಾಣ ಇಲಾಖೆ, ಸ್ಥಳ: ಅಂತರರಾಷ್ಟ್ರೀಯ ತರಬೇತಿ ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ, ಭಾರತ ವಿಶ್ವವಿದ್ಯಾಲಯ, ನಾಗರಬಾವಿ, ಬೆಳಿಗ್ಗೆ 10

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ ಕನ್ನಡೋತ್ಸವ: ಅಧ್ಯಕ್ಷತೆ: ಸೌಮ್ಯ ರೆಡ್ಡಿ, ಪ್ರಾಸ್ತಾವಿಕ ನುಡಿ: ಕೆ.ಆರ್. ಇಕ್ಬಾಲ್ ಅಹ್ಮದ್, ಅತಿಥಿಗಳು: ಮಹೇಶ ಜೋಶಿ, ಉದಯ್ ಬಿ. ಗರುಡಾಚಾರ್, ಜಿ. ಅಬ್ದುಲ್ ಬಷೀರ್, ಆಯೋಜನೆ ಮತ್ತು ಸ್ಥಳ: ಬಿ.ಇ.ಟಿ ಶಿಕ್ಷಣ ಸಂಸ್ಥೆಗಳು, ಬಿಸ್ಮಿಲ್ಲಾನಗರ, ಬನ್ನೇರುಘಟ್ಟ ರಸ್ತೆ ಕ್ರಾಸ್, ಬೆಳಿಗ್ಗೆ 11

ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ 110ನೇ ಜನ್ಮದಿನಾಚರಣೆ: ಆಯೋಜನೆ: ಅರ್ಪಣ ಸೇವಾ ಸಂಸ್ಥೆ, ಸ್ಥಳ: ಪ್ರೊ. ಜಿ. ವೆಂಕಟಸುಬ್ಬಯ್ಯ ಸಭಾಂಗಣ, ಜಯರಾಮ ಸೇವಾ ಮಂಡಳಿ, 8ನೇ ಬ್ಲಾಕ್, ಜಯನಗರ, ಬೆಳಿಗ್ಗೆ 11

ವಿ. ಗೋಪಾಲಸ್ವಾಮಿ ಅಯ್ಯಂಗಾರ್ ಹಾಗೂ ಜಿ. ವೆಂಕಟಸುಬ್ಬಯ್ಯ ಅವರ ಗೌರವಾರ್ಥ ಉಪನ್ಯಾಸ ಕಾರ್ಯಕ್ರಮ: ವಿಷಯ: ಮಹಿಷಾಸುರಮರ್ದಿನಿ, ಉಪನ್ಯಾಸಕರು: ಪ್ರತಿಭಾ ನಂದಕುಮಾರ್, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಸ್ಥಳ: ವಾಡಿಯಾ ಹಾಲ್, ಸಂಜೆ 6

ವಚನ ಶ್ರಾವಣ: ವಚನ ಗಾಯನ: ಈರಯ್ಯ ಚಿಕ್ಕಮಠ, ಪೂರ್ಣಿಕ ಆರಾಧ್ಯ, ಉಪನ್ಯಾಸ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಮುನೇಶ್ವರಸ್ವಾಮಿ ದೇವಾಲಯ ಸಭಾಂಗಣ, ಆಲದಮರ ಆವರಣ, ಹಂಪಿನಗರ, ಸಂಜೆ 6

ಭಜನೆ ಮತ್ತು ಪ್ರವಚನ: ಭಜನೆ ಪ್ರಸ್ತುತಿ: ರಾಜಾಜಿನಗರದ ವಾಸವಿ ಮಹಿಳಾ ಮಂಡಲಿ, 'ಭಾಗವತ ಅಷ್ಟಮ ಸ್ಕಂದ' ಪ್ರವಚನ: ರಾಮವಿಠಲಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಕನ್ನಿಕಾ ಪರಮೇಶ್ವರಿ ದೇವಸ್ಥಾನ, ರಾಜಾಜಿನಗರ, ಸಂಜೆ 6

'ಅಲ್ಲೂರಿ ಸೀತಾರಾಮರಾಜು' ನಾಟಕ ಪ್ರದರ್ಶನ: ಆಯೋಜನೆ: ರಾಜು ಕ್ಷತ್ರಿಯ ಸಂಘ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವಯ್ಯಾಲಿ ಕಾವಲ್, ಸಂಜೆ 6.30

ಮೀಸಲಾತಿ ಹೋರಾಟಕ್ಕೆ ಒಕ್ಕಲಿಗರ ಸಿದ್ಧತೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಿಂದ ನಗರ ಪ್ರದೇಶದ ಒಕ್ಕಲಿಗ ಸಮುದಾಯವನ್ನು ಕೈಬಿಟ್ಟಿರುವುದು ಸರಿಯಲ್ಲ. ಒಕ್ಕಲಿಗರ ಎಲ್ಲಾ ಪಂಗಡಗಳನ್ನು ಮರು ಸೇರ್ಪಡೆ ಮಾಡಬೇಕು' ಎಂದು ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಡಾ. ಅಂಜನಪ್ಪ ಆಗ್ರಹಿಸಿದರು.

ದಾಸರಹಳ್ಳಿಯಲ್ಲಿ ಒಕ್ಕಲಿಗರ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಜಿ. ಕುಮಾರ್ ನೇತೃತ್ವದಲ್ಲಿ ಸೋಮವಾರ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

'ಈ ಮೀಸಲಾತಿ ಬಗ್ಗೆ ಸಮುದಾಯದವರಲ್ಲಿ ಅರಿವು ಮೂಡಿಸಿ ತಿಳಿವಳಿಕೆ ನೀಡಬೇಕು. ನಮ್ಮ ಹಕ್ಕನ್ನು ನಾವು ಪಡೆದುಕೊಳ್ಳಬೇಕಿದ್ದು, ಆ ಶಕ್ತಿ ಒಕ್ಕಲಿಗ ಸಮುದಾಯಕ್ಕಿದೆ. ಈ ಸಂಬಂಧ ಸಮಿತಿ ರಚಿಸಿ ಅದರ ನೇತೃತ್ವದಲ್ಲಿ ಹೋರಾಟ ಆರಂಭಿಸೋಣ. ಅದಕ್ಕೆ ಒಕ್ಕಲಿಗರ ಸಂಘದ ಬೆಂಬಲವೂ ಇರುತ್ತದೆ' ಎಂದು ತಿಳಿಸಿದರು.

ಒಕ್ಕಲಿಗರ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಜಿ. ಕುಮಾರ್ ಮಾತನಾಡಿ, 'ಕೇಂದ್ರ ಒಬಿಸಿ ಪಟ್ಟಿಯಿಂದ ನಗರ ಪ್ರದೇಶದ ಒಕ್ಕಲಿಗರನ್ನು 2006ರಲ್ಲಿ ಕೈ ಬಿಡಲಾಗಿದೆ. ನಗರ ಪ್ರದೇಶಗಳಲ್ಲಿ ಇರುವ ಒಕ್ಕಲಿಗರೆಲ್ಲಾ ಶ್ರೀಮಂತರಲ್ಲ, ಇತರೆ ಯಾವುದೇ ಜಾತಿ ಮೀಸಲಾತಿಯಲ್ಲಿ ಈ ರೀತಿಯ ವರ್ಗೀಕರಣ ಆಗಿಲ್ಲ' ಎಂದು ವಿವರಿಸಿದರು.

ಸಾಹಿತಿ ಹಾಗೂ ಹೋರಾಟಗಾರ ತಲಕಾಡು ಚಿಕ್ಕರಂಗೇಗೌಡ, ಜೆಡಿಎಸ್ ದಾಸರಹಳ್ಳಿ ಮಹಿಳಾ ಘಟಕದ ಅಧ್ಯಕ್ಷೆ ರಾಣಿ ಪ್ರತಾಪ್, ಬಿಬಿಎಂಪಿ ಮಾಜಿ ಸದಸ್ಯ ಕೆ. ನಾಗಭೂಷಣ್, ಜೆಡಿಎಸ್ ಮುಖಂಡ ಚರಣ್‌ಗೌಡ, ಮುನೇಗೌಡ, ಡಾ.ಶಿವರಾಂ, ಡಾ.ಮಧು, ಲಕ್ಷ್ಮಿ ಶ್ರೀನಿವಾಸ್ ಇದ್ದರು.

ಕಬ್ಬನ್‌ಪಾರ್ಕ್‌ನಲ್ಲಿ ಕರಗದ ಕುಂಟೆಗೆ ಕಾಯಕಲ್ಪ; ತಾರಾಲಯದಲ್ಲಿ 'ಹಸಿರು ಕಟ್ಟಡ'

ಬಾಲಭವನ, ತಾರಾಲಯಕ್ಕೆ 'ಹೈಟೆಕ್' ಸ್ಪರ್ಶ

• ಆರ್. ಮಂಜುನಾಥ್


ಬೆಂಗಳೂರು: ನಗರದ ಹಸಿರು ಪರಿಸರಕ್ಕೆ ಪ್ರಮುಖ ಕಾರಣವಾಗಿರುವ ಕಬ್ಬನ್ ಪಾರ್ಕ್ 'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ ಹೈಟೆಕ್ ಸ್ವರೂಪ ಪಡೆದುಕೊಳ್ಳುತ್ತಿದೆ. ಚಿಣ್ಣರಿಗೆ ಅಚ್ಚುಮೆಚ್ಚಿನ ತಾಣವಾದ ಬಾಲಭವನ ವಿಶೇಷ ರೂಪದೊಂದಿಗೆ ಅತ್ಯಾಧುನಿಕ ಸಲಕರಣೆಗಳನ್ನೂ ಪಡೆದುಕೊಳ್ಳಲಿದೆ. ಆದರೆ ಇದನ್ನೆಲ್ಲ ಅನುಭವಿಸಲು ಇನ್ನೊಂದೆರಡು ತಿಂಗಳು ಕಾಯಲೇಬೇಕು.

ಮಕ್ಕಳಿಗೆ ಪ್ರಿಯವಾದ ತಾಣವಾಗಿರುವ ಕಬ್ಬನ್ ಪಾರ್ಕ್‌ನಲ್ಲಿ ಹೊಸ ಸೌಲಭ್ಯಗಳು ಕಾಣ ಸಿಗಲಿವೆ. ವಿಶೇಷ ಮಕ್ಕಳಿಗೆ ವೈಶಿಷ್ಟ್ಯಪೂರ್ಣವಾದ ಆಟದ ಮೈದಾನವನ್ನು 'ಮೈಂಡ್‌ಟ್ರೀ' ಸಹಯೋಗದೊಂದಿಗೆ ರೂಪಿಸಲಾಗಿದೆ. 'ಪುಟಾಣಿ ಎಕ್ಸ್‌ಪ್ರೆಸ್' ರೈಲು ಮತ್ತೆ ಓಡಲು ಎಲ್ಲ ರೀತಿಯ ವ್ಯವಸ್ಥೆಗಳೂ ಆಗುತ್ತಿವೆ. ಈ ಎಲ್ಲ ರೀತಿಯ ಸೌಂದರ್ಯೀಕರಣಕ್ಕೆ ₹17.55 ಕೋಟಿ ವೆಚ್ಚವಾಗಿದೆ.

ಇದಲ್ಲದೆ, ಕಬ್ಬನ್ ಪಾರ್ಕ್‌ನಲ್ಲಿ ಬೊಟಾನಿಕಲ್ ಗಾರ್ಡನ್ ಧಾರವಾಡದ ಎಕೊ ವಿಲೇಜ್ ಪರಿಕಲ್ಪನೆಯಲ್ಲಿ ಮರು ಅಭಿವೃದ್ಧಿಯನ್ನೂ ಕಾಣುತ್ತಿದೆ. ಅಭಿವೃದ್ಧಿ ಕಾಮಗಾರಿಯ ಜೊತೆಗೆ ಅದನ್ನು ರಕ್ಷಿಸುವ ವಿಧಾನಗಳನ್ನು ಅಳವಡಿಸಲಾಗಿದೆ. ಇಲ್ಲಿನ ಮಳೆನೀರು ಹರಿಯುವ ಹಾದಿಯನ್ನು ದುರಸ್ತಿ ಮಾಡಿ, ನಗರದ ಐತಿಹಾಸಿಕ ಕರಗದ ಕುಂಟೆ, ಲೋಟಸ್, ಡ್ರೈ ಪಾಂಡ್ ಹಾಗೂ ಕೊಳಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಬಾಲ ಭವನದಲ್ಲಿ ಆಕರ್ಷಣೆಯನ್ನು ಹೆಚ್ಚಿಸಿದ್ದು, ಬೋಟಿಂಗ್ ವ್ಯವಸ್ಥೆ ದ್ವೀಪದ ವೈಶಿಷ್ಟ್ಯದೊಂದಿಗೆ ಮರುಸೃಷ್ಟಿಯಾಗುತ್ತಿದೆ.

ಪಾದಚಾರಿ ಮಾರ್ಗದ ಉನ್ನತೀಕರಣ, ಲೋಟಸ್ ಪಾಂಡ್ ಪುನರುಜ್ಜೀವನ, ಮಳೆ ನೀರು ಸಂಗ್ರಹಿಸಲು ಅಚ್ಚುಕಟ್ಟು ಪ್ರದೇಶದ ಮರು ಅಭಿವೃದ್ಧಿ, ಜಾಗಿಂಗ್ ಮತ್ತು ಸೈಕಲ್ ಸವಾರರಿಗೆ ಪ್ರತ್ಯೇಕ ಟ್ರ್ಯಾಕ್‌ಗಳನ್ನು ಇಲ್ಲಿ ಅಳವಡಿಸಲಾಗಿದೆ. ಕೆಲವು ಭಾಗಗಳಲ್ಲಿ ಹೊಸ ಬೇಲಿಯನ್ನೂ ಇಲ್ಲಿ ಅಳವಡಿಸಲಾಗುತ್ತಿದೆ.

ಸಿಟಿ ಈಗ ಎಷ್ಟು ಸ್ಮಾರ್ಟ್ ?



ಕಬ್ಬನ್‌ಪಾರ್ಕ್‌ನಲ್ಲಿ ನವೀಕೃತಗೊಳ್ಳುತ್ತಿರುವ ಬೋಟಿಂಗ್ ಪ್ರದೇಶ ಅಂತಿಮವಾಗಿ ಕಾಣುವುದು ಹೀಗೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಯಾವುದಕ್ಕೆ ಎಷ್ಟು ವೆಚ್ಚ?

ಕಬ್ಬನ್ ಪಾರ್ಕ್	ನೆಹರೂ ತಾರಾಲಯ
₹17.55 ಕೋಟಿ ಉನ್ನತೀಕರಣ/ ಸೌಂದರ್ಯೀಕರಣ	₹31.19 ಕೋಟಿ ಹಸಿರು ಕಟ್ಟಡ
₹17.79 ಕೋಟಿ ಬೊಟಾನಿಕಲ್ ಪಾರ್ಕ್	₹4.8 ಕೋಟಿ ಮಿನಿ ಆಡಿಟೋರಿಯಂ

ಸೆಪ್ಟೆಂಬರ್ ಅಂತ್ಯಕ್ಕೆ ಪೂರ್ಣ

ಕಬ್ಬನ್‌ಪಾರ್ಕ್ ಅಭಿವೃದ್ಧಿ ಯೋಜನೆಯಲ್ಲಿ ಮೊದಲು ಬಾಲಭವನ ಇರಲಿಲ್ಲ. ಯೋಜನೆ ರೂಪಿಸಿಕೊಂಡು, ನಾಗರಿಕರ ಸಲಹೆ ಪಡೆದು ಕಾಮಗಾರಿ ಆರಂಭಿಸಲು ವಿಳಂಬವಾಯಿತು. 2021ರ ಸೆಪ್ಟೆಂಬರ್‌ನಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಿದೆವು. ರಜೆ ದಿನಗಳಲ್ಲಿ ಕೆಲಸ ಮಾಡುವಂತಿಲ್ಲ. ಬೃಹತ್ ಯಂತ್ರಗಳನ್ನೂ ಉದ್ಯಾನಕ್ಕೆ ತರುವಂತಿಲ್ಲ. ಹೀಗಾಗಿ ಸ್ವಲ್ಪ ವಿಳಂಬವಾಗಿದೆ. ಈ ಸೆಪ್ಟೆಂಬರ್‌ನಲ್ಲಿ ಎಲ್ಲ ಕೆಲಸಗಳನ್ನೂ ಮುಗಿಸುವ ಗುರಿ ಹೊಂದಿದ್ದೇವೆ.

ವಿನಾಯಕ ಸೂಗೂರು
ಮುಖ್ಯ ಎಂಜಿನಿಯರ್, ಸ್ಮಾರ್ಟ್ ಸಿಟಿ




ಕಬ್ಬನ್‌ಪಾರ್ಕ್‌ನಲ್ಲಿ ವಿಶೇಷ ಮಕ್ಕಳಿಗೆ ರೂಪಿಸಲಾಗಿರುವ ಪಾರ್ಕ್



ಜವಾಹರಲಾಲ್ ನೆಹರೂ ತಾರಾಲಯದಲ್ಲಿ ನಿರ್ಮಾಣ ಹಂತದಲ್ಲಿರುವ 'ಹಸಿರು ಕಟ್ಟಡ'

ಪ್ಲಾಟಿನಂ ಸರ್ಟಿಫಿಕೇಟ್ ಗುರಿ



'ಹಸಿರು ಕಟ್ಟಡ' ಹೀಗಿರಲಿದೆ

ಮಕ್ಕಳಿಗೆ ಸೌರಲೋಕದ ಜ್ಞಾನ ನೀಡುವ ಜವಾಹರಲಾಲ್ ನೆಹರೂ ತಾರಾಲಯಕ್ಕೆ 'ಸ್ಮಾರ್ಟ್ ಸೌಲಭ್ಯಗಳನ್ನು' ನೀಡಲಾಗುತ್ತದೆ. ₹36 ಕೋಟಿ ವೆಚ್ಚದಲ್ಲಿ ಇಲ್ಲಿ ಎರಡು ಕಟ್ಟಡಗಳು ನಿರ್ಮಾಣವಾಗಲಿವೆ. 600 ಆಸನಗಳ ಬೃಹತ್ ಸಭಾಂಗಣ ಇಲ್ಲಿ ನಿರ್ಮಾಣದ ಹಂತದಲ್ಲಿದೆ. ಇದರ ಜೊತೆಗೆ ತಲಾ 50 ಆಸನಗಳ ನಾಲ್ಕು ಹಾಗೂ 100 ಆಸನಗಳ ಒಂದು ಸಭಾಂಗಣ ಈ ಕಟ್ಟಡದಲ್ಲಿ ಇರಲಿದೆ. ಇದು ಮಕ್ಕಳು ಹಾಗೂ ವಿಜ್ಞಾನ ಆಸಕ್ತರಿಗೆ ಹೆಚ್ಚಿನ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲು ಸಹಕಾರಿ.

ನೆಹರೂ ತಾರಾಲಯದ ಆವರಣದಲ್ಲೇ ಮತ್ತೊಂದು 'ಮಿನಿ ಆಡಿಟೋರಿಯಂ' ಸಹ ನಿರ್ಮಾಣವಾಗಲಿದೆ. ಇದು 600 ಆಸನಗಳ ಸಾಮರ್ಥ್ಯವನ್ನು ಹೊಂದಿದ್ದು, ಇದು ವಿಶೇಷಚೇತನಸ್ನೇಹಿ ಕಟ್ಟಡವಾಗಿರಲಿದೆ. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಈ ಸಭಾಂಗಣ ನಿರ್ಮಾಣವಾಗಲಿದೆ. ಮಕ್ಕಳು ಮತ್ತು ಮಹಿಳೆಯರಿಗೇ ವಿಶೇಷವಾದ ಕಾರ್ಯಕ್ರಮಗಳನ್ನು ಆಯೋಜಿಸಲು ವಿಶೇಷವಾದ ಪ್ಯಾನೆಲಿಂಗ್, ವೇದಿಕೆ, ಕರ್ಟನ್ಸ್, ಬೆಳಕಿನ ಸೌಲಭ್ಯ ಇಲ್ಲಿ ಲಭ್ಯ.

ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ (ಐಜಿಬಿಸಿ) ವತಿಯಿಂದ ನೀಡಲಾಗುವ ಪ್ಲಾಟಿನಂ ಸರ್ಟಿಫಿಕೇಟ್ ಪಡೆಯುವುದು ಈ ಎರಡು 'ಹಸಿರು ಕಟ್ಟಡ'ಗಳ ಗುರಿ. ಈ ನಿಟ್ಟಿನಲ್ಲೇ ಕಟ್ಟಡದ ಕಾಮಗಾರಿ ನಡೆಯುತ್ತಿದೆ. ಐಜಿಬಿಸಿಯ ತಂಡವೂ ಆಗಾಗ್ಗೆ ಬಂದು ನಿರ್ಮಾಣದಲ್ಲಿ ಎಲ್ಲ ರೀತಿಯ ನಿಯಮ ಪಾಲಿಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುತ್ತಿದೆ. ಪರಿಸರ ಸ್ನೇಹಿಯಾಗಿ ನಿರ್ಮಾಣವಾಗುವ ಕಟ್ಟಡಕ್ಕೆ 'ಹಸಿರು ಕಟ್ಟಡ' ಎಂಬ ಪ್ರಮಾಣ ಪತ್ರ ಲಭಿಸುತ್ತದೆ. ಈ ಕಟ್ಟಡಗಳು ಇನ್ನೂ ನಿರ್ಮಾಣ ಹಂತದಲ್ಲಿವೆ. ಡಿಸೆಂಬರ್‌ಗೆ ಪೂರ್ಣಗೊಳಿಸುವ ಗುರಿ ಹೊಂದಿದ್ದಾರೆ. ಆದರೆ, ವಾಸ್ತವದಲ್ಲಿ ಅದಕ್ಕಿಂತ ಮತ್ತಷ್ಟು ತಿಂಗಳು ಕಾಮಗಾರಿ ಪೂರೈಸಲು ಬೇಕಿದೆ.

ಸುದ್ದಿ 2 ನಿಮಿಷ

ಯುವ ಉದ್ಯಮಿ ಕಾರ್ತಿಕ್ ತಲ್ಲಂ ಕಾಂಬೋಡಿಯಾ ಕಾನ್ಸುಲ್

ಬೆಂಗಳೂರು: ಯುವ ಉದ್ಯಮಿ ಕಾರ್ತಿಕ್ ತಲ್ಲಂ ಅವರು ಕಾಂಬೋಡಿಯಾದ ಗೌರವ ಕಾನ್ಸುಲ್ ಆಗಿ ನೇಮಕಗೊಂಡಿದ್ದಾರೆ.

ಕಾರ್ತಿಕ್ ಅವರ ಈ ನೇಮಕವನ್ನು ಭಾರತದ ರಾಷ್ಟ್ರಪತಿ ಅಂಕಿತದೊಂದಿಗೆ ಕಾಂಬೋಡಿಯಾ ಸರ್ಕಾರ ಪ್ರಕಟಿಸಿದೆ. ಭಾರತ ಮತ್ತು ಕಾಂಬೋಡಿಯಾ ಉಭಯ ರಾಷ್ಟ್ರಗಳ ಮಧ್ಯದ ರಾಜತಾಂತ್ರಿಕ ಕಾರ್ಯಚಟುವಟಿಕೆಗಳನ್ನು ಸಂಯೋಜಿಸುವ ಮತ್ತು ವ್ಯಾಪಾರ ವಹಿವಾಟು, ಸಂಬಂಧಗಳನ್ನು ಹೆಚ್ಚಿಸುವ ಜವಾಬ್ದಾರಿಯನ್ನು ಕಾರ್ತಿಕ್ ತಲ್ಲಂ ಅವರು ನಿಭಾಯಿಸುವರು.

ಕರ್ನಾಟಕ, ಮಹಾರಾಷ್ಟ್ರ, ಗೋವಾ, ತಮಿಳುನಾಡು, ಕೇರಳ, ತೆಲಂಗಾಣ, ಪಾಂಡಿಚೇರಿ, ಆಂಧ್ರಪ್ರದೇಶ ಇವರ ಕಾರ್ಯ ವ್ಯಾಪ್ತಿಯ ರಾಜ್ಯಗಳಾಗಿವೆ.



ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ವೀರೇಂದ್ರ ಹೆಗ್ಗಡೆಯವರಿಂದ ₹10 ಲಕ್ಷ

ಬೆಂಗಳೂರು: ಬೆಂಗಳೂರು ದಕ್ಷಿಣ ತಾಲ್ಲೂಕಿನ ರಾಮೋಹಳ್ಳಿಯಲ್ಲಿ ಸಿದ್ಧಾರೂಢ ಮಿಷನ್ ನಿರ್ಮಿಸುತ್ತಿರುವ ಸಾಂಸ್ಕೃತಿಕ ಭವನದ ನಿರ್ಮಾಣಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ₹10 ಲಕ್ಷ ನೆರವನ್ನು ನೀಡಿದ್ದಾರೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಎಂ. ಸೀನಪ್ಪ ಸೋಮವಾರ ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್‌ಗೆ ಭೇಟಿ ನೀಡಿ ಆಶ್ರಮದ ಅಧ್ಯಕ್ಷ ಡಾ ಆರೂಢ ಭಾರತೀ ಸ್ವಾಮೀಜಿಯವರಿಗೆ ಡಿಡಿಯನ್ನು ಹಸ್ತಾಂತರಿಸಿದರು.

ನಂತರ ಮಾತನಾಡಿದ ಸ್ವಾಮೀಜಿ, ಮನವಿ ಸಲ್ಲಿಸಿದ ಆರೇ ದಿನಗಳೊಳಗೆ ನೆರವನ್ನು ಆಶ್ರಮದ ಬಾಗಿಲಿಗೆ ಮುಟ್ಟಿಸಿದ ವೀರೇಂದ್ರ ಹೆಗ್ಗಡೆ ಅವರ ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಕಳಕಳಿ ಹಾಗೂ ಸೇವೆಗಳು ಅನುಪಮವಾಗಿವೆ ಎಂದರು.

ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಯಲಹಂಕ: ನವಚೇತನ ಆಸ್ಪತ್ರೆಯಲ್ಲಿ ನೂತನವಾಗಿ ತೆರೆದಿರುವ ಅಂಕಾಲಜಿ (ಕ್ಯಾನ್ಸರ್) ವಿಭಾಗದಲ್ಲಿ ಇದೇ 31ರವರೆಗೆ ಉಚಿತವಾಗಿ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಲಿದೆ ಎಂದು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಬಿ.ಜಿ.ಗಿರೀಶ್ ಚಂದ್ರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರಲ್ಲಿ ಜಾಗೃತಿ ಮತ್ತು ಮಾಹಿತಿಯ ಕೊರತೆಯಿಂದ ಹಲವಾರು ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ನಿರಂತರ ಆಯಾಸ, ದೇಹದಲ್ಲಿ ಊತ ಅಥವಾ ಗಂಟು, ಎದೆಯುರಿ, ತೂಕದಲ್ಲಿ ಗಣನೀಯ ಇಳಿಕೆ, ಒಣ ಅಥವಾ ಕಫಯುಕ್ತ ಕೆಮ್ಮು, ಮೂತ್ರದಲ್ಲಿ ರಕ್ತ ಇತ್ಯಾದಿ ಲಕ್ಷಣಗಳಿರುವವರು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಸ್ತ್ರೀರೋಗ ತಜ್ಞ ಎನ್.ರೂಪೇಶ್ ಮಾತನಾಡಿ, ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವವರೂ ಸೇರಿ ಯಾವುದೇ ವರ್ಗದ ಜನಸಾಮಾನ್ಯರು ಅನುಕೂಲ ಪಡೆಯಬೇಕೆಂಬುದೇ ಈ ಶಿಬಿರದ ಉದ್ದೇಶ ಎಂದರು.

ಸುಗ್ರೀವಾಜ್ಞೆ ಹೊರಡಿಸಿದ ರಾಜ್ಯ ಸರ್ಕಾರ

ಜಿ.ಪಂ ಸದಸ್ಯ ಸಂಖ್ಯೆಗೆ ಜನಸಂಖ್ಯೆ ಆಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಮುಂದೆ 7 ಲಕ್ಷ ಜನಸಂಖ್ಯೆ ಇರುವ ಜಿಲ್ಲೆಯಲ್ಲಿ ಕನಿಷ್ಠ 25 ಜಿಲ್ಲಾ ಪಂಚಾಯಿತಿ ಸದಸ್ಯ ಸ್ಥಾನ, 7 ಲಕ್ಷದಿಂದ 9.50 ಲಕ್ಷ ಜನಸಂಖ್ಯೆ ಇರುವ ಜಿಲ್ಲೆಗಳಲ್ಲಿ 28 ಜಿಲ್ಲಾ ಪಂಚಾಯಿತಿ ಸದಸ್ಯ ಸ್ಥಾನಕ್ಕೆ ಅವಕಾಶ ಕಲ್ಪಿಸಿ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ'ಗೆ ತಿದ್ದುಪಡಿ ಮಾಡಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ.

ಸುಗ್ರೀವಾಜ್ಞೆಯ ಮೂಲಕ ಕಾಯ್ದೆಯ ಸೆಕ್ಷನ್ 121 ಮತ್ತು ಸೆಕ್ಷನ್ 160ಕ್ಕೆ ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಒಟ್ಟು ಸದಸ್ಯ ಸ್ಥಾನಗಳ ಸಂಖ್ಯೆ ಗಣನೀಯವಾಗಿ ಹೆಚ್ಚಲಿದೆ.

ಎರಡು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಹೊಂದಿದ ತಾಲ್ಲೂಕುಗಳಲ್ಲಿ ಕನಿಷ್ಠ 12 ಚುನಾಯಿತ ಸದಸ್ಯರು ಇರಬೇಕು ಎಂದು ನಿಯಮ ರೂಪಿಸಿ ಕಾಯ್ದೆಗೆ ಕಳೆದ ಮಾರ್ಚ್‌ನಲ್ಲಿ ತಿದ್ದುಪಡಿ ಮಾಡಲಾಗಿತ್ತು. ಆದರೆ, 2 ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಜನಸಂಖ್ಯೆ ಇರುವ ತಾಲ್ಲೂಕು ಪಂಚಾಯಿತಿಗಳಲ್ಲಿ ಎಷ್ಟು ಸದಸ್ಯ ಸ್ಥಾನ ಇರಬೇಕೆಂದು ನಿರ್ಣಯಿಸಲು ಸಮಸ್ಯೆ ಆಗುತ್ತಿತ್ತು. ಹೊಸ ತಿದ್ದುಪಡಿಯಿಂದಾಗಿ 2.30 ಲಕ್ಷ ಜನಸಂಖ್ಯೆಗೆ 12 ಚುನಾಯಿತ ಸದಸ್ಯರು ಇರಲಿದ್ದಾರೆ.

ಅಲ್ಲದೆ, ಒಂದು ಜಿಲ್ಲಾಪಂಚಾಯಿತಿಗೆ ತಾಲ್ಲೂಕುಗಳಿಂದ ಆಯ್ಕೆಯಾಗುವ ಸದಸ್ಯರ ಸಂಖ್ಯೆ ಪ್ರತಿ ಜಿಲ್ಲೆಯಲ್ಲಿ 20 ಇರಬೇಕು ಎಂದು ನಿಗದಿಪಡಿಸಲಾಗಿತ್ತು. ಆದರೆ, ಕಡಿಮೆ ಜನಸಂಖ್ಯೆ ಇರುವ ಜಿಲ್ಲೆಗಳಲ್ಲಿ ಸದಸ್ಯ ಸ್ಥಾನ ನಿಗದಿಪಡಿಸಲು ಸಮಸ್ಯೆ ಆಗುತ್ತಿತ್ತು. ಈ ಸಮಸ್ಯೆಯನ್ನು ಪರಿಹರಿಸಲು ಸುಗ್ರೀವಾಜ್ಞೆಯ ಮೂಲಕ ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

ಹಾಲಿ ಇರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ ಸೆಕ್ಷನ್ 121 ಪ್ರಕಾರ, 2 ಲಕ್ಷ ಗ್ರಾಮೀಣ ಜನಸಂಖ್ಯೆ ಇರುವ ಪ್ರತಿ ತಾಲ್ಲೂಕುಗಳಲ್ಲಿ ಪ್ರತಿ 12 ಸಾವಿರಕ್ಕೆ ಕಡಿಮೆ ಇಲ್ಲದಂತೆ ಒಬ್ಬ ತಾಲ್ಲೂಕು ಪಂಚಾಯಿತಿ ಸದಸ್ಯ ಇರಬೇಕು. ಒಂದು ಲಕ್ಷ ಮೀರಿದ ಮತ್ತು 2 ಲಕ್ಷದ ಒಳಗೆ ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ಪ್ರತಿ 10 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಕನಿಷ್ಠ 11 ಚುನಾಯಿತ ಸದಸ್ಯರಿರಬೇಕು. 50 ಸಾವಿರದಿಂದ 1 ಲಕ್ಷ ಜನಸಂಖ್ಯೆಗೆ 9, 50 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ 7 ಸದಸ್ಯರು ಇರಬೇಕು. ಸೆಕ್ಷನ್ 160 ರ ಪ್ರಕಾರ, ಒಂದು ಜಿಲ್ಲೆಯಲ್ಲಿ 35 ರಿಂದ 45 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಒಂದು ಜಿಲ್ಲೆಯಲ್ಲಿ ಕನಿಷ್ಠ 20 ಜಿಲ್ಲಾ ಪಂಚಾಯಿತಿ ಸದಸ್ಯರು ಇರಬೇಕು.

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರ ವಿಂಗಡನೆಗೆ ರಾಜ್ಯ ಸರ್ಕಾರ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ. ಲಕ್ಷ್ಮೀನಾರಾಯಣ ಅವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ'ವನ್ನು ರಚಿಸಿದೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ ಒಟ್ಟು ಸದಸ್ಯ ಸ್ಥಾನಗಳು ನಿಗದಿಯಾದ ಬಳಿಕ ಕ್ಷೇತ್ರ ವಿಂಗಡನೆಯ ಕರಡನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಿದೆ.



ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ಬ್ರೈನೋಬ್ರೈನ್ ಉತ್ಸವದ ವಿವಿಧ ಸ್ಪರ್ಧೆಗಳಲ್ಲಿ ಪದಕ ವಿಜೇತ ಮಕ್ಕಳು

ಬಡಗಾಮ್ ಗ್ರೆನೇಡ್ ದಾಳಿ: ಲಷ್ಕರ್ ಎ ತಯಬಾ ಉಗ್ರ ಬಂಧನ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಡಗಾಮ್ ಜಿಲ್ಲೆಯಲ್ಲಿ ಆಗಸ್ಟ್ 15ರಂದು ಅಲ್ಪಸಂಖ್ಯಾತರ ನೆಲೆಗಳ ಮೇಲೆ ನಡೆಸಲಾಗಿದ್ದ ಗ್ರೆನೇಡ್ ದಾಳಿಯ ಸಂಬಂಧ ಲಷ್ಕರ್ ಎ ತಯಬಾದ ಉಗ್ರನೊಬ್ಬನನ್ನು ಭದ್ರತಾ ಪಡೆಯವರು ಸೋಮವಾರ ಬಂಧಿಸಿದ್ದಾರೆ. ಇದರೊಂದಿಗೆ ಈ ಪ್ರಕರಣದಡಿ ಬಂಧನಕ್ಕೊಳಗಾಗಿರುವವರ ಸಂಖ್ಯೆ ಮೂರಕ್ಕೆ ಏರಿದೆ.

'ಸುಹೇಲ್ ಅಹ್ಮದ್ ಮಲಿಕ್ ಬಂಧಿತ. ಈತ ಗ್ರೆನೇಡ್ ದಾಳಿಯಲ್ಲಿ ಭಾಗಿಯಾಗಿದ್ದ. ಬಂಧನದ ವೇಳೆ ಈತನ ಬಳಿ ಇದ್ದ ಗ್ರೆನೇಡ್ ಹಾಗೂ ಇತರ ಸ್ಫೋಟಕಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ನೂತನ ಪದಾಧಿಕಾರಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಗುತ್ತಿಗೆದಾರರ ಸಂಘಕ್ಕೆ ಅಧ್ಯಕ್ಷರಾಗಿ ಶಂಕರಗೌಡ ಎನ್. ಹೊಸಮನಿ ಅವರು ಆಯ್ಕೆಯಾಗಿದ್ದಾರೆ.

ಮನೋಹರ್ ವೈ.ಸಿ.(ಉಪಾಧ್ಯಕ್ಷ), ಕೆ. ಬಸವಾನಂದ (ಪ್ರಧಾನ ಕಾರ್ಯದರ್ಶಿ), ಎಂ.ಬಿ. ಶ್ರೀನಿವಾಸಗೌಡ (ಖಜಾಂಚಿ) ರಾಧಾಕೃಷ್ಣ ನೇಮಕವಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದ್ದಾರೆ.

'ತಾಲ್ಲೂಕು ಆಸ್ಪತ್ರೆಗಳಲ್ಲೂ ಆನ್‌ಲೈನ್ ನೋಂದಣಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಹೆಸರು ನೋಂದಣಿಗೆ ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಆಸ್ಪತ್ರೆಗಳಲ್ಲಿ ಜನರು ಸರದಿ ಸಾಲಿನಲ್ಲಿ ಕಾಯುವುದನ್ನು ತಪ್ಪಿಸಲು ಆನ್‌ಲೈನ್ ವ್ಯವಸ್ಥೆ ಸೂಕ್ತವಾಗಿದೆ. ವೈದ್ಯರ ಭೇಟಿಯ ಸಮಯ, ಅಗತ್ಯವಿರುವ ವೈದ್ಯರ ಆಯ್ಕೆಗೂ ಅವಕಾಶ ಇರುತ್ತದೆ' ಎಂದು ತಿಳಿಸಿದರು.

'ಮೊಬೈಲ್ ಸಂದೇಶಗಳ ಮೂಲಕ ಮಾಹಿತಿ ನೀಡಲಾಗುವುದು. ಡಿಜಿಟಲ್ ಪಾವತಿ ವ್ಯವಸ್ಥೆಯೂ ಶೀಘ್ರ ಅನುಷ್ಠಾನಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಸರ್ಕಾರದ ಅನುದಾನ ಪಡೆದ ಖಾಸಗಿ ಆಸ್ಪತ್ರೆಗಳು ಕೋವಿಡ್ ರೋಗಿಗಳಿಂದ ಹಿಂದೆ ಪಡೆದಿದ್ದ ಹಣ ಹಿಂದಿರುಗಿಸಲಾಗಿದೆ. ವಿವಿಧ ಆಸ್ಪತ್ರೆಗಳು ₹ 1.58 ಕೋಟಿ ವಾಪಸ್ ಮಾಡಿದ್ದು, ಉಳಿದ ಮೊತ್ತವನ್ನೂ ಕೊಡಿಸಲಾಗುವುದು ಎಂದರು.

ರಾಜ್ಯಮಟ್ಟದ ಮನೋಗಣಿತ ಉತ್ಸವ

241 ಮಕ್ಕಳಿಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರೈನೋಬ್ರೈನ್ ಉತ್ಸವದಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ 241 ಮಕ್ಕಳು ಚಿನ್ನದ ಪದಕ ಪಡೆದುಕೊಂಡು 'ಚಾಂಪಿಯನ್' ಎನಿಸಿಕೊಂಡರು ಎಂದು ಬ್ರೈನೋಬ್ರೇನ್ ಇಂಟರ್‌ನ್ಯಾಷನಲ್ ವ್ಯವಸ್ಥಾಪಕ ನಿರ್ದೇಶಕ ಆನಂದ ಸುಬ್ರಮಣ್ಯಂ ತಿಳಿಸಿದರು.

ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಬ್ರೈನೋಬ್ರೈನ್ ಚಾಂಪಿಯನ್-2022 ಕಾರ್ಯಕ್ರಮದಲ್ಲಿ 800ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. 235 ಮಕ್ಕಳು ಬೆಳ್ಳಿ ಪದಕ ಪಡೆದುಕೊಂಡರು ಎಂದು ಮಾಹಿತಿ ನೀಡಿದರು.

ಮಕ್ಕಳಿಗೆ ಮನೋ ಗಣಿತದಲ್ಲಿರುವ ಸಾಮರ್ಥ್ಯ ಸಾಬೀತುಪಡಿಸಲು ಕರ್ನಾಟಕ ಬ್ರೈನೋಬ್ರೈನ್ ಉತ್ಸವ ಅವಕಾಶ ಕಲ್ಪಿಸಿತ್ತು. ಬೆಳಗಾವಿ, ರಾಯಚೂರು, ಮಡಿಕೇರಿ, ತುಮಕೂರು, ಕೋಲಾರ, ಕಲಬುರಗಿ, ಬಳ್ಳಾರಿ, ಮಂಗಳೂರು, ದೊಡ್ಡಬಳ್ಳಾಪುರ, ಬಾಗಲಕೋಟೆ ಜಿಲ್ಲೆಗಳಿಂದಲೂ ಪೋಷಕರು ಮಕ್ಕಳೊಂದಿಗೆ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ವಿವಿಧ ವಯೋಮಾನಗಳು ಮತ್ತು ಕಲಿಕೆಯ ಹಂತಕ್ಕೆ ಅನುಗುಣವಾಗಿ ಒಟ್ಟು 285 ಸ್ಪರ್ಧೆಗಳು ಆಯೋಜಿಸಲಾಗಿತ್ತು. 4ರಿಂದ 14 ವರ್ಷದ ಮಕ್ಕಳಿಗೆ ಉತ್ಸವದಲ್ಲಿ ಪಾಲ್ಗೊಳ್ಳಲು ಅವಕಾಶವಿತ್ತು. ಪ್ರಾದೇಶಿಕ ನಿರ್ದೇಶಕ ಅರುಳ್ ಸುಬ್ರಮಣ್ಯಂ ಇದ್ದರು.

ಚಿತ್ರಾವಳಿ



ದಿ ನ್ಯಾಷನಲ್ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಹೊರತಂದಿರುವ 'ದಿ ವಿಷನ್' ನಿಯತಕಾಲಿಕ ಬಿಡುಗಡೆ ಸಮಾರಂಭದಲ್ಲಿ ಡಾ.ಎಚ್.ಬಿ.ವೈಶಾಲಿ, ಗೌರೀಶ್ ಅಕ್ಕಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಸ್.ಜಯಸಿಂಹ ಮತ್ತು ಅಂತಿಮ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿಗಳು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ



ನಾಟ್ಯ ಸನ್ನಿಧಿ ಭರತನಾಟ್ಯ ಶಾಲೆ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ನಾಟ್ಯ ಸಂಭ್ರಮ 2022' ಉತ್ಸವದಲ್ಲಿ ಯುವ ನೃತ್ಯಪಟುಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತರ ಸಂಪರ್ಕಾಧಿಕಾರಿ ಶಂಕರ್ ಎಸ್.ಎನ್. ಗೌರವಿಸಿದರು. ಕಲಾವಿದರಾದ ಮೋನಿಷಾ, ದ್ವಾರಕಿ ಕೃಷ್ಣಸ್ವಾಮಿ ಮತ್ತಿತರರು ಇದ್ದಾರೆ

ಶಿಕ್ಷಣ ಕೇಸರೀಕರಣದ ವಿರುದ್ಧ ಅಭಿಯಾನ: ಎಂ.ಎಸ್. ಸಾಜಿದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣ ಕ್ಷೇತ್ರವನ್ನು ಕೇಸರೀಕರಣಗೊಳಿಸಲು ಅಡಿಪಾಯವಾಗಿದೆ' ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ರಾಷ್ಟ್ರೀಯ ಅಧ್ಯಕ್ಷ ಎಂ.ಎಸ್. ಸಾಜಿದ್ ಆರೋಪಿಸಿದರು.

'ಬಿಜೆಪಿ ಮತ್ತು ಆರ್‌ಎಸ್‌ಎಸ್ ಶೈಕ್ಷಣಿಕ ಸಂಸ್ಥೆಗಳು ಹಿಂದುತ್ವದ ಸಾಂಸ್ಕೃತಿಕ ಪ್ರಾಬಲ್ಯವನ್ನು ಸೃಷ್ಟಿಸಲು ಶಿಕ್ಷಣ ವ್ಯವಸ್ಥೆಯನ್ನು ವಿಷಪೂರಿತಗೊಳಿಸುತ್ತಿವೆ. ಶಾಲಾ ಪಠ್ಯಪುಸ್ತಕಗಳಿಂದ ಜಾತ್ಯತೀತ, ಸಾಂವಿಧಾನಿಕ ಮತ್ತು ಅಂತರ್ಗತ ವಿಷಯಗಳನ್ನು ತೆಗೆದು ಹಾಕಿ, ಆರ್‌ಎಸ್‌ಎಸ್ ಕೇಂದ್ರೀಕೃತ ಶಿಕ್ಷಣ ಯೋಜನೆಯನ್ನು ವಿನ್ಯಾಸಗೊಳಿಸಿದೆ. ಎನ್‌ಇಪಿ ಆ ಯೋಜನೆಯ ಸಾಧನ' ಎಂದು ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'2014ರಿಂದ ಕೇಂದ್ರ ಬಿಜೆಪಿ ಸರ್ಕಾರದ ಅವಧಿಯಲ್ಲಿ ಎನ್‌ಸಿಇಆರ್‌ಟಿ, ಸಿಬಿಎಸ್‌ಇ ಪಠ್ಯಪುಸ್ತಕಗಳಲ್ಲಿ ವ್ಯಾಪಕ ಬದಲಾವಣೆಗಳನ್ನು ಮಾಡಲಾಗಿದೆ. ಮಾನವ ಅಭಿವೃದ್ಧಿ (ಎಚ್‌ಆರ್‌ಡಿ) ಸಚಿವಾಲಯವು 6ರಿಂದ 12ನೇ ತರಗತಿಗಳ 182 ಪಠ್ಯಪುಸ್ತಕಗಳ ವಿಷಯಗಳನ್ನು ಬದಲಾಯಿಸಿದೆ. ಶಾಲಾ ಪಠ್ಯಪುಸ್ತಕಗಳನ್ನು ತರ್ಕಬದ್ಧಗೊಳಿಸುವ ನೆಪದಲ್ಲಿ 1,334 ವಿಷಯಗಳನ್ನು ತೆಗೆದು ಹಾಕಲಾಗಿದೆ. ಭಾರತೀಕರಣದ ನೆಪದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಹಿಂದುತ್ವದ ಆಧಾರದಲ್ಲಿ ರೂಪಿಸಲಾಗುತ್ತಿದೆ' ಎಂದರು

'ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ರಾಷ್ಟ್ರೀಯ ಸಮಿತಿಯು ಆಗಸ್ಟ್ 25ರಿಂದ ಸೆಪ್ಟೆಂಬರ್ 25ರವರೆಗೆ ಅಂತರ್ಗತ ಶಿಕ್ಷಣಕ್ಕಾಗಿ 'ಡಿಟಾಕ್ಸ್ ಎಜುಕೇಷನ್ ಡಿಪೋರ್ಟ್ ಹಿಂದುತ್ವ' ಅಭಿಯಾನವನ್ನು ಹಮ್ಮಿಕೊಂಡಿದೆ. ಈ ಅಭಿಯಾನದಲ್ಲಿ ಕ್ಯಾಂಪಸ್ ಮಾತುಕತೆಗಳು, ವಿಚಾರಗೋಷ್ಠಿಗಳು, ಕಾರ್ನರ್ ಸಭೆಗಳನ್ನು ಆಯೋಜಿಸಲಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಹೊಸ ಶಿಕ್ಷಣ ನೀತಿಗಳ ಬಗ್ಗೆ ಜಾಗೃತಿ ಮೂಡಿಸಲಾಗುವುದು' ಎಂದು ಮಾಹಿತಿ ನೀಡಿದರು.

'ಶೈಕ್ಷಣಿಕ ಕೇಂದ್ರಗಳಲ್ಲಿ ನಮಾಜ್ ಮಾಡಲು ಯಾರೂ ಡಿಮ್ಯಾಂಡ್ ಮಾಡಿಲ್ಲ. ಸಂವಿಧಾನಬದ್ಧವಾಗಿ ಶಿಕ್ಷಣ ಕೇಂದ್ರಗಳಲ್ಲಿ ಯಾವುದೇ ಧಾರ್ಮಿಕ ಚಟುವಟಿಕೆಗಳಿಗೆ ಅವಕಾಶವಿಲ್ಲ' ಎಂದು ಸಿಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಅತಾವುಲ್ಲಾ ಪೂಂಜಾಲಕಟ್ಟೆ ಹೇಳಿದರು.

ರಾಜ್ಯ ಸರ್ಕಾರ- ಅಣುಶಕ್ತಿ ನಿಯಂತ್ರಣ ಮಂಡಳಿ ಜತೆ ಒಪ್ಪಂದಕ್ಕೆ ಕುತ್ತು ಸಾಧ್ಯತೆ

ಒಪ್ಪಂದ ಉಲ್ಲಂಘಿಸಿ ನಿರ್ದೇಶಕರ ನೇಮಕ!

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಅಣು ಶಕ್ತಿ ನಿಯಂತ್ರಣ ಮಂಡಳಿ (ಎಇಆರ್‌ಬಿ) ಜತೆ ಮಾಡಿಕೊಂಡಿದ್ದ ಒಪ್ಪಂದದ ನಿಯಮಾವಳಿಗಳನ್ನು ಉಲ್ಲಂಘಿಸಿ ರಾಜ್ಯ ಕ್ಷ–ಕಿರಣ ಮತ್ತು ವಿಕಿರಣಾ ಸುರಕ್ಷತಾ ನಿರ್ದೇಶನಾಲಯದ (ಡಿಆರ್‌ಎಸ್) ನಿರ್ದೇಶಕರ ಹುದ್ದೆಗೆ ವಾಣಿ ವಿಲಾಸ ಆಸ್ಪತ್ರೆಯ ಪ್ರಾಧ್ಯಾಪಕರನ್ನು ಸರ್ಕಾರ ನೇಮಿಸಿದೆ.

ಈ ಹುದ್ದೆಯನ್ನು ಭರ್ತಿ ಮಾಡಲು ಮಂಡಳಿ ಮತ್ತು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರ ಮಧ್ಯೆ ಒಪ್ಪಂದವಾಗಿತ್ತು. ಈ ಬಗ್ಗೆ ಉಭಯ ಇಲಾಖೆಗಳು ಸ್ಪಷ್ಟವಾದ ಒಪ್ಪಂದ ಮಾಡಿಕೊಂಡಿದ್ದವು.

ಒಪ್ಪಂದದ ಅನ್ವಯ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಭೌತವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು ಮತ್ತು ರೇಡಿಯಾಲಜಿಕಲ್ ಭೌತ ವಿಜ್ಞಾನದಲ್ಲಿ ಎಂ.ಎಸ್ಸಿ ಡಿಪ್ಲೊಮಾ ಪಡೆದಿರಬೇಕು. ಜತೆಗೆ, ಪ್ರತಿಷ್ಠಿತ ಅಕಾಡೆಮಿಕ್ ಅಥವಾ ಸಂಶೋಧನಾ ಸಂಸ್ಥೆಗಳಲ್ಲಿ ವಿಕಿರಣ ಸುರಕ್ಷತೆಗೆ ಸಂಬಂಧಿಸಿದಂತೆ ಐದು ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಅನುಭವ ಇರಬೇಕು ಎಂದು ಸೂಚಿಸಲಾಗಿತ್ತು. ಈ ಬಗ್ಗೆ 2021ರ ಡಿಸೆಂಬರ್ 27ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಆದರೆ, ಈ ನಿರ್ದೇಶಕರ ಹುದ್ದೆಗೆ ವೈದ್ಯಕೀಯ ಶಿಕ್ಷಣ ಇಲಾಖೆಗೆ ಸೇರಿದ ವಾಣಿ ವಿಲಾಸ ಆಸ್ಪತ್ರೆಯ ಕ್ಷ–ಕಿರಣ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥ ಡಾ.ಎನ್. ರವಿ ಅವರನ್ನು ಮುಂದಿನ ಮೂರು ವರ್ಷಗಳ ಅವಧಿವರೆಗೆ ನೇಮಿಸಲಾಗಿದೆ.

ಈ ಹುದ್ದೆಯ ಜತೆಗೆ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಯ ಜವಾಬ್ದಾರಿಯನ್ನು ಹೆಚ್ಚುವರಿಯಾಗಿ ನಿರ್ವಹಿಸಲು ಸೂಚಿಸಲಾಗಿದೆ. ಆರೋಗ್ಯ ಸಚಿವರು ಈ ನೇಮಕಕ್ಕೆ ಅನುಮೋದನೆ ನೀಡಿದ್ದಾರೆ.

2018ರ ಡಿಸೆಂಬರ್ 22ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಎಇಆರ್‌ಬಿ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಈ ಒಪ್ಪಂದವು ಐದು ವರ್ಷಗಳ ಅವಧಿಗೆ ಅಥವಾ ಪರಸ್ಪರ ಚರ್ಚೆಯ ಅನ್ವಯ ವಿಸ್ತರಿಸಬಹುದಾಗಿದೆ.

ಪ್ರಜಾವಾಣಿ ವಿಶೇಷ

'ಪರಿಶೀಲಿಸಲಾಗುವುದು'

ನಿರ್ದೇಶಕರ ನೇಮಕಕ್ಕೆ ಸಂಬಂಧಿಸಿದಂತೆ ಒಪ್ಪಂದದಲ್ಲಿ ಉಲ್ಲಂಘನೆಯಾಗಿದ್ದರೆ ಪರಿಶೀಲನೆ ನಡೆಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಒಪ್ಪಂದದಲ್ಲಿ ಏನಿದೆ?

- ರೇಡಿಯೊ ಡಯಾಗ್ನಸಿಸ್ ಅಥವಾ ರೇಡಿಯೊ ಥೆರಪಿಯಲ್ಲಿ ಎಂಬಿಬಿಎಸ್ ಮತ್ತು ಎಂ.ಡಿ. ಪದವಿ ಪಡೆದವರನ್ನು ನೇಮಿಸಬಾರದು ಎಂದು ಎಇಆರ್‌ಬಿ ಸ್ಪಷ್ಟವಾಗಿ ಸೂಚಿಸಿತ್ತು.
- ಯಾವುದಾದರೂ ಅಂಶಗಳನ್ನು ಉಲ್ಲಂಘಿಸಿದರೆ ಈ ಐದು ವರ್ಷಗಳ ಅವಧಿಯ ಒಳಗೆ ಆರೋಗ್ಯ ಇಲಾಖೆ ಅಥವಾ ಎಇಆರ್‌ಬಿ ಒಪ್ಪಂದವನ್ನು ತಿರಸ್ಕರಿಸಬಹುದಾಗಿದೆ. ಇದಕ್ಕಾಗಿ ಆರು ತಿಂಗಳ ಮುಂಚೆ ನೋಟಿಸ್ ನೀಡಬೇಕು.
- ಯಾವುದಾದರೂ ಸಂಸ್ಥೆ ವಿಕಿರಣ ಸುರಕ್ಷತೆಯ ನಿಯಮಗಳನ್ನು ಉಲ್ಲಂಘಿಸಿರುವುದು ಡಿಆರ್‌ಎಸ್ ಗಮನಕ್ಕೆ ಬಂದರೆ ತಕ್ಷಣವೇ ಎಇಆರ್‌ಬಿಗೆ ಮಾಹಿತಿ ನೀಡಬೇಕು ಮತ್ತು ಸಂಸ್ಥೆಯ ವಿರುದ್ಧ ಕ್ರಮಕೈಗೊಳ್ಳಬೇಕು.
- ವಿಕಿರಣಾ ಸುರಕ್ಷತಾ ನಿರ್ದೇಶನಾಲಯದ ಎಲ್ಲ ಚಟುವಟಿಕೆಗಳ ವರದಿಗಳನ್ನು ಎಇಆರ್‌ಬಿಗೆ ನಿಯಮಿತವಾಗಿ ಕಳುಹಿಸಬೇಕು.
- ವರ್ಷಕ್ಕೊಮ್ಮೆ ಅಥವಾ ಅಗತ್ಯವಿದ್ದಾಗ ಪ್ರಗತಿ ಪರಿಶೀಲನೆ ನಡೆಸಬೇಕು.
- ವಿಕಿರಣ ಸುರಕ್ಷತೆ ಬಗ್ಗೆ ವಿಚಾರ ಸಂಕಿರಣ, ಸೆಮಿನಾರ್ ಹಾಗೂ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
- ಕನಿಷ್ಠ ಮೂರು ವರ್ಷಗಳಿಗೆ ಡಿಆರ್‌ಎಸ್ ಸಿಬ್ಬಂದಿಗೆ ತರಬೇತಿ ನೀಡಬೇಕು

ಸಿದ್ದರಾಮಯ್ಯಗೆ ಝಡ್ ಶ್ರೇಣಿಯ ಭದ್ರತೆ: ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ವಿರೋಧದ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಝಡ್ ಶ್ರೇಣಿಯ ಭದ್ರತೆ ಕಲ್ಪಿಸುವ ಸಾಧ್ಯತೆಯಿದ್ದು, ಮಂಗಳವಾರ ಈ ಸಂಬಂಧ ಅಧಿಕೃತ ಆದೇಶ ಹೊರಬೀಳುವ ಸಾಧ್ಯತೆಯಿದೆ.

ರಾಜ್ಯದ ಆಂತರಿಕ ಭದ್ರತಾ ವಿಭಾಗ ಹಾಗೂ ಅತಿ ಗಣ್ಯರ ಭದ್ರತಾ ವಿಭಾಗದ ಅಧಿಕಾರಿಗಳು ಎರಡು ಬಾರಿ ಸಭೆ ನಡೆಸಿದ್ದು, ಸಿದ್ದರಾಮಯ್ಯ ಅವರಿಗೆ ಹೆಚ್ಚಿನ ಭದ್ರತೆ ನೀಡುವುದಕ್ಕೆ ಶಿಫಾರಸು ಮಾಡಿದ್ದಾರೆ. ಈ ಪ್ರಸ್ತಾವವು ಗೃಹ ಇಲಾಖೆ ಹಿರಿಯ ಅಧಿಕಾರಿಗಳ ಕೈಸೇರಿದೆ ಎಂದು ಮೂಲಗಳು ತಿಳಿಸಿವೆ.

ಕಾರಿನ ಮೇಲೆ ಮೊಟ್ಟೆ ದಾಳಿಯಾದ ಬಳಿಕ ಸಿದ್ದರಾಮಯ್ಯ ಅವರ ಪುತ್ರ, ಶಾಸಕ ಯತೀಂದ್ರ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಮುಖಂಡರು ಆತಂಕ ವ್ಯಕ್ತಪಡಿಸಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ವಿರೋಧ ಪಕ್ಷದ ನಾಯಕರಿಗೆ ಹೆಚ್ಚಿನ ಭದ್ರತೆ ಒದಗಿಸುವ ಭರವಸೆ ನೀಡಿದ್ದರು.

ಈಗಾಗಲೇ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನೇಮಿಸಲಾಗಿದೆ. ಅವರ ಪ್ರವಾಸದ ವೇಳೆ ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ. ಯಾವ ಶ್ರೇಣಿಯ ಭದ್ರತೆ ನೀಡಬಹುದು ಎಂಬುದನ್ನು ಗೃಹ ಇಲಾಖೆ ತೀರ್ಮಾನಿಸಲಿದೆ ಎಂದು ಮೂಲಗಳು ತಿಳಿಸಿವೆ.

ಉತ್ತರ ವಿಭಾಗದಲ್ಲಿ ವಾಹನ ಕಳವು ಪ್ರಕರಣ ಹೆಚ್ಚಳ

ವಾಹನ ಕಳವು, ಪೊಲೀಸರಿಗೂ ತಲೆನೋವು

● ಆದಿತ್ಯ ಕೆ.ಎ.

ಬೆಂಗಳೂರು: ನಗರದ ನಾನಾ ಸ್ಥಳಗಳಲ್ಲಿ ಬೈಕ್, ಕಾರು, ಆಟೊ ನಿಲುಗಡೆ ಮಾಡಿ, ಕೆಲಸ ಮುಗಿಸಿ ವಾಪಸ್ ಬರುವಷ್ಟರಲ್ಲಿ ಅವುಗಳು ಆ ಸ್ಥಳದಿಂದ 'ಮಾಯ' ಆಗುತ್ತಿವೆ. ರಾಜಧಾನಿಯಲ್ಲಿ ವಾಹನ ಕಳ್ಳರ ಹಾವಳಿ ಮಿತಿ ಮೀರಿದ್ದು, ವಾಹನಗಳ ಸುರಕ್ಷತೆಯ ಪ್ರಶ್ನೆ ಎದ್ದಿದೆ. ದೂರದ ಊರುಗಳಿಂದ ದುಡಿಮೆಗಾಗಿ ನಗರಕ್ಕೆ ಬಂದವರು ದ್ವಿಚಕ್ರ ವಾಹನಗಳನ್ನು ಕಳೆದುಕೊಂಡು ಸಾಲ ಮಾಡಿಕೊಳ್ಳುತ್ತಿದ್ದಾರೆ.

'ನಿಯಮ ಉಲ್ಲಂಘನೆಯ ನೆಪದಲ್ಲಿ ಪೊಲೀಸರು ಕಂಡಕಂಡಲ್ಲಿ ದ್ವಿಚಕ್ರ ವಾಹನ ಸವಾರರಿಗೆ ದಂಡ ಹಾಕುತ್ತಾರೆ. ಆದರೆ, ವಾಹನಗಳಿಗೆ ಸುರಕ್ಷತೆ ಮಾತ್ರ ನೀಡುತ್ತಿಲ್ಲ. ಬಹುತೇಕ ಕಚೇರಿಗಳ ಸುತ್ತಮುತ್ತ ನಿಲುಗಡೆಗೆ ಸ್ಥಳದ ಕೊರತೆಯಿದ್ದು, ದೂರ ನಿಲ್ಲಿಸಿ ಬರಬೇಕು. ಬಂದಾಗ ಬೈಕ್‌ಗಳೇ ಇರುವುದಿಲ್ಲ' ಎಂದು ಬೈಕ್ ಕಳೆದುಕೊಂಡ ಅಭಿನಂದನ್ ಅವರು ನೋವು ತೋಡಿಕೊಂಡರು.

ಎಂಟು ವಿಭಾಗಗಳ ಪೈಕಿ ಉತ್ತರ ವಿಭಾಗ, ಕೇಂದ್ರೀಯ ವಿಭಾಗ ಹಾಗೂ ವೈಟ್‌ಫೀಲ್ಡ್ ವಿಭಾಗಗಳಲ್ಲಿ ವಾಹನ ಕಳವು ಪ್ರಕರಣಗಳು ಹೆಚ್ಚಾಗಿವೆ. ಈ ಭಾಗಗಳಲ್ಲಿ ಪೊಲೀಸರು ಹಲವು ಕೈಗೊಂಡರೂ ಕಳ್ಳರ ಹಾವಳಿ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಉತ್ತರ ವಿಭಾಗದ ಹೆಬ್ಬಾಳ, ರಾಜಾಜಿನಗರ, ಆರ್‌ಟಿ ನಗರ, ಪೀಣ್ಯ, ಸಂಜಯ ನಗರ, ಗಂಗಮ್ಮನ ಗುಡಿ, ಜೆ.ಸಿ ನಗರ, ಸೋಲದೇವನಹಳ್ಳಿ, ಪೀಣ್ಯ, ಮಹಾಲಕ್ಷ್ಮಿ ಲೇಔಟ್, ಶ್ರೀರಾಮಪುರ, ಸುಬ್ರಹ್ಮಣ್ಯ ನಗರ, ಆರ್‌ಎಂಸಿ ಯಾರ್ಡ್ ಭಾಗದಲ್ಲಿ ಬೈಕ್ ನಿಲುಗಡೆ ಮಾಡಿ ತೆರಳುವುದಕ್ಕೂ ಭಯ ಪಡಬೇಕಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಕಳವು ಮಾಡಲಾಗಿದ್ದ 51 ಬೈಕ್ ಹಾಗೂ 7 ತ್ರಿಚಕ್ರ ವಾಹನಗಳನ್ನು ಉತ್ತರ ವಿಭಾಗದ ಪೊಲೀಸರು ಎರಡು ದಿನಗಳ ಹಿಂದಷ್ಟೆ ವಶಪಡಿಸಿಕೊಂಡಿದ್ದರು. ನಕಲಿ ಕೀ ಬಳಸಿ ವಾಹನ ಕದಿಯುವ ಪ್ರತ್ಯೇಕ ತಂಡಗಳು ಕಾರ್ಯಾಚರಣೆ ಮಾಡುತ್ತಿವೆ. ಹೊಸ ವಾಹನಗಳೇ ಕಳ್ಳರ ಪಾಲಾಗುತ್ತಿವೆ.

'ಕದ್ದ ಬೈಕ್‌ಗಳ ಬಿಡಿ ಭಾಗ ಬೇರ್ಪಡಿಸಿ ಮಾರಾಟ ಮಾಡುತ್ತಿದ್ದಾರೆ. ಬಿಡಿ ಭಾಗ ಖರೀದಿಸುವ ಸಾಕಷ್ಟು ಮಂದಿ ಶಿವಾಜಿನಗರ, ಪೀಣ್ಯ, ದಾಸರಹಳ್ಳಿ, ಸುಂಕದಕಟ್ಟೆ, ಕೆಂಗೇರಿ, ಬ್ಯಾಟರಾಯನಪುರ ಭಾಗಗಳಲ್ಲಿ ಇದ್ದಾರೆ. ಹಳೇ ಬಿಡಿಭಾಗಗಳಿಗೆ ಬಣ್ಣ ಹಚ್ಚಿ ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ, ಕಳವು ಮಾಡಿದ ಬೈಕ್‌ಗಳನ್ನು ಪತ್ತೆ ಹಚ್ಚುವುದು ಸವಾಲಾಗಿದೆ' ಎನ್ನುವುದು ಪೊಲೀಸ್ ಇಲಾಖೆಯ ತನಿಖಾಧಿಕಾರಿಗಳ ಪ್ರತಿಕ್ರಿಯೆ.



ಎರಡು ತಿಂಗಳಿಂದ ವಾಹನ ಕಳವು, ಮನೆ ದರೋಡೆ ಪ್ರಕರಣ ಪತ್ತೆಗೆ ಮೊದಲ ಆದ್ಯತೆ ನೀಡಲಾಗುತ್ತಿದೆ. ಈ ಪ್ರಕರಣಗಳು ಕಡಿಮೆಯಾದರೆ ಸ್ಥಳೀಯರ ಆತಂಕ ದೂರವಾಗಲಿದೆ.

ಪ್ರತಾಪ್ ರೆಡ್ಡಿ, ನಗರ ಪೊಲೀಸ್ ಆಯುಕ್ತ



ಕಳವಾಗಿದ್ದ ಬೈಕ್‌ಗಳನ್ನು ವಶಪಡಿಸಿಕೊಂಡ ಪೊಲೀಸರು

ಹೆಚ್ಚು ವಾಹನ ಕಳವು ನಡೆದ ವಿಭಾಗ
(ಜ.1ರಿಂದ ಆಗಸ್ಟ್ 15ರ ತನಕ)

ವಿಭಾಗ	ವಾಹನ ಮಾದರಿ	ಒಟ್ಟು
ಉತ್ತರ	ಬೈಕ್	122
	ಆಟೊ	7
	ಕಾರು	70
ಕೇಂದ್ರೀಯ	ಬೈಕ್	27
	ಕಾರು	7
ವೈಟ್‌ಫೀಲ್ಡ್	ಬೈಕ್	127
	ಕಾರು	18
	ಆಟೊ	2

(ಪೊಲೀಸ್ ಆಯುಕ್ತರ ಕಚೇರಿಗೆ ವಿಭಾಗವಾರು ಸಲ್ಲಿಸಿರುವ ಪ್ರಕರಣಗಳ ಮಾಹಿತಿ)

ಕದ್ದ ಬೈಕ್‌ಗಳಿಗೆ ಆಂಧ್ರದಲ್ಲಿ ಬೇಡಿಕೆ

ಕದ್ದ ಬೈಕ್‌ಗಳಿಗೆ ಆಂಧ್ರಪ್ರದೇಶ, ತೆಲಂಗಾಣದಲ್ಲಿ ಹೆಚ್ಚು ಬೇಡಿಕೆಯಿದೆ. ಇಲ್ಲಿ ಕದ್ದ ಬೈಕ್, ಆಟೊ, ಕಾರುಗಳನ್ನು ಆ ರಾಜ್ಯಕ್ಕೆ ಕೊಂಡೊಯ್ದು ಮಾರಾಟ ಮಾಡಿ ಬರುತ್ತಾರೆ. ಅಲ್ಲಿ ಈ ವಾಹನಗಳಿಗೆ ನಕಲಿ ದಾಖಲೆ ಮಾಡಿಕೊಡುವ ದಂಧೆಯಿದೆ. ಕಳವು ಮಾಡಿದ ವಾಹನ ಮಾರಾಟ ಅಲ್ಲಿ ಸುಲಭ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

ಮಹಾಲಕ್ಷ್ಮಿಲೌಟ್‌ನಲ್ಲಿ ಲಗ್ಗೆರೆಯ ಶ್ರೀನಿವಾಸ್ ಎಂಬಾತ ಕದ್ದ 25 ಬೈಕ್‌ಗಳ ಪೈಕಿ 21 ಬೈಕ್‌ಗಳನ್ನು ಆಂಧ್ರಪ್ರದೇಶಕ್ಕೆ ಮಾರಾಟ ಮಾಡಿದ್ದ. ಮಹಾಲಕ್ಷ್ಮಿಪುರ ಪೊಲೀಸರು ಅಲ್ಲಿಗೆ ತೆರಳಿ ಬೈಕ್‌ಗಳನ್ನು ವಶಕ್ಕೆ ಪಡೆದಿದ್ದರು.



ಬೆಂಗಳೂರಿನ ಐಐಎಂಬಿ 'ಸಾರ್ವಜನಿಕ ನೀತಿ ಮತ್ತು ನಿರ್ವಹಣೆ' ಕುರಿತು ಸೋಮವಾರ ಆಯೋಜಿಸಿದ್ದ ಸಮ್ಮೇಳನದಲ್ಲಿ ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ಮಾತನಾಡಿದರು. ಐಐಎಂಬಿ ನಿರ್ದೇಶಕ ಪ್ರೊ.ರಿಷಿಕೇಶ ಕೃಷ್ಣನ್ ಇದ್ದರು ಪ್ರಜಾವಾಣಿ ಚಿತ್ರ.

'ಆತ್ಮಸಾಕ್ಷಿಯ ಜಾಗೃತಿಯೇ ಸಾರ್ವಜನಿಕ ನೀತಿಯ ಅಳತೆಗೋಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ನೀತಿ ಎಂಬುದು ಎಷ್ಟು ಪ್ರಭಾವಿ ಎಂದು ನಿರ್ಧಾರವಾಗುವುದು ಅದನ್ನು ಎಷ್ಟು ಜನರು ಒಪ್ಪಿದ್ದಾರೆ ಎನ್ನುವುದಕ್ಕಿಂತ ಅದು ಎಷ್ಟು ಜನರ ಆತ್ಮಸಾಕ್ಷಿಯನ್ನು ಜಾಗೃತಗೊಳಿಸಿದೆ ಎಂಬುದರ ಮೇಲೆ ಎಂದು ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ಹೇಳಿದರು.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ 'ಸಾರ್ವಜನಿಕ ನೀತಿ ಮತ್ತು ನಿರ್ವಹಣೆ' ಕುರಿತು ಸೋಮವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾನ್ಯ ಜನರ ಭಾಗವಹಿಸುವಿಕೆಯಿಂದಲೇ ಸರ್ಕಾರದ ನೀತಿಗಳು ಅದ್ಭುತ ಪರಿಣಾಮ ಬೀರಲು ಸಾಧ್ಯ. ಆಧಾರ್ ನೋಂದಣಿ, ಲಸಿಕೆ, ಪೋಲಿಯೊ ಅಭಿಯಾನದಲ್ಲಿ ಸಾರ್ವಜನಿಕ ನೀತಿಗಳ ಪ್ರಭಾವ ಮತ್ತು ಯಶಸ್ಸು ಸಾಕ್ಷಿದೆ. ಹಾಗೆಯೇ, ಅಸ್ಪೃಶ್ಯತೆಯ ನಿಷೇಧವು ಪರಿವರ್ತನೆ ಮತ್ತು ಆತ್ಮಸಾಕ್ಷಿ ಜಾಗೃತಿಯ ಅದ್ಭುತ ಯಶಸ್ಸಿನ ಕಥೆಗಳು ಎಂದು ಬಣ್ಣಿಸಿದರು.

ಸಮುದಾಯದ ಗ್ರಹಿಕೆ, ಆತ್ಮಸಾಕ್ಷಿಯೇ ಭಾರತದ ಅಭಿವೃದ್ಧಿಯ ಶಕ್ತಿ. ಇಂತಹ ಬದಲಾವಣೆಗೆ ಬೌದ್ಧಿಕ ಅಂಶಗಳೇ ಪ್ರಧಾನವಾಗಿವೆ ಎಂದರು.

ಸಂತೋಷ ಮತ್ತು ಅದರ ಅನ್ವೇಷಣೆಯನ್ನು ವ್ಯಾಖ್ಯಾನಿಸುವುದು ಕಷ್ಟಕರ ಕೆಲಸ. 2001ರಲ್ಲಿ ಮಹಿಳೆಯೊಬ್ಬರು ಈ ಜಗತ್ತು ಜೀವಿಸಲು ಒಳ್ಳೆಯ ಜಾಗವೋ, ಅಲ್ಲವೋ ಎಂದು ಕೇಳಿದ ಪ್ರಶ್ನೆಗೆ ಉತ್ತರವಿನ್ನೂ ಸಿಕ್ಕಿಲ್ಲ. ಸಂತೋಷ ಎನ್ನುವುದು ಅವರವರ ಆಯ್ಕೆಯ ವಿಷಯ. ಮಾನವೀಯತೆಯ ಮುಂದೆ ಎಲ್ಲವೂ ಗೌಣ ಎಂದರು.

ಐಐಎಂಬಿ ನಿರ್ದೇಶಕ ಪ್ರೊ. ರಿಷಿಕೇಶ ಟಿ. ಕೃಷ್ಣನ್, ಸಾರ್ವಜನಿಕ ವ್ಯವಸ್ಥೆಗಳು ಮತ್ತು ಸಾರ್ವಜನಿಕ ನೀತಿಯ ಮೇಲೆ ಕೆಲಸ ಮಾಡುವ ಸಂಸ್ಥೆಯ ಸುದೀರ್ಘ ಇತಿಹಾಸದ ಕುರಿತು ಮಾಹಿತಿ ಹಂಚಿಕೊಂಡರು.

ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿಯ ಪ್ರೊ.ಅರ್ನಾಬ್ ಮುಖರ್ಜಿ, ಐಐಎಂಬಿ ಅಧ್ಯಾಪಕಿ ವಿನಿತಾ ಬಾಲಿ ಉಪಸ್ಥಿತರಿದ್ದರು.



ಪ್ರತಿಭಾ ಪುರಸ್ಕಾರ

ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್‌ನ ನೌಕರರ ಪತ್ತಿನ ಸಹಕಾರ ಸಂಘದ 50ನೇ ಸರ್ವ ಸದಸ್ಯರ ಸಭೆ ಭಾನುವಾರ ನಡೆಯಿತು. ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ್ದ ನೌಕರರ ಮಕ್ಕಳನ್ನು ಸಂಘದಿಂದ ಪುರಸ್ಕರಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ರಾಜೀವ್ ವೇಲೂರ್, ಸಂಘದ ಅಧ್ಯಕ್ಷ ಎಚ್.ಎ. ಪ್ರಕಾಶ್ ಹಾಗೂ ಸಂಘದ ಪದಾಧಿಕಾರಿಗಳು ಇದ್ದರು –ಪ್ರಜಾವಾಣಿ ಚಿತ್ರ

ಹೆತ್ತ ಮಗುವನ್ನೇ ಕೊಂದ ತಾಯಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮೂರು ವರ್ಷದ ಮಗುವನ್ನು ಹೆತ್ತ ತಾಯಿಯೇ ನೀರಿನ ಟಬ್‌ನಲ್ಲಿ ಮುಳುಗಿಸಿ ಕೊಂದ ಘಟನೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡಾನೆಕುಂದಿಯ ಗುರುರಾಜ ಲೇಔಟ್‌ನಲ್ಲಿ ನಡೆದಿದೆ.

ಸಂಯುಕ್ತ ಕೊಲೆಯಾದ ಮಗು. ತಾಯಿ ಗಾಯತ್ರಿದೇವಿ ಮಗುವನ್ನು ಸಾಯಿಸಿ, ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆಕೆ ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತಮಿಳುನಾಡಿನ ವೆಲ್ಲೂರಿನ ನರೇಂದ್ರನ್ ಎಂಬುವರು ಐದು ವರ್ಷಗಳ ಹಿಂದೆ ಗಾಯಿತ್ರಿ ದೇವಿಯನ್ನು ಮದುವೆಯಾಗಿದ್ದರು. ಕಂಪನಿಯೊಂದರಲ್ಲಿ ಅಕೌಂಟೆಂಟ್ ಆಗಿರುವ ನರೇಂದ್ರನ್, ಕಾರ್ಯ ನಿಮಿತ್ತ ತಮಿಳುನಾಡಿಗೆ ತೆರಳಿದ್ದರು. ಮನೆಯಲ್ಲಿ ಮಗಳು ಹಾಗೂ ಪತ್ನಿ ಇಬ್ಬರೇ ಇದ್ದರು. ಆ ಸಂದರ್ಭದಲ್ಲಿ ಈ ದುರ್ಘಟನೆ ನಡೆದಿದೆ.

'ತಮಿಳುನಾಡಿನಿಂದ ಭಾನುವಾರ ಬೆಳಿಗ್ಗೆ ನರೇಂದ್ರನ್ ವಾಪಸ್ ಬಂದಾಗ ಮನೆಯ ಬಾಗಿಲು ತೆರೆದು ಇರಲಿಲ್ಲ. ಅನುಮಾನಗೊಂಡು ಬಾಗಿಲು ಒಡೆದು ನೋಡಿದಾಗ ಟಬ್‌ನಲ್ಲಿ ಮಗು ಮೃತಪಟ್ಟಿರುವುದು ಕಂಡುಬಂದಿತ್ತು. ಪತ್ನಿಯೂ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಸದ್ಯ ಆಕೆಗೆ ಐಸಿಯುನಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗಾಯಿತ್ರಿದೇವಿ ಅವರು ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಆದರೆ ಚಿಕಿತ್ಸೆ ಪಡೆದುಕೊಂಡಿರಲಿಲ್ಲ. ಇದರಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ. ಇದೇ ಹಿನ್ನೆಲೆಯಲ್ಲಿ ಕೃತ್ಯ ಎಸಗಿರುವ ಸಾಧ್ಯತೆಯಿದೆ ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

ಯುವಕ ನೀರುಪಾಲು

ಬೆಂಗಳೂರು: ಗಣೇಶನ ಮೂರ್ತಿ ವಿಸರ್ಜನೆಗೆ ಕೆರೆಯ ಆಳ ತಿಳಿಯಲು ಹೋಗಿ ಕುದುರೆಗೆರೆ ಗ್ರಾಮದಲ್ಲಿ ಚಿಕ್ಕಬಾಣಾವರದ ಯುವಕ ಬಸವರಾಜ ಜವಳಿ (19) ಎಂಬುವವರು ನೀರುಪಾಲಾಗಿದ್ದಾರೆ.

ಜವಳಿ ಪದವಿ ವ್ಯಾಸಂಗ ಮಾಡುತ್ತಿದ್ದರು. ಗ್ರಾಮದಲ್ಲಿ ಗಣೇಶಮೂರ್ತಿ ಪ್ರತಿಷ್ಠಾಪನೆಯ ಬಳಿಕ ಈ ಕೆರೆಯಲ್ಲಿ ವಿಸರ್ಜನೆ ಮಾಡಲು ಯುವಕರು ನಿರ್ಧರಿಸಿದ್ದರು. ಆಳ ತಿಳಿಯಲು ಕೆರೆಗೆ ಇಳಿದಿದ್ದರು. ಈಚೆಗೆ ಸುರಿದ ಉತ್ತಮ ಮಳೆಯಿಂದ ಕೆರೆ ಭರ್ತಿ ಆಗಿತ್ತು. ನೀರಿನ ಸೆಳೆತಕ್ಕೆ ಸಿಲುಕಿ ಮೇಲಕ್ಕೆ ಬರಲು ಸಾಧ್ಯವಾಗದೆ ನೀರು ಪಾಲಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪಘಾತ: ಮಹಿಳೆ ಸಾವು, ನಾಲ್ವರಿಗೆ ಗಾಯ

ಬೆಂಗಳೂರು: ಹೊಸೂರು ಮುಖ್ಯರಸ್ತೆಯ ಔಡಿ ಕಾರ್ ಶೋರೂಮ್ ಎದುರು ಸೋಮವಾರ ಬೆಳಿಗ್ಗೆ ಕ್ಯಾಂಟರ್ ಹಾಗೂ ಸರಕು ಸಾಗಣೆ ಆಟೊ ನಡುವೆ ಸಂಭವಿಸಿದ ಅಪಘಾತದಲ್ಲಿ ಮಹಿಳೆ ಮೃತಪಟ್ಟು ನಾಲ್ವರು ಪ್ರಯಾಣಿಕರು ಗಾಯಗೊಂಡಿದ್ದಾರೆ.

ಪ್ರಮೀಳಾ (42) ಮೃತಪಟ್ಟವರು. ಪ್ರಭಾವತಿ (38), ಲಲಿತಾ (34), ಅಪ್ಪಸಾಬ್ (40) ಹಾಗೂ ಲಖಿತಾ (11) ಗಾಯಗೊಂಡವರು.

ಹೊಸೂರು ಮುಖ್ಯರಸ್ತೆಯಲ್ಲಿ ಕೋನಪ್ಪನ ಅಗ್ರಹಾರ ಕಡೆಯಿಂದ ವೀರಸಂದ್ರ ಜಂಕ್ಷನ್ ಕಡೆಗೆ ಕ್ಯಾಂಟರ್‌ಅನ್ನು ಚಾಲಕ ಅತಿವೇಗವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದ ವೇಳೆ ಎಲೆಕ್ಟ್ರಾನಿಕ್ ಸಿಟಿ ಟೋಲ್ ಹತ್ತಿರ ಸರಕು ಸಾಗಣೆ ಆಟೊಗೆ ಡಿಕ್ಕಿಯಾಗಿದೆ. ಸರಕು ಆಟೊ ಪಲ್ಟಿಯಾದ ಪರಿಣಾಮ ಪ್ರಮೀಳಾ ಗಂಭೀರವಾಗಿ ಗಾಯಗೊಂಡಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಅವರು ಆಸ್ಪತ್ರೆಯಲ್ಲಿ ಮೃತಪಟ್ಟರು.

ಕ್ಯಾಂಟರ್ ಚಾಲಕ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ 5 ಸಾವಿರ ಗಡಿಯತ್ತ ಡೆಂಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದೊಂದು ವಾರದಲ್ಲಿ 353 ಮಂದಿಗೆ ಡೆಂಗಿ ಜ್ವರ ದೃಢಪಟ್ಟಿದೆ. ಈವರೆಗೆ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 5 ಸಾವಿರದ ಗಡಿ (4,954) ಸಮೀಪಿಸಿದೆ.

ಹವಾಮಾನದಲ್ಲಿನ ಬದಲಾವಣೆ ಹಾಗೂ ಮಳೆಯಿಂದಾಗಿ ರಾಜ್ಯದಲ್ಲಿ-ಡೆಂಗಿ ಜ್ವರಕ್ಕೆ ಒಳಪಡುವವರ ಸಂಖ್ಯೆ ತಿಂಗಳಿಂದ ಹೆಚ್ಚಳವಾಗಿದೆ. ಈ ವರ್ಷ 99 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 41 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 39,696 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 1,058 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಡೆಂಗಿ ಪೀಡಿತರಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಕಳೆದ ವರ್ಷ 7,189 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. ಜ್ವರ ಪೀಡಿತರಲ್ಲಿ ಐವರು ಮೃತಪಟ್ಟಿದ್ದರು.

ಈ ವರ್ಷ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 459, ಉಡುಪಿಯಲ್ಲಿ 416, ದಕ್ಷಿಣ ಕನ್ನಡದಲ್ಲಿ 224, ಚಿತ್ರದುರ್ಗದಲ್ಲಿ 213 ಹಾಗೂ ಶಿವಮೊಗ್ಗದಲ್ಲಿ 199 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 200ಕ್ಕಿಂತ ಕಡಿಮೆ ಇವೆ.

'ಊಟ ಚರ್ಚೆಯ ವಿಚಾರವೇ ಅಲ್ಲ'

ಬೆಂಗಳೂರು: 'ರಾಜಕಾರಣದಲ್ಲಿ ಊಟ ಎಂಬುದು ಚರ್ಚೆಯ ವಿಚಾರವೇ ಅಲ್ಲ. ಆದರೆ, ಬಿಜೆಪಿ ನಾಯಕರು ಕೆಲಸಕ್ಕೆ ಬಾರದ ವಿಚಾರ ಇಟ್ಟುಕೊಂಡು ಚರ್ಚೆ ಮಾಡುತ್ತಿದ್ದಾರೆ. ರಾಜ್ಯ ಬಿಜೆಪಿ ಸರ್ಕಾರ ದುರಾಡಳಿತದ ಮೂಲಕ ಹಿಂದೂಗಳ ಬದುಕನ್ನು ಸಂಪೂರ್ಣವಾಗಿಮುಳುಗಿಸಿದೆ' ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಾತ್ವಿಕ ಆಹಾರ ಸೇವಿಸುವ ಅನಂತಕುಮಾರ್ ಹೆಗಡೆ ಸಂವಿಧಾನ ಬದಲಿಸುತ್ತೇವೆ ಎನ್ನುತ್ತಾರೆ. ತೇಜಸ್ವಿ ಸೂರ್ಯ ಜನಪ್ರತಿನಿಧಿಯಾಗಿದ್ದುಕೊಂಡೇ ಮುಸಲ್ಮಾನರ ಮೇಲೆ ನೇರವಾಗಿ ದ್ವೇಷ ಕಾರುತ್ತಾರೆ. ಸಾತ್ವಿಕ ಆಹಾರ ಸೇವಿಸುವವರು ಹೀಗೆಲ್ಲಾ ಕೆಟ್ಟದಾಗಿ ನಡೆದುಕೊಳ್ಳಬಹುದೇ' ಎಂದೂ ಪ್ರಶ್ನಿಸಿದರು.

ನಾಲ್ವರ ಬಂಧನ: 100 ಬ್ಯಾಟರಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಸೇರಿದ ಬ್ಯಾಟರಿಗಳೂ ಸೇರಿ ನಗರದ ವಿವಿಧೆಡೆ ಬ್ಯಾಟರಿ ಕಳವು ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಮಲ್ಲೇಶ್ವರ ಪೊಲೀಸರು ಬಂಧಿಸಿದ್ದಾರೆ. ₹ 5 ಲಕ್ಷ ಮೌಲ್ಯದ 100 ಬ್ಯಾಟರಿ ವಶಕ್ಕೆ ಪಡೆದಿದ್ದಾರೆ.

ತಮಿಳುನಾಡಿನ ಚಿನ್ನದೊರೆ (35), ಕಟ್ಟಿಗೇನಹಳ್ಳಿಯ ರಮೇಶ್ (45), ವೇಣುಗೋಪಾಲ (26) ಹಾಗೂ ಹೆಗ್ಡೆ ನಗರದ ವಸಂತ (23) ಎಂಬುವರನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಬಳಸಿದ ಎರಡು ಪ್ರಯಾಣಿಕರ ಆಟೊ ಹಾಗೂ ಒಂದು ಸರಕು ಸಾಗಣೆ ಆಟೊ ವಶಕ್ಕೆ ಪಡೆಯಲಾಗಿದೆ ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ ಪಾಟೀಲ ಅವರು ತಿಳಿಸಿದ್ದಾರೆ.

'ಆರೋಪಿಗಳು ಬೆಸ್ಕಾಂ ನಿಯಂತ್ರಣ ಬಾಕ್ಸ್ ಅಳವಡಿಸಿರುವ ಸ್ಥಳ ಪತ್ತೆಮಾಡಿ ರಾತ್ರಿ ವೇಳೆ ಬ್ಯಾಟರಿ ಕಳವು ಮಾಡುತ್ತಿದ್ದರು. ಮಲ್ಲೇಶ್ವರ, ಶ್ರೀರಾಮಪುರ, ಶೇಷಾದ್ರಿಪುರ, ವರ್ತೂರು, ವೈಯಾಲಿಕಾವಲ್, ಗಿರಿನಗರ, ಸದಾಶಿವನಗರ, ಹಲಸೂರು ವ್ಯಾಪ್ತಿಯಲ್ಲಿ ಬ್ಯಾಟರಿ ಕಳವು ಮಾಡಿದ್ದರು' ಎಂದು ಮಾಹಿತಿ ನೀಡಿದ್ದಾರೆ.



ಪೊಲೀಸರು ವಶಕ್ಕೆ ಪಡೆದಿರುವ ಕಳವು ಮಾಡಿದ ಬ್ಯಾಟರಿಗಳು

ಕೋಮು ಸಂಘರ್ಷ: ಶಿರಾಳಕೊಪ್ಪ ಸ್ತಬ್ಧ

ಪ್ರಜಾವಾಣಿ ವಾರ್ತೆ

ಶಿರಾಳಕೊಪ್ಪ: ಪಟ್ಟಣದಲ್ಲಿ ಸೋಮವಾರ ಇಬ್ಬರು ಯುವಕರ ಮಧ್ಯೆ ಆರಂಭವಾದ ಜಗಳ ಎರಡು ಕೋಮುಗಳ ನಡುವಿನ ಸಂಘರ್ಷಕ್ಕೆ ಆಸ್ಪದ ಮಾಡಿಕೊಟ್ಟಿತು. ಘಟನೆ ಹಿನ್ನೆಲೆಯಲ್ಲಿ ವ್ಯಾಪಾರ–ವಹಿವಾಟು ಸ್ಥಗಿತಗೊಂಡ ಪರಿಣಾಮ ಪಟ್ಟಣದಲ್ಲಿ ಅಘೋಷಿತ ಬಂದ್ ಸ್ಥಿತಿ ನಿರ್ಮಾಣವಾಗಿದೆ.

ಇಲ್ಲಿನ ಸೊರಬ ರಸ್ತೆಯಲ್ಲಿರುವ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ಸೋಮವಾರ ಮಂಚಿಕೊಪ್ಪ ವಲಯ ಮಟ್ಟದ ಕ್ರೀಡಾಕೂಟ ನಡೆಯುತ್ತಿತ್ತು. ಕ್ರೀಡಾಕೂಟ ನೋಡಲು ಬಂದಿದ್ದ ಇಬ್ಬರು ಯುವಕರು ಗಲಾಟೆ ಮಾಡಿಕೊಂಡಿದ್ದು, ಅವರನ್ನು ಕ್ರೀಡಾಂಗಣದಿಂದ ಹೊರಗಡೆ ಕಳುಹಿಸಲಾಗಿತ್ತು.

ನಂತರ ಅವರು ಹತ್ತಿರದ ಮಂಚಿಕೊಪ್ಪ ಗ್ರಾಮಕ್ಕೆ ತೆರಳುತ್ತಿರುವಾಗ ಹಿರೇಕೆರೂರು ರಸ್ತೆಯಲ್ಲಿ ಬೇರೆ ಕೋಮಿನ ಯುವಕರ ತಂಡ ಅಡ್ಡಗಟ್ಟಿ ಹಲ್ಲೆ ಮಾಡಿದೆ. ಇದರಲ್ಲಿ ಮಂಚಿಕೊಪ್ಪ ಗ್ರಾಮದ 6 ಯುವಕರು ಗಾಯಗೊಂಡಿದ್ದು, ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ. ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

₹75 ಲಕ್ಷ ಪಾವತಿಸಲು ವಿಮಾ ಸಂಸ್ಥೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ವಿಮಾ ಸಂಸ್ಥೆ ನೀಡಿದ್ದ ಭರವಸೆಯ ಪ್ರಕಾರ ಪಾಲಿಸಿದಾರರ ಕುಟುಂಬಕ್ಕೆ ₹ 75 ಲಕ್ಷ ನೀಡುವಂತೆ ಚಿಕ್ಕಬಳ್ಳಾಪುರ ಜಿಲ್ಲಾ ಗ್ರಾಹಕ ನ್ಯಾಯಾಲಯ ಆದೇಶಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ದಲಸಗೆರೆಗೆ ವೆಂಕಟೇಶ್ ಅವರು 'ದಿ ಮ್ಯಾಕ್ಸ್ ಲೈಫ್ ಇನ್‌ಶ್ಯೂರೆನ್ಸ್'ನಲ್ಲಿ 2020ರಲ್ಲಿ ಜೀವ ವಿಮಾ ಪಾಲಿಸಿ ಮಾಡಿಸಿದ್ದರು.

ವಾರ್ಷಿಕ ₹44,402 ರಂತೆ ವಿಮಾ ಕಂತು ಪಾವತಿಸಿದ್ದರು. ಪಾಲಿಸಿ ಅವಧಿ ಮುಗಿದ ತರುವಾಯ ಅಥವಾ ಈ ಅವಧಿಯಲ್ಲಿ ಪಾಲಿಸಿದಾರರು ಮೃತರಾದರೆ ಅವರ ಕುಟುಂಬಕ್ಕೆ ₹75 ಲಕ್ಷ ನೀಡುವುದಾಗಿ ಸಂಸ್ಥೆ ಭರವಸೆ ನೀಡಿತ್ತು.

ಮೊದಲ ವರ್ಷದ ವಿಮಾ ಕಂತು ಕಟ್ಟಿದ ಸ್ವಲ್ಪ ದಿನಕ್ಕೆ ವೆಂಕಟೇಶ್ ಮೃತಪಟ್ಟರು. ಸಂಸ್ಥೆ ನೀಡಿದ್ದ ಭರವಸೆಯ ಪ್ರಕಾರ ₹75 ಲಕ್ಷ ವಿಮೆ ಹಣ ನೀಡುವಂತೆ ದಾಖಲೆ ಸಲ್ಲಿಸಿದರು. ಆದರೆ, ವಿಮಾ ಸಂಸ್ಥೆಯ ಹಣ ನೀಡಲು ನಿರಾಕರಿಸಿತು. ಈ ಕಾರಣದಿಂದ ವೆಂಕಟೇಶ್ ಅವರ ಪತ್ನಿ ಸುಷ್ಮಾ ಗ್ರಾಹಕ ನ್ಯಾಯಾಲಯದ ಮೊರೆ ಹೋಗಿದ್ದರು.

ವಿಮಾ ಸಂಸ್ಥೆ 45 ದಿನಗಳ ಒಳಗೆ ₹75 ಲಕ್ಷವನ್ನು ಪಾಲಿಸಿದಾರರ ಕುಟುಂಬಕ್ಕೆ ನೀಡಬೇಕು. ಆದೇಶ ನೀಡಿದ ದಿನದಿಂದ ಹಣ ನೀಡುವ ಅವಧಿಯವರೆಗೆ ಈ ಹಣಕ್ಕೆ ವಾರ್ಷಿಕ ಶೇ 6ರ ಬಡ್ಡಿ ಪಾವತಿಸುವಂತೆ ಗ್ರಾಹಕರ ನ್ಯಾಯಾಲಯ ಆದೇಶಿಸಿದೆ. ವಿಮಾ ಸಂಸ್ಥೆಗೆ ₹2 ಸಾವಿರ ದಂಡ ವಿಧಿಸಲಾಗಿದೆ.

ದೂರುದಾರರ ಪರವಾಗಿ ಸಿ.ಕೃಷ್ಣಮೂರ್ತಿ ವಾದ ಮಂಡಿಸಿದ್ದರು.

ಮರಳು ನೀತಿ ಪರಿಷ್ಕರಣೆಗೆ ಸಿ.ಎಂ ಸೂಚನೆ

ಬೆಂಗಳೂರು: ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ಅನುಕೂಲವಾಗುವಂತೆ ಮರಳು ನೀತಿಯನ್ನು ಪರಿಷ್ಕರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, 'ಮರಳು ಗಣಿಗಾರಿಕೆ ಕೆಲವೇ ಜನರ ಹಿಡಿತದಲ್ಲಿದೆ. ಅದನ್ನು ತಪ್ಪಿಸುವಂತೆ ಮರಳು ನೀತಿಯನ್ನು ಪರಿಷ್ಕರಿಸಬೇಕು. ಜನರಿಗೆ ಕೈಗೆಟುಕುವ ದರದಲ್ಲಿ ಮರಳು ಲಭ್ಯವಾಗುವಂತೆ ಮಾಡುವುದಕ್ಕೆ ಪೂರಕವಾಗಿ ನೀತಿಯಲ್ಲಿ ಕೆಲವು ಬದಲಾವಣೆಗಳನ್ನು ತರಬೇಕು' ಎಂದರು.

ರಾಜ್ಯದಲ್ಲಿರುವ ಗಣಿಗಳನ್ನು ಆಧುನೀಕರಿಸುವುದಕ್ಕೆ ಪೂರಕವಾಗಿ ಕ್ರಮಗಳನ್ನು ಕೈಗೊಳ್ಳಬೇಕು. ವಿವಿಧ ದೇಶಗಳಲ್ಲಿ ನಡೆಯುತ್ತಿರುವ ಗಣಿಗಾರಿಕೆ ವಿಧಾನ, ಯಂತ್ರೋಪಕರಣಗಳ ಬಳಕೆ, ಖನಿಜಗಳ ಶೋಧದ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸಲು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಬೇಕು ಎಂದು ನಿರ್ದೇಶನ ನೀಡಿದರು. ಗಣಿ ಮತ್ತು ಭೂವಿಜ್ಞಾನ ಸಚಿವ ಹಾಲಪ್ಪ ಆಚಾರ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಮತ್ತು ಇತರ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಕಾಂಗ್ರೆಸ್ ಕಚೇರಿಗೆ ಸಾವರ್ಕರ್ ಚಿತ್ರ ಅಂಟಿಸಿದ ಬಿಜೆಪಿ

ವಿಜಯಪುರ: ಇಲ್ಲಿನ ಜಲನಗರದಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿ ಗೋಡೆ, ಕಿಟಕಿ, ಬಾಗಿಲುಗಳ ಮೇಲೆ ಸೋಮವಾರ ಬೆಳಿಗ್ಗೆ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಬಸವರಾಜ ಹೂಗಾರ ಸಾವರ್ಕರ್ ಭಾವಚಿತ್ರಗಳನ್ನು ಅಂಟಿಸಿದ್ದು, ಇದರಿಂದ ಕೆಲ ಸಮಯ ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು.

ಪೊಲೀಸರು ಅವುಗಳನ್ನು ತೆರವುಗೊಳಿಸಿ ಕಾಂಗ್ರೆಸ್ ಕಚೇರಿಗೆ ಭದ್ರತೆ ಒದಗಿಸಿದರು. ಘಟನೆ ಖಂಡಿಸಿ ಕಾಂಗ್ರೆಸ್ ಮುಖಂಡರು ನಗರದಲ್ಲಿ ಪ್ರತಿಭಟಿಸಿದರು. ಇದೇ ಸಮಯದಲ್ಲಿ ಬಿಜೆಪಿ ಮುಖಂಡರು, ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಇದರಿಂದ ಗೊಂದಲ ಸ್ಥಿತಿ ನಿರ್ಮಾಣವಾಗಿತ್ತು.

'ಕಚೇರಿಗೆ ಸಾವರ್ಕರ್ ಫೋಟೊ ಅಂಟಿಸಿದವರನ್ನು ಬಂಧಿಸಬೇಕು. ರಾಜಕೀಯ ಒತ್ತಡಕ್ಕೆ ಒಳಗಾಗಿ ಆರೋಪಿಯನ್ನು ಬಿಟ್ಟರೆ, ನಾವೂ ಪ್ರತಿಯಾಗಿ ಬಿಜೆಪಿಯವರು ವಿರೋಧಿಸುವವರ ಫೋಟೊವನ್ನು ಬಿಜೆಪಿ ಕಚೇರಿಗೆ ಅಂಟಿಸುತ್ತೇವೆ' ಎಂದು ವಿಜಯಪುರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಪ್ರೊ. ರಾಜು ಆಲಗೂರ ಎಚ್ಚರಿಸಿದರು.



ವಿಜಯಪುರ ನಗರದಲ್ಲಿ ಸೋಮವಾರ ಬಿಜೆಪಿ ಮುಖಂಡರು, ಕಾರ್ಯಕರ್ತರು ಸಾವರ್ಕರ್ ಭಾವಚಿತ್ರದೊಂದಿಗೆ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು –ಪ್ರಜಾವಾಣಿ ವಾರ್ತೆ

ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲವಾಗಿರುವ ಬಿಜೆಪಿಯು ಕಾಂಗ್ರೆಸ್ ಕಚೇರಿಗೆ ಸಾರ್ವಕರ್ ಭಾವಚಿತ್ರ ಅಂಟಿಸುವ ಚಿಲ್ಲರೆ ರಾಜಕಾರಣದಲ್ಲಿ ನಿರತರಾಗಿರುವುದು ಖಂಡನೀಯ

ಎಂ.ಬಿ.ಪಾಟೀಲ
ಅಧ್ಯಕ್ಷ, ಕೆಪಿಸಿಸಿ ಪ್ರಚಾರ ಸಮಿತಿ

ಸಾವರ್ಕರ್ ಭಾವಚಿತ್ರ ಅಂಟಿಸಿ, ಬಿಜೆಪಿ ಕಾರ್ಯಕರ್ತ ಒಳ್ಳೆಯ ಕೆಲಸ ಮಾಡಿದ್ದಾರೆ. ಸಾವರ್ಕರ್ ಬಗ್ಗೆ ಚಿಲ್ಲರೆಯಾಗಿ ಮಾತನಾಡುವುದು ಕಾಂಗ್ರೆಸ್ ಸಂಸ್ಕೃತಿ ಆಗಿದೆ

ಬಸನಗೌಡ ಪಾಟೀಲ ಯತ್ನಾಳ್
ಬಿಜೆಪಿ ಶಾಸಕ, ವಿಜಯಪುರ

ಎಂಟು ಜಿಲ್ಲೆಗಳಲ್ಲಿ 'ಭಾರತ್ ಜೋಡೊ' ಪಾದಯಾತ್ರೆ

ಬೆಂಗಳೂರು: 'ಸೆ.7ರಂದು ರಾಜೀವ್ ಗಾಂಧಿ ಅವರ ಸಮಾಧಿಗೆ ನಮಿಸಿ, ಕನ್ಯಾಕುಮಾರಿಯಿಂದ ಪಕ್ಷದ 'ಭಾರತ್ ಜೋಡೊ' ಪಾದಯಾತ್ರೆ ಆರಂಭವಾಗಲಿದೆ. ರಾಜ್ಯದಲ್ಲಿನ ಪಾದಯಾತ್ರೆ ಉಸ್ತುವಾರಿಯನ್ನು ವಿಧಾನ ಪರಿಷತ್ ವಿರೋಧಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರಿಗೆ ನೀಡಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಿತ್ಯ ಎಷ್ಟು ದಿನ ನಡೆಯಬೇಕು, ಎಲ್ಲೆಲ್ಲಿಗೆ ಭೇಟಿ ನೀಡಬೇಕು ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ. ಕರ್ನಾಟಕದಲ್ಲಿ 8 ಜಿಲ್ಲೆಗಳಲ್ಲಿ 21 ದಿನ ಪಾದಯಾತ್ರೆ ನಡೆಯಲಿದೆ. ಕೆಲವೆಡೆ ಅರಣ್ಯ ಪ್ರದೇಶವಿದ್ದು, ಅಲ್ಲಿ ಪಾದಯಾತ್ರೆ ಬೇಕೇ ಎಂಬ ವಿಚಾರವಾಗಿ ಸ್ಥಳೀಯ ಪೊಲೀಸರ ಜತೆ ಚರ್ಚಿಸಿದ ಬಳಿಕ ದೆಹಲಿಯ ತಂಡ ತೀರ್ಮಾನಿಸಲಿದೆ' ಎಂದರು.

ಕಾಂಗ್ರೆಸ್ ಕಚೇರಿಗೆ ಸಾವರ್ಕರ್ ಭಾವಚಿತ್ರ ಹಾಕಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಪ್ರಚೋದನಕಾರಿ ಹೇಳಿಕೆ ನೀಡಿ, ಕಾಂಗ್ರೆಸಿಗರನ್ನು ಎತ್ತಿ ಕಟ್ಟಿ, ಕಪ್ಪು ಬಾವುಟ ಹಿಡಿಯಿರಿ ಎನ್ನುವ ಅಗತ್ಯವಿಲ್ಲ. ಶಾಂತಿ ಕಾಪಾಡಬೇಕಿರುವುದು ಮುಖ್ಯಮಂತ್ರಿಯ ಜವಾಬ್ದಾರಿ' ಎಂದರು.

ಕಾಂಗ್ರೆಸ್‌ನಿಂದ ಭಾರತ್ ಜೋಡೊ ಯಾತ್ರೆ

ಸಾಮಾಜಿಕ ಕಾರ್ಯಕರ್ತರ ಬೆಂಬಲ ಕೇಳಿದ ರಾಹುಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಹಮ್ಮಿಕೊಂಡಿರುವ 'ಭಾರತ್ ಜೋಡೊ ಯಾತ್ರೆ'ಗೆ ಬೆಂಬಲ ನೀಡುವಂತೆ ನಾಗರಿಕ ಸಮಾಜದ ಹಲವು ಪ್ರತಿನಿಧಿಗಳಿಗೆ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಮನವಿ ಮಾಡಿದರು. ಹಲವಾರು ಸಂಘಟನೆಗಳ ಪ್ರತಿನಿಧಿಗಳು ಕಾಂಗ್ರೆಸ್ ಆಯೋಜಿಸಿರುವ ಈ ಕಾರ್ಯಕ್ರಮವನ್ನು ಸ್ವಾಗತಿಸಿದರು ಎನ್ನಲಾಗಿದೆ.

ಬಿಜೆಪಿಯ ವಿಭಜನಾ ನೀತಿ ವಿರುದ್ಧ ಪಕ್ಷ ಹಮ್ಮಿಕೊಂಡಿರುವ ಈ ಯಾತ್ರೆಗೆ ಹಲವಾರು ಸಾಮಾಜಿಕ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳ ಬೆಂಬಲ ಕೋರುವ ಸಲುವಾಗಿ ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ರಾಹುಲ್ ಗಾಂಧಿ ಅವರು ಸಂವಾದವನ್ನು ಹಮ್ಮಿಕೊಂಡಿದ್ದರು. ಕರ್ನಾಟಕದವರಾದ ಸಾಹಿತಿ ದೇವನೂರ ಮಹಾದೇವ ಸೇರಿ ಹಲವಾರು ಸಾಮಾಜಿಕ ಕಾರ್ಯಕರ್ತರು, ಸಂಘಟನೆಗಳ ಮುಖಂಡರು ಇದರಲ್ಲಿ ಭಾಗಿ ಆಗಿದ್ದರು.

ಆಮಂತ್ರಿತರ ಜೊತೆ ಚರ್ಚೆ ನಡೆಸಿದ ರಾಹುಲ್, 'ನಮ್ಮ ದೇಶದ ಆತ್ಮವನ್ನು ಮರಳಿ ಪಡೆಯುವ ಸಲುವಾಗಿ ಈ ಯಾತ್ರೆ ಹಮ್ಮಿಕೊಳ್ಳಲಾಗಿದೆ. ನನ್ನೊಂದಿಗೆ ಯಾರೂ ಕೈಜೋಡಿಸದೇ ಇದ್ದರೂ ನಾನು ಈ ಯಾತ್ರೆಯನ್ನು ಕೈಗೊಳ್ಳುತ್ತೇನೆ. ಇದು ಎಲ್ಲರೂ ಒಗ್ಗೂಡಿ ಯಾತ್ರೆ ನಡೆಸುವ ಸಮಯ' ಎಂದು ಹೇಳಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಹಲವು ಸಂಘಟನೆಗಳು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳು ಈ ಯಾತ್ರೆಯಲ್ಲಿ ಪಾಲ್ಗೊಳ್ಳಲು ಆಸಕ್ತಿ ತೋರಿಸಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತೆ ಅರುಣಾ ರಾಯ್ ಅವರು ಹೇಳಿದರು. ಚರ್ಚೆಯಲ್ಲಿ ಭಾಗವಹಿಸಿದ್ದ ರೈತ ಸಂಘಟನೆಗಳ ನಾಯಕ ದರ್ಶನ್ ಪಾಲ್ ಅವರು ಮಾತನಾಡಿ, 'ರೈತರಿಗೆ ಸಂಬಂಧಿಸಿದ ಸಮಸ್ಯೆಗಳು ನಮ್ಮ ಪ್ರಮುಖ ಆದ್ಯತೆಯಾಗಿವೆ. ಈ ಯಾತ್ರೆಯಲ್ಲಿ ಭಾಗವಹಿಸುವುದರಿಂದ ನಮ್ಮ ಗಮನ ಬೇರೆಡೆ ಹೋಗುತ್ತದೆ' ಎಂಬುದಾಗಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಈ ಯಾತ್ರೆಯನ್ನು ಸ್ವಾಗತಿಸುವುದಾಗಿ ಹೇಳಿದ ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಅವರು, ಈ ಯಾತ್ರೆಯಲ್ಲಿ ತಾವು ಹೇಗೆ ತೊಡಗಿಸಿಕೊಳ್ಳಬಹುದು ಎಂಬ ಕುರಿತು ನಿರ್ಧರಿಸುವುದಾಗಿ ಹೇಳಿದರು.

ಸಾಮಾಜಿಕ ಹೋರಾಟಗಾರರಾದ ಬೆಜ್ವಾಡ ವಿಲ್ಸನ್, ಪಿ.ವಿ. ರಾಜಗೋಪಾಲ್, ಜಿ.ಎನ್. ದೇವಿ, ಅಶೋಕ್ ಭಾರ್ತಿ ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

3,500 ಕಿ.ಮೀ ಉದ್ದದ ಈ ಯಾತ್ರೆಯು 12 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳ ಮೂಲಕ ಹಾದು ಹೋಗಲಿದೆ. ಐದು ತಿಂಗಳ ಕಾಲ ಈ ಯಾತ್ರೆ ನಡೆಯಲಿದೆ.



ನಾಗರಿಕ ಸಮಾಜದ ಪ್ರತಿನಿಧಿಗಳ ಜೊತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಸೋಮವಾರ ಚರ್ಚೆ ನಡೆಸಿ 'ಭಾರತ್ ಜೋಡೊ ಯಾತ್ರೆ'ಗೆ ಬಂಬಲ ಕೋರಿದರು –ಪಿಟಿಐ ಚಿತ್ರ

ದೇಶ ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸವಾಲುಗಳ ವಿರುದ್ಧ ಹೋರಾಡಲು ಎಲ್ಲರ ಬೆಂಬಲವೂ ಬೇಕು ಎಂದು ರಾಹುಲ್ ಅವರು ಮನವಿ ಮಾಡಿದ್ದಾರೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)



ಕೋಪ ಬಂದಾಗ ಹೀಗೆ ಮಾಡಿ...

ಕೋಪವನ್ನಾಗಲೀ, ಕೋಪಕ್ಕೆ ಕಾರಣವಾಗಿರುವ ಸಂಗತಿಗಳನ್ನಾಗಲೀ ಅರ್ಥಮಾಡಿಕೊಂಡು, ಅದಕ್ಕೆ ರಚನಾತ್ಮಕವಾಗಿ ಪ್ರತಿಕ್ರಿಯಿಸುವುದು ಸಿಟ್ಟನ್ನು ನಿಭಾಯಿಸುವ ಅತ್ಯಂತ ಪರಿಣಾಮಕಾರಿ ವಿಧಾನ. ಆದರೆ, ಇದು ಸುಲಭವಲ್ಲ.



ಡಾ. ಕಿರಣ್ ವಿ. ಎಸ್.

‘ಸಿಟ್ಟಿನ ಕೈಗೆ ಬುದ್ಧಿ ನೀಡಬಾರದು’, ‘ಕೋಪದಲ್ಲಿ ಕೊಯ್ದುಕೊಂಡ ಮೂಗು ಶಾಂತವಾದಾಗ ಮರಳಿ ಬಾರದು’ – ಹೀಗೆ ಜನಪದದಲ್ಲಿ ಸಿಟ್ಟಿನ ಕುರಿತಾಗಿ ಇರುವಷ್ಟು ಗಾದೆಗಳು ಬೇರೆ ಯಾವ ಭಾವನೆಯ ಬಗ್ಗೆಯೂ ಇರಲಾರದು. ಕೋಪವು ಸಹಜವಾದ ಮತ್ತು ಆರೋಗ್ಯಕರವಾದ, ಆದರೆ ಬಹಳ ಪ್ರಬಲವಾದ ಉದ್ವೇಗ. ಹೀಗಾಗಿ, ಅದನ್ನು ಸರಿಯಾಗಿ ನಿರ್ವಹಿಸುವುದು ಮುಖ್ಯ. ಇಲ್ಲವಾದರೆ ‘ವೇದ ಸುಳ್ಳಾದರೂ ಗಾದೆ ಸುಳ್ಳಾಗದು’ ಎನ್ನುವ ಮಾತಿಗೆ ನಮ್ಮ ಕೋಪವೇ ನಿದರ್ಶನವಾಗುತ್ತದೆ. ಕೋಪಕ್ಕೆ ತೀವ್ರವಾದ ಘಾತಕ ಶಕ್ತಿಯಿದೆ. ಅದು ಸಂಬಂಧಗಳನ್ನು ಹಾಳುಗೆಡವಬಲ್ಲದು; ಕೆಲಸಗಳನ್ನು ಕೆಡಿಸಬಲ್ಲದು; ಜೀವನದ ಗುಣಮಟ್ಟವನ್ನು ಇಳಿಸಬಲ್ಲದು. ಕೋಪವನ್ನು ನಮ್ಮ ನಿಯಂತ್ರಣದಲ್ಲಿ ಇರಿಸದಿದ್ದರೆ ನಾವೇ ಅದರ ನಿಯಂತ್ರಣಕ್ಕೆ ಸಿಲುಕಿಬಿಡುವ ಅಪಾಯವಿದೆ. ಶಾಂತಸ್ಥಿತಿಯಲ್ಲಿರುವಾಗ ಈ ಮಾತುಗಳನ್ನು ಬಹುತೇಕ ಎಲ್ಲರೂ ತಿಳಿದಿರುತ್ತಾರೆ; ಒಪ್ಪುತ್ತಾರೆ. ಆದರೆ, ಕೋಪ ಆವರಿಸಿದಾಗ ಇದ್ಯಾವುದೂ ಪರಿಗಣನೆಗೆ ಬಾರದೆ ಹೋಗುತ್ತದೆ.

ಕೋಪದ ಹಂತಗಳು ಹಲವಾರು. ಸಣ್ಣ ಚಡಪಡಿಕೆಯಿಂದ ಹಿಡಿದು ತೀವ್ರ ಆಕ್ರೋಶದವರೆಗೆ ಇದರ ವ್ಯಾಪ್ತಿ. ಕೋಪದ ಸಮಯದಲ್ಲಿ ಶರೀರ ಅನೇಕ ದೈಹಿಕ ಮತ್ತು ಮಾನಸಿಕ ಬದಲಾವಣೆಗಳಿಗೆ ಸಿಲುಕುತ್ತದೆ; ಹಾರ್ಮೋನುಗಳ ಮಟ್ಟ ಏರುಪೇರಾಗುತ್ತದೆ; ಹೃದಯದ ಬಡಿತ ಹೆಚ್ಚುತ್ತದೆ; ರಕ್ತದ ಒತ್ತಡ ಅಧಿಕವಾಗುತ್ತದೆ; ಉಸಿರಾಟದ ಗತಿ ಬದಲಾಗುತ್ತದೆ; ಮಾಂಸಖಂಡಗಳು ಬಿಗಿಯಾಗುತ್ತವೆ; ದೃಷ್ಟಿ ಮಂಜಾಗುತ್ತದೆ; ಆಲೋಚನೆಗಳು ಮಸುಕಾಗುತ್ತವೆ. ಶರೀರದಲ್ಲಿ ಇಷ್ಟೊಂದು ಬದಲಾವಣೆಗಳನ್ನು ತರಬಲ್ಲ ಭಾವನೆಗಳು ಹೆಚ್ಚಿಲ್ಲ.

ಕೋಪಕ್ಕೆ ಕಾರಣವಾಗುವ ವಿಷಯಗಳು ಆಂತರಿಕವೂ ಇರಬಹುದು, ಬಾಹ್ಯವೂ ಆಗಬಹುದು. ಕಿರಿಕಿರಿ ಮಾಡುವ ವ್ಯಕ್ತಿಗಳು, ಹತಾಶೆಗೆ ಕಾರಣವಾಗುವ ಸಂದರ್ಭಗಳು, ಹಳೆಯ ಘಟನೆಗಳ ನೆನಪುಗಳು ಮೊದಲಾದುವು ಸಿಟ್ಟನ್ನು ತರಿಸಬಹುದು. ಕೋಪದ ಮೊದಲ ಪ್ರತಿಕ್ರಿಯೆ ಎದುರಾಳಿಯ ಮೇಲೆ ಮುಗಿಬೀಳುವ ಆಕ್ರಮಣ ಪ್ರವೃತ್ತಿ. ಇದು ಸರಿಸುಮಾರು ಎಲ್ಲ ಪ್ರಾಣಿಗಳಲ್ಲೂ ಕಾಣುವ ನಡವಳಿಕೆ. ಆದರೆ ಕಾನೂನು, ಸಭ್ಯತೆ, ಸಾಮಾನ್ಯಜ್ಞಾನ, ಸಾಮಾಜಿಕ ಕಟ್ಟುಪಾಡುಗಳ ನಿಯಂತ್ರಣದಲ್ಲಿರುವ ನಾಗರಿಕ ಸಮಾಜದಲ್ಲಿ ಈ ರೀತಿಯ ವರ್ತನೆ ಘಾತಕವಾಗಬಲ್ಲದು. ಹೀಗಾಗಿ, ಎಷ್ಟೇ ಸಹಜವಾದ ಭಾವನೆಯಾದರೂ, ಕೋಪವನ್ನು ನಿರ್ವಹಿಸುವುದು ಜೀವನದ ಅಗತ್ಯಗಳಲ್ಲಿ ಒಂದು.

ಸಿಟ್ಟಿನ ನಿಯಂತ್ರಣದಲ್ಲಿ ಹಲವಾರು ದಾರಿಗಳಿವೆ. ಮೊದಲನೆಯ ಉದಾಹರಣೆ ಕೋಪದ ಅಭಿವ್ಯಕ್ತಿ. ಆಕ್ರಮಣಶೀಲವಲ್ಲದ ರೀತಿಯಲ್ಲಿ ಸಿಟ್ಟನ್ನು ಹೊರಹಾಕುವುದು ಆರೋಗ್ಯಕರ ವಿಧಾನವೂ ಹೌದು. ಆಯಾ ಸಂದರ್ಭದಲ್ಲಿ ಕೋಪ ತರಿಸುವ ಕಾರಣವೇನು; ಆ ಕಾರಣವನ್ನು ಬದಿಗೊತ್ತಿ ಗಮ್ಯವನ್ನು ಸಾಧಿಸಲು ಸಾಧ್ಯವೇ; ಈ ಹಾದಿಯಲ್ಲಿ ಇರಬಹುದಾದ ಅಡಚಣೆಗಳೇನು; ಈ ಪರಿಸ್ಥಿತಿಯಲ್ಲಿ ಬೇರೆ ಯಾವ ಪರ್ಯಾಯಗಳಿವೆ – ಮೊದಲಾದ ವಿಷಯಗಳನ್ನು ವಿಶ್ಲೇಷಿಸಿ, ನಮ್ಮ ಅಗತ್ಯಗಳನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಯಾವುದೋ ತುರ್ತು ಕೆಲಸಕ್ಕೆ ಹೋಗುವಾಗ ವಾಹನಸಂಚಾರದ ದಟ್ಟಣೆಯಿಂದ ಮನಸ್ಸು ವ್ಯಗ್ರವಾಗುತ್ತದೆ. ಮುಂದೆ ಇರುವ ವಾಹನ ಹೊರಡುವುದು ಕೆಲಕ್ಷಣಗಳು ತಡವಾದರೂ ಅಸಾಧ್ಯ ಸಿಟ್ಟು ಬರುತ್ತದೆ. ಇಂತಹ ಸಂದರ್ಭದಲ್ಲಿ ಕೆಲವರು ಜೋರಾಗಿ ಹಾರ್ನ್ ಒತ್ತಿ ಸದ್ದು ಮಾಡುತ್ತಾರೆ; ಕೆಲವರು ಕೆಟ್ಟ ಭಾಷೆ ಬಳಸಿ ಕೂಗಾಡುತ್ತಾರೆ; ಕೆಲವರು ಆಂಗಿಕ ಚೇಷ್ಟೆಗಳನ್ನು ಮಾಡುತ್ತಾರೆ; ಕೆಲವರು ಹೊಡೆಯಲು ಮುಂದಾಗುತ್ತಾರೆ; ಕೆಲವರು ಇತರ ವಾಹನಗಳ ಸಂಚಾರಕ್ಕೆ ಅಪಾಯವಾಗುವಂತೆ ತಮ್ಮ ವಾಹನವನ್ನು ಭರ್ರನೆ ಪಕ್ಕದ ಲೇನ್‌ಗೆ ತಿರುಗಿಸುತ್ತಾರೆ. ಇವು ಹೆಚ್ಚಿನದೇನನ್ನೂ ಸಾಧಿಸಲಾರವು. ಜೊತೆಗೆ ಅಪಾಯಕಾರಿ ಕೂಡ. ಇದರ ಬದಲಿಗೆ ತಂತ್ರಜ್ಞಾನದ ಸಹಾಯ ಪಡೆಯುವುದು ಸೂಕ್ತ. ಗಮ್ಯದಲ್ಲಿರುವ ವ್ಯಕ್ತಿಗೆ ಫೋನು ಮಾಡಿ ಸಂದರ್ಭವನ್ನು ವಿವರಿಸಿ, ಕೆಲನಿಮಿಷಗಳ ಹೆಚ್ಚಿನ ಅವಧಿಯನ್ನು ಕೊಡುವಂತೆ ಕೇಳುವುದು; ವಾಹನಸಂಚಾರದ ದಟ್ಟಣೆಯನ್ನು ತೋರುವ ಆ್ಯಪ್‌ಗಳನ್ನು ಬಳಸಿ ಪರ್ಯಾಯ ಮಾರ್ಗಗಳನ್ನು ಹುಡುಕುವುದು; ಸಂಚಾರ ದಟ್ಟಣೆಯಿಂದ ಮುಕ್ತವಾಗಿರುವ ಮೆಟ್ರೊ ರೈಲುಗಳನ್ನು ಬಳಸುವುದು; ವಿಡಿಯೊ ಕರೆಗಳ ಮೂಲಕ ಕೆಲಸವನ್ನು ಸಾಧಿಸುವುದು – ಇಂತಹ ಹಲವಾರು ಮಾರ್ಗಗಳು ಎಷ್ಟೋ ಬಾರಿ ನಮ್ಮ ಖುದ್ದು ಓಡಾಟಕ್ಕೆ ಪರ್ಯಾಯವಾಗಬಲ್ಲವು. ಸಿಟ್ಟನ್ನು ನಿಯಂತ್ರಿಸಿದರೆ ಮಾತ್ರ ಇತರ ದಾರಿಗಳು ಕಾಣುತ್ತವೆ. ಇಲ್ಲವಾದರೆ ವಾಹನದ ಹಾರ್ನ್ ಕೂಡ ನಮ್ಮ ಮನಸ್ಸಿನಂತೆಯೇ ಕೆಟ್ಟುಹೋಗುತ್ತದೆ.

ಮತ್ತೊಂದು ದಾರಿ ಕೋಪವನ್ನು ನುಂಗಿಕೊಳ್ಳುವುದು. ಈ ರೀತಿ ಹತ್ತಿಕ್ಕಿದ ಕೋಪವನ್ನು ಬೇರೆ ಯಾವುದಾದರೂ ಹಾದಿಯಲ್ಲಿ ಹಾಯಿಸಬೇಕು. ಸಿಟ್ಟಿನಿಂದ ಕುದಿಯುವ ಮನಸ್ಸಿಗೆ ಯಾವುದಾದರೂ ಮಾರ್ಗೋಪಾಯ ಬೇಕು. ಇಲ್ಲವಾದರೆ ಅದು ನಮ್ಮ ಶರೀರದ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಕೋಪವನ್ನು ನಿರ್ವಹಿಸಲಾಗದೇ ಆಂತರಿಕವಾಗಿ ನುಂಗಿಕೊಳ್ಳುವವರಲ್ಲಿ ಅಧಿಕ ರಕ್ತದೊತ್ತಡ, ಖಿನ್ನತೆ, ನರಗಳ ದೌರ್ಬಲ್ಯ, ಹೃದ್ರೋಗಗಳು ಕಾಡಬಹುದು. ಸಿನಿಕರು, ಹಗೆ ಸಾಧಿಸುವ ಮನಃಸ್ಥಿತಿಯವರು, ಇತರರ ಕುರಿತು ಕೀಳಾಗಿ ಮಾತನಾಡುವವರು, ಪ್ರತಿಯೊಂದು ವಿಷಯವನ್ನೂ ಅವಹೇಳನ ಮಾಡುವವರು, ಸಂಬಂಧಗಳನ್ನು ನಿಭಾಯಿಸುವ ತಾಕತ್ತು ಇಲ್ಲದವರು, ಯಾವುದೇ ಸಲಹೆಯನ್ನೂ ಪೂರ್ವಾಪರ ವಿವೇಚನೆಯಿಲ್ಲದೆ ಕುಹಕವಾಡುವ ಬಹುತೇಕ ಮಂದಿಗೆ ತಮ್ಮ ಕೋಪವನ್ನು ನಿಯಂತ್ರಿಸುವಸಾಮರ್ಥ್ಯಇರುವುದಿಲ್ಲ.ಅಂತಹವರಪ್ರಕ್ಷುಬ್ಧ ಮನಃಸ್ಥಿತಿಗೆ ಕಾರಣ ಬಹುಕಾಲದಿಂದ ಆಂತರಿಕವಾಗಿ ನುಂಗಿಕೊಂಡ ಸಿಟ್ಟಿನ ಪ್ರಸಂಗಗಳು. ಆದರೆ ಆ ವಾಸ್ತವದ ಪ್ರಜ್ಞೆ ಅವರಲ್ಲಿ ಇರುವುದಿಲ್ಲ. ಸಿಟ್ಟನ್ನು ಹತ್ತಿಕ್ಕಬೇಕಾದ ಇಂತಹ ಪರಿಸ್ಥಿತಿಗಳಲ್ಲಿ ಕೂಡಲೆ ಆಲೋಚನೆಯ ಧಾಟಿಯನ್ನು ಬದಲಾಯಿಸಬೇಕು. ಯಾವುದಾದರೂ ಧನಾತ್ಮಕ ಸಂಗತಿಯ ಬಗ್ಗೆ ಯೋಚಿಸಬೇಕು. ಈ ಮುನ್ನ ಸ್ವಲ್ಪ ಸಮಯ ವಹಿಸಿ ನಿರ್ಧಾರಕ್ಕೆ ಬರಲು ಯೋಜಿಸಿದ್ದ ಇತರ ಕೆಲವು ವಿಷಯಗಳನ್ನು ಚಿಂತಿಸಬಹುದು. ಕೋಪಕ್ಕೆ ಕಾರಣವಾಗಿರುವ ಪ್ರಸಂಗದಿಂದ ಮನಸ್ಸನ್ನು ವಿಮುಖಗೊಳಿಸುವುದು ಸಿಟ್ಟಿನ ನಿರ್ವಹಣೆಯ ತಂತ್ರಗಳಲ್ಲಿ ಒಂದು.

ಕೋಪವನ್ನಾಗಲೀ, ಕೋಪಕ್ಕೆ ಕಾರಣವಾಗಿರುವ ಸಂಗತಿಗಳನ್ನಾಗಲೀ ಅರ್ಥಮಾಡಿಕೊಂಡು, ಅದಕ್ಕೆ ರಚನಾತ್ಮಕವಾಗಿ ಪ್ರತಿಕ್ರಿಯಿಸುವುದು ಸಿಟ್ಟನ್ನು ನಿಭಾಯಿಸುವ ಅತ್ಯಂತ ಪರಿಣಾಮಕಾರಿ ವಿಧಾನ. ಆದರೆ, ಇದು ಸುಲಭವಲ್ಲ. ಇದನ್ನು ಸಾಧಿಸಲು ಸಾಕಷ್ಟು ಪ್ರಯತ್ನ, ಕೆಲವೊಮ್ಮೆ ತರಬೇತಿ, ಹಿಡಿಯುತ್ತದೆ. ಕೋಪದ ವೇಳೆಯಲ್ಲಿ ನಮ್ಮ ವೈಚಾರಿಕ ಜ್ಞಾನ ಕುಂದುತ್ತದೆ; ತರ್ಕಶಕ್ತಿ ಕುಂಠಿತವಾಗುತ್ತದೆ. ಕೆಲವೊಮ್ಮೆ ಮನಸ್ಸು ಸಿಟ್ಟಿನ ಘಟನೆಯನ್ನೇ ಪದೇ ಪದೇ ನೆನೆಯುತ್ತಾ ‘ತರಚು ಗಾಯವ ಕೆರೆದು ಹುಣ್ಣನಾಗಿಸುವ’ ಕಪಿಯಂತೆ ವರ್ತಿಸುತ್ತದೆ. ಇಂತಹ ತರ್ಕಶೂನ್ಯ ವೇಳೆಯಲ್ಲಿ ಚಿಂತನೆಗಳನ್ನು ನಿಗ್ರಹಿಸುವುದು ಕಷ್ಟಸಾಧ್ಯ. ಋಣಾತ್ಮಕ ಆಲೋಚನೆಗಳು ಪ್ರವಹಿಸುವಾಗ ‘ಎಲ್ಲವೂ ಮುಗಿದುಹೋಯಿತು’ ಎನ್ನುವುದಕ್ಕಿಂತಲೂ ‘ಇಂತಹ ಅನೇಕ ಸಂಕಷ್ಟಗಳನ್ನು ಈಗಾಗಲೇ ಅನುಭವಿಸಿ ಗೆದ್ದಿದ್ದೇನೆ. ಇದೂ ಒಂದು ಅನುಭವ ಮಾತ್ರ’ ಎನ್ನುವ ಮನಃಸ್ಥಿತಿ ಪರಿಣಾಮಕಾರಿ.

ಸಿಟ್ಟನ್ನು ಸಮರ್ಥಿಸಿಕೊಳ್ಳುವುದು ಅದಕ್ಕೆ ವಶರಾದಂತೆ. ಕೋಪವೆನ್ನುವುದು ನ್ಯಾಯಬದ್ಧವಾಗಿಯೇ ಇದ್ದರೂ, ಅದರಿಂದ ಹೊರಗೆ ನಿಂತು ಆಲೋಚಿಸವುದು ಸೂಕ್ತ. ಸಿಟ್ಟಿನ ವೇಳೆ ಆಡುವ ಅತಾರ್ಕಿಕ ಮಾತುಗಳು ನಮ್ಮ ಪರವಾಗಿ ಸಹಾನುಭೂತಿ ಇರುವವರನ್ನೂ ನಮ್ಮಿಂದ ದೂರ ಮಾಡಬಲ್ಲದು. ಎಲ್ಲ ಸಂದರ್ಭಗಳನ್ನೂ ಏಕಾಂಗಿಯಾಗಿ ನಿಭಾಯಿಸಲಾಗದು. ಇತರರ ಸಹಕಾರ ಬೇಕಾದಾಗ, ಸಿಟ್ಟನ್ನು ನಿಯಂತ್ರಿಸಬಲ್ಲ ವ್ಯಕ್ತಿಯ ಬಗ್ಗೆ ತಂಡದ ಎಲ್ಲರಿಗೂ ಗೌರವ ಬೆಳೆಯುತ್ತದೆ. ಕೋಪದ ವೇಳೆ ಉಸಿರಾಟದ ಬಗ್ಗೆ ಗಮನ ಕೊಡುವುದು, ಸ್ನಾಯುಗಳ ಬಿಗಿತವನ್ನು ಸಡಿಲಗೊಳಿಸುವುದು ಪರಿಣಾಮಕಾರಿ. ಇದರಿಂದ ಗಮನ ಒಂದೆಡೆ ಕೇಂದ್ರೀಕೃತವಾಗಿ, ತರ್ಕಬದ್ಧ ಆಲೋಚನೆಗೆ ಸಹಕಾರಿಯಾಗುತ್ತದೆ. ಸಿಟ್ಟು ಶಾಂತವಾದಾಗ, ಯಾವ ಕಾರಣಕ್ಕಾಗಿ ಅನಗತ್ಯ ಉದ್ವೇಗಕ್ಕೆ ಒಳಗಾದವೆಂದು ವಿವೇಚಿಸಿ, ಭವಿಷ್ಯದಲ್ಲಿ ಅದಕ್ಕೆ ಆಸ್ಪದ ನೀಡದಿರುವುದು ಕೋಪದ ನಿರ್ವಹಣೆಯಲ್ಲಿ ಪ್ರಮುಖ ಬೆಳವಣಿಗೆ. ಇದ್ಯಾವುದೂ ಕೆಲಸಕ್ಕೆ ಬಾರದಿದ್ದರೆ ಮಾನಸಿಕ ತಜ್ಞರನ್ನು ಕಾಣಬೇಕು. ❖

ಬಿಕ್ಕಳಿಕೆಯ ಬಿಕ್ಕಟ್ಟುಗಳು


ಡಾ. ವೀಣಾ ಎಸ್. ಭಟ್

ಬಿಕ್ಕಳಿಕೆಯು ನಮಗೆ ಸಾಕಷ್ಟು ಉಪದ್ರವ ಕೊಡದೇ ಇರಬಹುದು. ಆದರೆ ಕೆಲವೊಮ್ಮೆ ದೀರ್ಘಾವಧಿಯವರೆಗೆ ಕಾಡುತ್ತಾ ತೊಂದರೆ ಕೊಡುವ ಸಂದರ್ಭಗಳೂ ಬರಬಹುದು.

ಬಿಕ್ಕಳಿಕೆ – ಎಂದರೆ, ಬಿಕ್ಕಿ ಬಿಕ್ಕಿ ಅಳುವಾಗ ಉಸಿರನ್ನು ಹಿಡಿಯುವುದು ಎಂದು ಲ್ಯಾಟಿನ್ ಭಾಷೆಯಲ್ಲಿ ಅರ್ಥ ಕೊಡುತ್ತದೆ. ಬಿಕ್ಕಳಿಕೆಯು (ಹಿಕಪ್ಸ್) ವಪೆಯ ಸ್ನಾಯುಗಳು ಒಮ್ಮೆಗೆ ಸಂಕುಚಿತಗೊಳ್ಳುವುದರಿಂದ ಉಂಟಾಗುವ ಪ್ರಕ್ರಿಯೆ. ಅದೇ ಸಮಯದಲ್ಲಿ ಧ್ವನಿನಾಳದ ಮುಚ್ಚಳವೂ (ಎಪಿಗ್ಲಾಟಿಸ್) ಮುಚ್ಚಿಹೋಗುವುದರಿಂದ ‘ಹಿಕ್’ ಎಂಬ ಶಬ್ದ ಉಂಟಾಗುವುದೇ ಬಿಕ್ಕಳಿಕೆ.

ಇದಕ್ಕೂ ಮೊದಲು ವಪೆ ಎಂದರೇನು; ಅದು ಉಸಿರಾಟ ಪ್ರಕ್ರಿಯೆಯಲ್ಲಿ ಹೇಗೆ ಪಾಲ್ಗೊಳ್ಳುತ್ತದೆ – ಎಂಬುದನ್ನು ಅರಿತರೆ ಬಿಕ್ಕಳಿಕೆಯು ಹೇಗಾಗುತ್ತದೆ ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ನಮ್ಮ ಶರೀರದ ಎದೆಯ ಗೂಡು (ಉರಪ್ರದೇಶ) ಮತ್ತು ಹೊಟ್ಟೆಯ ಭಾಗ (ಉದರಕುಳಿ) – ಇವನ್ನು ಪ್ರತ್ಯೇಕಿಸುವ ಸ್ನಾಯು ತಡಿಕೆಯೇ ವಪೆ (ಡಯಾಫ್ರಾಮ್). ಸಹಜ ಉಸಿರಾಟದಲ್ಲಿ ನಾವು ಸೇವಿಸುವ ಗಾಳಿ ಮೂಗಿನಿಂದ ಮುಂದಕ್ಕೆ ಸಾಗಿ ಗಂಟಲು ಮತ್ತು ಮುಖ್ಯ ಶ್ವಾಸನಾಳದ ಮಾರ್ಗವಾಗಿ ಅದರ ಶಾಖೆಗಳಲ್ಲಿ ಹಾಗೂ ಕವಾಟಗಳಲ್ಲಿ ಹರಿದಾಡಿ ಶ್ವಾಸಕೋಶದ ಗಾಳಿಗೂಡಿಗೆ ಹೋಗುತ್ತದೆ.

ಗಂಟಲಿನಿಂದ ವಾಯುನಾಳ ಹಾಗೂ ಅನ್ನನಾಳ ಆರಂಭವಾಗಿರುತ್ತದೆ. ಇದೊಂದು ಅತಿ ಸೂಕ್ಷ್ಮ ಪ್ರದೇಶ. ಅನ್ನನಾಳದ ಒಳಗೆ ಹೋಗಬೇಕಾದ ಆಹಾರ-ಪಾನೀಯಗಳು ಶ್ವಾಸನಾಳವನ್ನು ಪ್ರವೇಶಿಸುವ ಸಾಧ್ಯತೆಯನ್ನು ಅಥವಾ ಅವಘಡವನ್ನು ತಡೆಗಟ್ಟುವಂತೆ ಧ್ವನಿನಾಳವನ್ನು ಮುಚ್ಚುವ ಅಂಗವೇ ಎಪಿಗ್ಲಾಟಿಸ್. ಇದು ನಾವು ಆಹಾರ ಸೇವಿಸುವಾಗ ಮುಚ್ಚಿರುತ್ತದೆ; ಕೆಲವೊಮ್ಮೆ ತೆರೆದಿರುತ್ತದೆ. (ಆಹಾರವನ್ನು ಸೇವಿಸುವಾಗ ಕೆಲವೊಮ್ಮೆ ಹೀಗೆ ಮುಚ್ಚದಿದ್ದರೆ ಆಹಾರಪದಾರ್ಥವು ಶ್ವಾಸನಾಳವನ್ನು ಪ್ರವೇಶಿಸುವುದನ್ನೇ ತೆರಗಿ ಹೋಗುವುದು/ ನೆತ್ತಿಗೇರುವುದು ಎನ್ನುತ್ತೇವೆ. ಈ ಸಂದರ್ಭದಲ್ಲಿ ಅತಿಯಾದ ಕೆಮ್ಮು ಉಂಟಾಗಬಹುದು.)



ಸಹಜ ಉಸಿರಾಟ ಕ್ರಿಯೆಯಂತೂ ನಿರಂತರವಾಗಿ ಅನೈಚ್ಛಿಕವಾಗಿ ನಡೆಯುತ್ತಿರುತ್ತದೆ. ಅದು ಹೇಗೆಂದರೆ, ವಪೆಯ ಸ್ನಾಯುಗಳು ಸಂಕುಚಿಸಿದಾಗ ವಪೆಯು ಚಪ್ಪಟೆ ಆಕಾರವಾಗುತ್ತದೆ. ಇದರಿಂದ ಎದೆಯಗೂಡು ವಿಸ್ತಾರವಾಗುತ್ತದೆ. ಆಗ ಪಕ್ಕೆಲುಬುಗಳ ಸ್ನಾಯುಗಳೂ ಸಂಕುಚನಗೊಂಡು, ಎಲುಬಿನ ಅಂಚುಗಳು ಮೇಲಕ್ಕೆ ಹೊರಮುಖವಾಗಿ ಎತ್ತುತ್ತವೆ. ಆ ಮೂಲಕ ಎದೆಯ ಗೂಡು ಇನ್ನಷ್ಟು ವಿಶಾಲವಾಗುತ್ತದೆ. ಆಗ ಎದೆಯ ಗೂಡಿನಲ್ಲಿ ಸ್ಥಳಾವಕಾಶ ಹೆಚ್ಚಿ ಪುಪ್ಪುಸಗಳು (ಶ್ವಾಸಕೋಶ) ಹಿಗ್ಗಿ ವಿಸ್ತಾರವಾಗುತ್ತವೆ. ನಿರ್ವಾತವನ್ನು ತುಂಬಲು ಹೊರಗಿನ ಗಾಳಿ ಮೂಗಿನ ಮೂಲಕ ನುಗ್ಗುವುದೇ ಉಚ್ಛ್ವಾಸ. ವಪೆ ಮತ್ತು ಅದರ ಸ್ನಾಯುಗಳು ಸಡಿಲವಾಗಿ ಎದೆಯ ಗೂಡಿನ ವಿಸ್ತಾರ ಕಡಿಮೆಮಾಡಿ ಪುಪ್ಪಸವು ಗಾಳಿಯನ್ನು ಹೊರಸಾಗಿಸುವುದೇ ನಿಃಶ್ವಾಸ. ಉಚ್ಛ್ವಾಸದಲ್ಲಿ ಒಳ ಬರುವ ಗಾಳಿಯಿಂದ ರಕ್ತಕ್ಕೆ ಆಮ್ಲಜನಕ ದೊರೆತರೆ, ನಿಃಶ್ವಾಸದಲ್ಲಿ ರಕ್ತದಿಂದ ಇಂಗಾಲದ ಡೈ ಆಕ್ಸೈಡ್ ಮತ್ತು ಅಶುದ್ಧ ವಸ್ತುಗಳು ಹೊರಹಾಕಲ್ಪಡುತ್ತವೆ. ಯಾವುದೇ ಕಾರಣದಿಂದ ವಪೆಯ ಸ್ನಾಯುಗಳು ಪ್ರಚೋದಿಸಲ್ಪಟ್ಟು, ಸಂಕುಚಿತಗೊಂಡು ಅನ್ನನಾಳದ ಸ್ನಾಯುಗಳು ಸಡಿಲವಾಗಿ ಧ್ವನಿಪೆಟ್ಟಿಗೆಯ ಮುಚ್ಚಳ ಮುಚ್ಚಲ್ಪಡುತ್ತದೆ. ಆಗ ಗಾಳಿ ಬಾಯಿಯಿಂದ ಹೊರಹೋಗುತ್ತದೆ. ಇದೇ ‘ಹಿಕ್’ ಶಬ್ದ ಉಂಟುಮಾಡುವ ಬಿಕ್ಕಳಿಕೆ. ಇದು ಒಂದೆರಡು ಬಾರಿ ಬಂದು ನಿಂತುಹೋಗಬಹುದು. ಅಪರೂಪಕ್ಕೆ ಆತಂಕ-ಸುಸ್ತಿಗೆ ಕಾರಣವಾಗಬಹುದು. ಇದು ದೀರ್ಘಾವಧಿ ಕಾಡುವುದು ಪುರುಷರಲ್ಲಿ ಹೆಚ್ಚು. ಇದರಿಂದ ಕೆಲವೊಮ್ಮೆ ಭುಜ, ಹೊಟ್ಟೆ, ಗಂಟಲು – ಇಡೀ ಶರೀರ ಅಲ್ಲಾಡಿದ ಹಾಗೆ ಆಗಬಹುದು. ಕೆಲವೊಮ್ಮೆ ನೋವಿನ ಅನುಭವವೂ ಆಗಬಹುದು. ಉಸಿರಾಟದಲ್ಲೂ ಸ್ವಲ್ಪ ಏರುಪೇರಾಗಬಹುದು.

ಬಿಕ್ಕಳಿಕೆ ಉಂಟಾಗಲು ಕಾರಣಗಳೇನು? ಅವಸರದಿಂದ, ಗಬಗಬನೆ ಆಹಾರ ಸೇವಿಸುವುದರಿಂದ, ಕ್ಯಾಂಡಿ-ಚ್ಯೂಯಿಂಗಮ್‌ಗಳನ್ನು ಸೇವಿಸುವಾಗ, ಹೆಚ್ಚು ಗಾಳಿಯನ್ನು ಒಳಗೆ ತೆಗೆದುಕೊಳ್ಳುವುದರಿಂದ, ಕಾರ್ಬೋನೇಟೆಡ್ ಪಾನೀಯಗಳನ್ನು ಸೇವಿಸುವುದರಿಂದ, ಅತಿಯಾದ ಹುಳಿ-ಖಾರ- ಜಂಕ್ ಆಹಾರ ಪದಾರ್ಥಗಳ ಸೇವನೆಯಿಂದ, ತಕ್ಷಣ ಆಗುವ ತಾಪಮಾನದ ಬದಲಾವಣೆಯಿಂದ, ಓಪಿಯೇಟ್ ಇನ್ನಿತರ ಔಷಧಗಳ ಸೇವನೆಯಿಂದ, ದೀರ್ಘಾವಧಿವರೆಗೆ ಗಹಗಹಿಸಿ ನಗುವುದರಿಂದ, ಡಯಾಪ್ರಮೇಟಿಕ್ ಹರ್ನಿಯ ಇದ್ದಾಗ, ಹೊಟ್ಟೆಯ ಶಸ್ತ್ರಚಿಕಿತ್ಸೆ ಆದಾಗ, ಮಿದುಳಿನ ಸೋಂಕು, ಮಿದುಳಿನಲ್ಲಿ ಗಡ್ಡೆ, ಅಪಾಯಕಾರಿ ಹೊಗೆಸೇವನೆ, ಕಿಡ್ನಿಸಮಸ್ಯೆ ಇದ್ದಾಗ – ಹೀಗೆ ಹಲವು ಕಾರಣಗಳಿಂದ ಬಿಕ್ಕಳಿಕೆ ಉಂಟಾಗಬಹುದು.

ಮಾನಸಿಕ ಒತ್ತಡದಿಂದಲೂ, ಅತಿ ಅಪರೂಪಕ್ಕೆ ಗಂಭೀರ ವೈದ್ಯಕೀಯ ಸಮಸ್ಯೆಗಳಲ್ಲಿಯೂ ಬಿಕ್ಕಳಿಕೆ ಉಂಟಾಗಬಹುದು.

ಚಿಕಿತ್ಸೆ ಹೇಗೆ? : ಹೆಚ್ಚಿನ ಸಂದರ್ಭಗಳಲ್ಲಿ ಬಿಕ್ಕಳಿಕೆ ಕಾಯಿಲೆಯಾಗಿ ಕಾಡದೇ ಇದ್ದರೂ, ಕೆಲವೊಮ್ಮೆ ಚಿಕಿತ್ಸೆ ಅವಶ್ಯಕವಾಗಬಹುದು. ಬಿಕ್ಕಳಿಕೆಯನ್ನು ತಡೆಯಲು ಕೆಲವು ಮನೆಮದ್ದುಗಳು ಬಳಕೆಯಲ್ಲಿವೆ. ನಿಂಬೆಹಣ್ಣನ್ನು ಕಡಿದು ತಿನ್ನುವುದು, ತಣ್ಣೀರು/ ಉಗುರುಬೆಚ್ಚಗಿನ ನೀರನ್ನು ನಿಧಾನವಾಗಿ ಕುಡಿಯುವುದು, ನಾಲಿಗೆಯನ್ನು ಗಟ್ಟಿಯಾಗಿ ಎಳೆಯುವುದು, ನೀರಿನಿಂದ ಗಾರ್ಗಲ್ ಮಾಡುವುದು, ಎರಡು ಚಿಟಿಕೆ ಓಮದ ಕಾಳು ಮತ್ತು ಅರ್ಧ ಚಮಚ ಸಕ್ಕರೆಯನ್ನು ಬಾಯಲ್ಲಿ ಹಾಕಿಕೊಂಡು ನಿಧಾನವಾಗಿ ಅಗೆಯುವುದು, ಶುಂಠಿಚೂರನ್ನು ನಿಧಾನವಾಗಿ ಅಗಿಯುವುದು, ಗ್ಲಾಸಿನಲ್ಲಿರುವ ನೀರನ್ನು ವಿರುದ್ಧ ದಿಕ್ಕಿನಿಂದ ನಿಧಾನವಾಗಿ ಬಗ್ಗಿ ಕುಡಿಯುವುದು, ಚಮಚ ನೆಲ್ಲಿಕಾಯಿಪುಡಿಯನ್ನು ಒಂದು ಚಮಚ ಜೇನುತುಪ್ಪದೊಡನೆ ಸೇವಿಸುವುದು – ಇಂಥವು ಬಳಕೆಯಲ್ಲಿವೆ.

ಕೆಲವು ಸೆಕೆಂಡುಗಳ ಕಾಲ ಉಸಿರುಗಟ್ಟಿ ಹಿಡಿಯುವುದು, ಜೊತೆಗೆ ಎರಡು ಕಿವಿಗಳನ್ನ ಬೆರಳಿಂದ ಮುಚ್ಚಿಕೊಳ್ಳುವುದು – ಹೀಗೆ ಮಾಡುವುದರಿಂದ ಬಿಕ್ಕಳಿಕೆ ನಿಲ್ಲುತ್ತದೆ. ಪದೇ ಪದೇ ಬಿಕ್ಕಳಿಕೆ ಬರುವವರು ನಿಯಮಿತವಾಗಿ ನಾಡಿಶೋಧನ ಹಾಗೂ ಭ್ರಮರಿ ಪ್ರಾಣಾಯಾಮಗಳನ್ನು ಅಭ್ಯಾಸ ಮಾಡಿದರೆ ಪರಿಹಾರ ಸಿಗುತ್ತದೆ. ಇಂತಹ ಲಘು ಉಪಚಾರಗಳಿಗೆ ಬಿಕ್ಕಳಿಕೆ ಶಮನವಾಗದಿದ್ದರೆ ವೈದ್ಯರ ಸಲಹೆಯಂತೆ ಔಷಧಗಳನ್ನು ತೆಗೆದುಕೊಳ್ಳಬೇಕು. ❖



ಹೊಣೆಗಾರಿಕೆಯೋ? ಹೆಗ್ಗಳಿಕೆಯೋ?

ಹೊಣೆಗಾರಿಕೆಯು ವ್ಯಕ್ತಿಯಲ್ಲಿ ಪರಿಪೂರ್ಣವಾಗಿ ವಿಕಾಸಗೊಂಡಾಗ ಅವನು ಅದನ್ನು ಸಾರ್ವತ್ರಿಕ ಮೌಲ್ಯವಾಗಿ ಕಾಣಬಯಸುತ್ತಾನೆ. ಅದನ್ನೇ ಸಾರ್ವಜನಿಕ ಜೀವನದಲ್ಲಿ ಅಳವಡಿಸಬಯಸುತ್ತಾನೆ.

ರಘು ವಿ.

ಬದುಕಿನ ಕೇಂದ್ರ ಮತ್ತು ಪರಿಧಿಯನ್ನು ಅರಿಯುವುದರೊಳಗೆ ಅಸ್ತಿತ್ವವೇ ಆವಿಯಾಗಿ ಹೋಗುವ ಸಾಧ್ಯತೆಯೇ ಅಧಿಕ. ಯಾರನ್ನು ಕೇಳಿದರೂ ತಮ್ಮದೇ ಬದುಕಿನ ಬಗ್ಗೆ ಹೇಳಿಕೊಳ್ಳುವಾಗ ಪೂರ್ಣತೃಪ್ತಿಯನ್ನು ವ್ಯಕ್ತಪಡಿಸದಿರುವುದನ್ನು ಗಮನಿಸುತ್ತೇವೆ. ಆಗ ಮೇಲಿನ ವಾಕ್ಯ ಸತ್ಯವೆಂದು ಗೋಚರಿಸುತ್ತದೆ. ಏಕೆ ಹೀಗೆಂದು ಪ್ರಶ್ನಿಸಿದಾಗ ಉತ್ತರಗಳಾಗಿ ಹುಡುಕುವ ಕಾರಣಗಳಲ್ಲಿ ಬಹುತೇಕವು ಹೊರಗೆ ಬೊಟ್ಟುಮಾಡಿರುವಂತಹವು. ಅಂದರೆ ತಮ್ಮ ಜೀವನದ ಅನೇಕ ಏರಿಳಿತಗಳಿಗೆ ಕಾರಣಗಳನ್ನು ಹೊರಗೆ ಕಾಣುವುದು. ಅಂದರೆ ಹೊಣೆಗಾರಿಕೆಯನ್ನು ವರ್ಗಾಯಿಸುವ ಪ್ರಯತ್ನವಿದು. ವಿಧಿಬರಹ, ಹಣೆಬರಹ, ಅದೃಷ್ಟ – ಎಂಬೆಲ್ಲ ಪದಗಳು ಈ ಹೊಣೆಗಾರಿಕೆಯ ಜಾರಿಕೆಗೆ ನೀಡುವ ಸಮಜಾಯಿಷಿಗಳು. ಪುರುಷಪ್ರಯತ್ನಕ್ಕೆ ಒತ್ತುಕೊಡದೆ ವಿಧಿಗೆ ಬದುಕನ್ನು ಒಪ್ಪಿಸುವ ದೌರ್ಬಲ್ಯದಿಂದ ಮೊದಲಿಗೆ ಪಾರಾಗಬೇಕು.

ಹೊಣೆಗಾರಿಕೆಯೆಂದರೆ ಜವಾಬ್ದಾರಿಯೇ. ಅಂದರೆ ನಮ್ಮ ಕ್ರಿಯೆ, ನಡೆ, ಅದರಿಂದಾಗುವ ಪರಿಣಾಮಗಳ ಬಗ್ಗೆ ಪೂರ್ಣ ಹೊಣೆಯನ್ನು ಹೊರುವುದು. ‘ಪರೀಕ್ಷೆ ಬರೆದೆ; ಆದರೆ ನಿರೀಕ್ಷಿತ ಫಲಿತಾಂಶ ಬರಲಿಲ್ಲ, ಮೌಲ್ಯಮಾಪಕರು ಕಾರಣ.’ ‘ಸ್ಪರ್ಧಾತ್ಮಕ ಪರೀಕ್ಷೆ ಬರೆಯುವುದಿಲ್ಲ, ಏಕೆಂದರೆ ಅಲ್ಲಿ ಕೇವಲ ವಂಚನೆ ನಡೆಯುತ್ತಿದೆ’ ಎಂಬೆಲ್ಲ ನಕಾರಾತ್ಮಕ ಹೇಳಿಕೆಗಳನ್ನು ಕೇಳುತ್ತಲೇ ಇರುತ್ತೇನೆ. ಇವು ಸಾರ್ವಜನಿಕ ಸತ್ಯವೆಂದು ಗೋಚರಿಸಬಹುದಾದರೂ, ಇಂಥವು ಸಾರ್ವತ್ರಿಕ ಸತ್ಯವಾಗಲಾರವು. ಇಂಥ ಸಂಗತಿಗಳು ನಡೆಯುವುದಿಲ್ಲವೆಂದಲ್ಲ. ಪ್ರತಿ ಬಾರಿಯೂ ಅದು ನಡೆಯುತ್ತದೆ ಮತ್ತು ಅದು ತಮಗೇ ಆಗುತ್ತದೆ ಎಂದೂ ಹೆದರುವುದು ತಪ್ಪು. ಅದು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಬೇಜವಾಬ್ದಾರಿತನ.

ಶ್ರೀರಾಮಕೃಷ್ಣ ಪರಮಹಂಸರು ಒಂದು ಸೊಗಸಾದ ದೃಷ್ಟಾಂತದ ಮೂಲಕ ಮನುಷ್ಯನ ಹೊಣೆಗಾರಿಕೆಯ ಜಾಣತನದ ಬಗ್ಗೆ ತಿಳಿಸಿಕೊಡುತ್ತಾರೆ. ಬ್ರಾಹ್ಮಣನೊಬ್ಬ ತೋಟವೊಂದನ್ನು ಬೆಳೆಸಿರುತ್ತಾನೆ. ಒಂದು ದಿನ ತುಡುಗು ದನವೊಂದು ಬಂದು ಇವನ ತೋಟವನ್ನು ಮೇಯ್ದು ಹಾಳುಗೆಡವುತ್ತಿರುತ್ತದೆ. ಅವನು ಕೋಪದಿಂದ ದೊಣ್ಣೆಯನ್ನು ಬೀಸಿ ಹಸುವಿಗೆ ಹೊಡೆಯುತ್ತಾನೆ. ಆ ಹೊಡೆತಕ್ಕೆ ಹಸು ಸತ್ತುಬೀಳುತ್ತದೆ. ಆ ಬ್ರಾಹ್ಮಣನಿಗೆ ಈಗ ಗೋಹತ್ಯೆಯ ಪಾಪ ತಗಲುವ ಭಯ ಉಂಟಾಗುತ್ತದೆ. ಆದರೆ ಅವನ ತರ್ಕಬುದ್ಧಿ ಜಾಗೃತವಾಗಿ ಅವನು ಹೀಗೆ ಯೋಚಿಸುತ್ತಾನೆ: ‘ದೇಹದ ಎಲ್ಲ ಅಂಗಗಳೂ ದೇವತೆಗಳಿಗೆ ಸೇರಿದವು. ಕೈ ಇಂದ್ರನ ಸ್ಥಾನ. ಹೀಗಾಗಿ ಹಸುವನ್ನು ಕೊಂದವನು ಇಂದ್ರನೇ ಹೊರತು ತಾನಲ್ಲ.’

ಇಂದ್ರನು ಈ ಬ್ರಾಹ್ಮಣನಿಗೆ ಬುದ್ಧಿಯನ್ನು ಕಲಿಸುವ ಸಲುವಾಗಿ ಮಾರುವೇಷದಲ್ಲಿ ಬಂದು ಅವನನ್ನು ತೋಟದಲ್ಲೇ ಭೇಟಿಯಾಗುತ್ತಾನೆ. ಮೊದಲಿಗೆ ತೋಟವನ್ನು ಮೆಚ್ಚಿಕೊಳ್ಳುತ್ತಾನೆ. ‘ಸೊಗಸಾದ ತೋಟ, ಯಾರದು?’ ಎನ್ನುತ್ತಾನೆ. ಅದಕ್ಕೆ ಆ ಬ್ರಾಹ್ಮಣ, ‘ನನ್ನದು’ ಎನ್ನುತ್ತಾನೆ. ಬಳಿಕ ಸುಂದರವಾಗಿ ಬೆಳೆದ ಗಿಡವೊಂದರ ಬಳಿ ನಿಂತು ‘ಈ ಗಿಡ ಬೆಳೆಸಿದವರಾರು?’ ‘ನಾನೇ ಕೈಯಾರೆ ಬೆಳೆಸಿದ್ದು’ ಎಂಬ ಉತ್ತರ. ಬಳಿಕ ಫಲಭರಿತ ವೃಕ್ಷದ ಬಳಿ ನಿಂತು ಅದೇ ಪ್ರಶ್ನೆ. ‘ನಾನೇ ಕೈಯಾರೆ ನೀರು ಎರೆದು ಪೋಷಿಸಿದೆ. ಮರ ನನ್ನದೇ’ ಎಂದು ಉತ್ತರಿಸುತ್ತಾನೆ, ಆ ಬ್ರಾಹ್ಮಣ. ಬಳಿಕ ಸತ್ತ ಹಸುವನ್ನು ತೋರಿಸಿ ದೇವೇಂದ್ರ, ‘ಇದು ಯಾರ ಕೆಲಸ? ಗಿಡ ಮರ ಪೋಷಿಸಿದಾಗ ಕೈಗಳು ನಿನ್ನವು, ತಪ್ಪೆಸಗಿದಾಗ ಅದು ದೇವೇಂದ್ರನದಾಗುತ್ತದೊ?’ ಎಂದು ಪ್ರಶ್ನಿಸಿ ಮರೆಯಾಗುತ್ತಾನೆ.

ನಮ್ಮೆಲ್ಲ ಕಾರ್ಯಗಳಿಗೆ ನಾವೇ ಹೊಣೆಗಾರರಲ್ಲದೆ ಬೇರಾರೂ ಅಲ್ಲ.

ಹೊಣೆಗಾರಿಕೆ ಎಂದರೆ ನಮ್ಮ ಜೀವನದ ಎಲ್ಲ ಮಜಲುಗಳಲ್ಲಿ ತನ್ನ ಪ್ರಜ್ಞಾಪೂರ್ವಕ ಭಾಗವಹಿಸುವಿಕೆಯನ್ನು ಗುರುತಿಸಿಕೊಳ್ಳುವುದು. ‘ವಿಧಿ’ಗೆ ತನ್ನನ್ನು ಒಪ್ಪಿಸದೆ ಗಟ್ಟಿಯಾಗಿ ನಿಲ್ಲುವ ವಿವೇಕ ಇರಬೇಕು. ‘ಕಗ್ಗ’ ಹೇಳುತ್ತದೆ: ‘ನರಜೀವನದ ರಣದಿ ವಿಧಿಯ ಬಲವೊಂದು ಕಡೆ, ಚಿರವಿವೇಕದಿ ಬೆಳೆದ ನಲುಮೆಯೊಂದು ಕಡೆ, ಉರುಬುತಿರೆ ಪುರುಷಂಗೆ ನಲುಮೆಯುಳಿತವೆ ಗೆಲವು ಪುರುಷತನವೇ ವಿಜಯ – ಮಂಕುತಿಮ್ಮ.’ ಮನುಷ್ಯನ ಜೀವಿತದಲ್ಲಿ ವಿಧಿ ಮತ್ತು ಪುರುಷಪ್ರಯತ್ನದ ಪಾತ್ರವನ್ನು ಕಗ್ಗದ ಈ ಪದ್ಯ ಬಿಂಬಿಸುತ್ತಿದೆ. ವಿಧಿಯ ಬಲ ಅವನ ಜೀವನವನ್ನು ಒಂದು ಕಡೆಗೆ ಸೆಳೆಯುತ್ತಿದ್ದರೆ, ವಿವೇಕದಿಂದ ಉದಿಸಿದ ಬಲ ಇನ್ನೊಂದು ಕಡೆಗೆ ಎಳೆಯುತ್ತಿರುತ್ತದೆ. ‘ವಿಧಿವಶ’ರಾಗುವುದು ಸುಲಭ. ಇದು ನೀರಿನ ಸಹಜ ಸೆಳೆತದ ಜೊತೆಗೆ ಈಜುವಂತಹದ್ದು. ಆದರೆ ವಿವೇಕದ ಬಲ, ಅದರ ವಿರುದ್ಧ ಈಜುವಂತಹದ್ದು. ಹೀಗಾಗಿ ಯಶಸ್ವೀ ಬದುಕು ಪುರುಷಪ್ರಯತ್ನದ ವಿಜಯಕುಸುಮಗಳ ಮಾಲೆ. ಅದನ್ನೇ ಕಗ್ಗವು ‘ಪುರುಷತನವೇ ವಿಜಯ’ ಎನ್ನುತ್ತದೆ. ವಿವೇಕ ಹೀಗೆ ಮಾಡೆಂದರೂ ಅಲ್ಲಿ ಸಂಕಲ್ಪಬಲವೂ ಬೇಕು. ವಿವೇಕ ಮತ್ತು ಸಂಕಲ್ಪ ಸೇರಿ ಪುರುಷಪ್ರಯತ್ನ.

ಹೊಣೆಗಾರಿಕೆಯು ವ್ಯಕ್ತಿಯಲ್ಲಿ ಪರಿಪೂರ್ಣವಾಗಿ ವಿಕಾಸಗೊಂಡಾಗ ಅವನು ಅದನ್ನು ಸಾರ್ವತ್ರಿಕ ಮೌಲ್ಯವಾಗಿ ಕಾಣಬಯಸುತ್ತಾನೆ. ಅದನ್ನು ಸಾರ್ವಜನಿಕ ಜೀವನದಲ್ಲಿ ಅಳವಡಿಸಬಯಸುತ್ತಾನೆ. ಬಾಪೂ ಅವರಿಗೆ ಆದದ್ದು ಅದೇ. ಭಾರತೀಯರಾದ ನಮಗೆ ಸ್ವಾತಂತ್ರ್ಯ ಬೇಕಿತ್ತು. ಆದರೆ ಅದಕ್ಕೆ ಬೇಕಾದ ಜನಾಂಗೀಯ ಆಂತರಿಕ ಮೌಲ್ಯ ಇರಲಿಲ್ಲ. 1902ರಲ್ಲಿ ಸ್ವಾಮಿ ವಿವೇಕಾನಂದರನ್ನು ಸಂದರ್ಶಿಸಿದ ಪತ್ರಕರ್ತನೊಬ್ಬ, ‘ಭಾರತ ಸ್ವಾತಂತ್ರ್ಯ ಪಡೆಯುವ ಬಗ್ಗೆ ನಿಮ್ಮ ಅಭಿಪ್ರಾಯವೇನು?’ ಎಂದು ಪ್ರಶ್ನಿಸಿದಾಗ, ಅವರು ‘ಸ್ವಾತಂತ್ರ್ಯ? ಅದನ್ನು ನಾಳೆಯೇ ದೊರಕಿಸಬಲ್ಲೆ. ಆದರೆ ಮನುಷ್ಯರೆಲ್ಲಿದ್ದಾರೆ ಇಲ್ಲಿ?’ (ಅದಕ್ಕೆ ಅರ್ಹತೆ ಪಡೆದಿಲ್ಲವೆಂಬ ಸೂಚನೆ) ಎಂದು ಉತ್ತರಿಸುತ್ತಾರೆ. ಮುಂದಿನ 45 ವರ್ಷ ದೇಶದಲ್ಲಿ ನಡೆದದ್ದು ಅದೇ. ಅವರ ಚಿಂತನೆಯ ತಳಹದಿಯ ಮೇಲೆಯೇ ಹೋರಾಟಗಳು ರೂಪುಗೊಂಡವು. ಎಲ್ಲ ರಾಷ್ಟ್ರನಾಯಕರೂ ವಿವೇಕಾನಂದರ ಚಿಂತನೆಯಿಂದ ಪ್ರಭಾವಿತರಾದವರೇ. ಗಾಂಧೀಜಿ ಅವರ ಇಡೀ ಹೋರಾಟ ವ್ಯಕ್ತಿಯ ಆಂತರಿಕ ಶಕ್ತಿಯ ವಿಕಾಸದ ಮೇಲೆ ನಿಂತಿತ್ತು. ಅವರಿಗೆ ಗುರಿಯಷ್ಟೆ ದಾರಿಯೂ ಮುಖ್ಯವಾಗಿತ್ತು.

ಮೌಲ್ಯವನ್ನು ಸಾರ್ವತ್ರಿಕ ಎಂದು ಭಾವಿಸುವ ಕವಿಹೃದಯಿಗಳು ಇದ್ದಾರೆ. ಮನುಷ್ಯನ ಅಂತರಂಗದ ಹೃದಯಶಿವನನ್ನು ಎಚ್ಚರಿಸುವ ಡಿಂಡಿಮದ ಕರೆಯನ್ನು ಅವರು ನೀಡುತ್ತಲೇ ಬಂದಿದ್ದಾರೆ. ‘ದಿ ಪ್ರಾಫೆಟ್’ ಕೃತಿಯಲ್ಲಿ ಗಿಬ್ರಾನ್ ಸಮುದಾಯವನ್ನು ಪರಿಪೂರ್ಣತೆಯತ್ತ ಸಾಗುವ ಮೆರವಣಿಗೆಯ ಗುಂಪಿಗೆ ಹೋಲಿಸುತ್ತಾನೆ. ತಪ್ಪುಗಳನ್ನು ಸಾರ್ವತ್ರಿಕ ಹೊಣೆಗಾರಿಕೆಗೆ ಜೋಡಿಸುವ ಪ್ರಯತ್ನ ಮಾಡುತ್ತಾನೆ. ಪ್ರತಿಯೊಬ್ಬರೂ ಮತ್ತೊಬ್ಬರ ನಡವಳಿಕೆಗೆ ಜವಾಬ್ದಾರರು ಎನ್ನುತ್ತಾನೆ. ತಪ್ಪೆಸಗಿದವನನ್ನು ಕುರಿತು, ಅವನೆಸಗಿದ ತಪ್ಪಿಗೆ ನೀವೂ ಹೊಣೆಗಾರರೆನ್ನುತ್ತಾನೆ (The wrong-doer cannot do wrong without the hidden will of you all). ಹೀಗೆ ಹೊಣೆಗಾರಿಕೆ ವೈಯಕ್ತಿಕವೂ ಹೌದು, ಸಾರ್ವತ್ರಿಕವೂ ಹೌದು. ❖

ಕಂದಾಯ– ಕೃಷಿ ಇಲಾಖೆ ಜಂಟಿ ಸಮೀಕ್ಷೆ ಪ್ರಾಥಮಿಕ ವರದಿ • ಸಂಕಷ್ಟದಲ್ಲಿ ರೈತರು

ಮಳೆ: 5.28 ಲಕ್ಷ ಹೆಕ್ಟೇರ್ ಬೆಳೆ ಹಾನಿ

• ಖಲೀಲಅಹ್ಮದ ಶೇಖ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ಹಲವೆಡೆ ಸುರಿದ ಭಾರಿ ಮಳೆಯಿಂದ ಲಕ್ಷಾಂತರ ಹೆಕ್ಟೇರ್ ಕೃಷಿ ಹಾಗೂ ತೋಟಗಾರಿಕೆ ಬೆಳೆ ನಾಶವಾಗಿದೆ.

ಕಲಬುರಗಿ, ಗದಗ, ಧಾರವಾಡ, ಹಾವೇರಿ, ಬೀದರ್ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ಬೆಳೆ ಹಾನಿಯಾಗಿದೆ.

ಕೊಯ್ಲಿಗೆ ಬಂದಿದ್ದ ಹೆಸರು, ಮೆಕ್ಕೆ ಜೋಳ, ತೊಗರಿ ಬೆಳೆಗಳು ಸಂಪೂರ್ಣ ನೆಲಕಚ್ಚಿದ್ದು, ಅಳಿದುಳಿದ ಬೆಳೆ ರಕ್ಷಿಸಿಕೊಳ್ಳಲು ರೈತರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಜ್ಯದಲ್ಲಿ 5.17 ಲಕ್ಷ ಹೆಕ್ಟೇರ್ ಕೃಷಿ ಬೆಳೆ ಮತ್ತು 11 ಸಾವಿರ ಹೆಕ್ಟೇರ್ ತೋಟಗಾರಿಕೆ ಬೆಳೆ ನಾಶವಾಗಿದೆ. ಅಂದಾಜು ₹ 2,611 ಕೋಟಿಗೂ ಅಧಿಕ ನಷ್ಟವಾಗಿದೆ. ಬೆಳೆ ಹಾನಿ ಸಮೀಕ್ಷೆ ಇನ್ನೂ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಯಲ್ಲಿ ಅತಿ ಹೆಚ್ಚು ಹಾನಿಯಾಗಿದ್ದು, 79 ಸಾವಿರ ಹೆಕ್ಟೇರ್ ತೊಗರಿ ಬೆಳೆ, ಗದಗ ಜಿಲ್ಲೆಯಲ್ಲಿ 76 ಸಾವಿರ ಹೆಕ್ಟೇರ್ ಹೆಸರು ಬೆಳೆ ಸೇರಿ ರಾಜ್ಯದಾದ್ಯಂತ ಮೆಕ್ಕೆಜೋಳ, ನೆಲಗಡಲೆ, ಹತ್ತಿ, ಸೂರ್ಯಕಾಂತಿ, ಕಬ್ಬು, ಸೋಯಾಬೀನ್ ಮುಂತಾದ ಬೆಳೆಗಳಿಗೆ ಹೆಚ್ಚು ಹಾನಿಯಾಗಿದೆ.

ಅಂದಾಜು ₹16 ಕೋಟಿ ಮೌಲ್ಯದ ತೋಟಗಾರಿಕೆ ಬೆಳೆ ನಾಶವಾಗಿದೆ. ಈರುಳ್ಳಿ 4,100 ಹೆಕ್ಟೇರ್, ಆಲೂಗಡ್ಡೆ 1,845, ಟೊಮೆಟೊ 1,067, ಮೆಣಸಿನಕಾಯಿ 639, ಅಡಿಕೆ 635, ಶುಂಠಿ 368, ಅವರೆಕಾಳು 221, ಕ್ಯಾಬೇಜ್ 212, ಬೀನ್ಸ್ 212, ಬಾಳೆ 288, ದ್ರಾಕ್ಷಿ 163, ತೆಂಗಿನಕಾಯಿ 109, ಮೆಣಸು 105, ಪಪ್ಪಾಯಿ 71, ಮಾವಿನ ಹಣ್ಣು 18.15, ಹೂವು 335 ಹೆಕ್ಟೇರ್ ಸೇರಿ ಒಟ್ಟು 11,453 ಹೆಕ್ಟೇರ್ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

ಸಿಗುತ್ತಿರುವ ಪರಿಹಾರ

ಹಾನಿಗೊಳಗಾದ ಮಳೆಯಾಶ್ರಿತ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ₹ 13,600, ನೀರಾವರಿ ಆಶ್ರಿತ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ₹25,500 ಹಾಗೂ ಬಹು ವಾರ್ಷಿಕ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ₹28,000 ಪರಿಹಾರ ಸಿಗಲಿದೆ.

ಐದು ಎಕರೆ ಹೆಸರು ಬಿತ್ತನೆ ಮಾಡಿದ್ದು, ಕೊಯ್ಲಿಗೆ ಸಿದ್ಧವಾಗಿತ್ತು. ಅತಿಯಾದ ಮಳೆಗೆ ಸಿಲುಕಿ ಜಮೀನಿನಲ್ಲೇ ಮೊಳಕೆಯೊಡೆದಿದೆ

ದಾವಲಸಾಬ ತಹಶೀಲ್ದಾರ, ಗದಗ ಜಿಲ್ಲೆಯ ರೈತ

ನಾಲ್ಕು ಎಕರೆಯಲ್ಲಿ ಬೆಳೆದಿದ್ದ ತೊಗರಿಗೆ ಹೊಲದಲ್ಲಿಯೇ ಹಾನಿಯಾಗಿದೆ. ಮಾಡಿರುವ ಖರ್ಚು ಸಹ ಸಿಗುವುದಿಲ್ಲ. ಸರ್ಕಾರ ಪರಿಹಾರ ನೀಡಬೇಕು

ಮಹದೇವಪ್ಪ ತೆನಶೆಟ್ಟಿ, ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ರೈತ

ಕಂದಾಯ ಹಾಗೂ ಕೃಷಿ ಇಲಾಖೆಯಿಂದ ಜಂಟಿ ಸಮೀಕ್ಷೆ ನಡೆಸಲಾಗಿದ್ದು, ಇದು ಪ್ರಾಥಮಿಕ ಅಂದಾಜಿನ ನಷ್ಟ. 15 ದಿನಗಳ ಮಳೆಗೆ ಭಾರಿ ಹಾನಿಯಾಗಿದೆ

ಬಿ. ಶರತ್, ಆಯುಕ್ತ ಕೃಷಿ ಇಲಾಖೆ

ಮಳೆಯಿಂದ ಸಾಕಷ್ಟು ಬೆಳೆ ಹಾನಿಯಾಗಿದ್ದು, ಸರ್ಕಾರದ ಅಂಕಿ–ಅಂಶಗಳು ವಾಸ್ತವ ಹಾನಿಗಿಂತ ಬಹಳ ಕಡಿಮೆ ಇದೆ. ರೈತರಿಗೆ ವೈಜ್ಞಾನಿಕ ಪರಿಹಾರ ನೀಡಬೇಕು

ಬಡಗಲಪುರ ನಾಗೇಂದ್ರ, ಅಧ್ಯಕ್ಷ, ರೈತ ಸಂಘ



ವಚನ ಸಾಹಿತ್ಯ ರಥೋತ್ಸವ

ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ ಸೋಮವಾರ ವಿಜಯಮಹಾಂತೇಶ್ವರ ಸಂಸ್ಥಾನಮಠದ ಶರಣ ಸಂಸ್ಕೃತಿ ಮಹೋತ್ಸವ ನಿಮಿತ್ತ ಬಸವಾದಿ ಶರಣರ ವಚನ ಸಾಹಿತ್ಯ ರಥೋತ್ಸವ ವಿಜೃಂಭಣೆಯಿಂದ ಜರುಗಿತು. 64 ಶಾಖಾಮಠಗಳಿಂದ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಬಾಬಾಬುಡನ್ ಗಿರಿ: ಹೈಕೋರ್ಟ್‌ಗೆ ಮಾಹಿತಿ

ಬೆಂಗಳೂರು: ‘ಚಿಕ್ಕಮಗಳೂರು ಜಿಲ್ಲೆಯ ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್‌ಗಿರಿ ಸ್ವಾಮಿ ದರ್ಗಾದಲ್ಲಿ ಮುಸ್ಲಿಂ ಮತ್ತು ಹಿಂದೂ ಧರ್ಮಗಳ ಸಂಪ್ರದಾಯದಂತೆ ಪೂಜಾವಿಧಿ ನೆರವೇರಿಸುವ ವಿವಾದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ವ್ಯವಸ್ಥಾಪನಾ ಸಮಿತಿ ಸದಸ್ಯರ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಮೌಲ್ವಿ ಸೈಯದ್ ಗೌಸ್ ಮೊಹಿಯುದ್ದೀನ್ ಶಾಖಾದ್ರಿ ಸಲ್ಲಿಸಿರುವ ಮೇಲ್ಮನವಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ಪೀಠ ವಿಚಾರಣೆ ನಡೆಸಿತು. ಅಡ್ವೊಕೇಟ್ ಪ್ರಭುಲಿಂಗ ಕೆ.ನಾವದಗಿ, ಈ ಸಂಬಂಧ ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿ ವಿವರಣೆ ನೀಡಿದರು. ಮೇಲ್ಮನವಿ ಪರ ವಕೀಲರು, ಸಮಯಾವಕಾಶ ಕೋರಿದ್ದರಿಂದ ವಿಚಾರಣೆಯನ್ನು ಸೆ. 5ಕ್ಕೆ ಮುಂದೂಡಿ ‘ಈಗಿನ ಪೂಜಾ ಪದ್ಧತಿಯೇ ಮುಂದುವರಿಯಲಿ’ ಎಂದಿತು.

ಮುಸ್ಲಿಂ ಸಂಘಟನೆಗಳ ಮೌನಕ್ಕೆ ಐಎಂಎಸ್‌ಡಿ ಅಸಮಾಧಾನ

‘ಸೆಟಾನಿಕ್ ವರ್ಸಸ್’ ಕಾದಂಬರಿ ಪ್ರಕಟವಾದಾಗ ಇನ್ನೂ ಹುಟ್ಟಿರದ ಹದಿ ಮಟರ್ ಎಂಬಾತ ಖೊಮೇನಿ ಹೊರಡಿಸಿದ ಫತ್ವಾ ಜಾರಿಗೊಳಿಸಲು ಹೊರಟಿದ್ದು, ಅದನ್ನು ಎಲ್ಲರೂ ಖಂಡಿಸಬೇಕು

‘ಸಲ್ಮಾನ್ ರಶ್ದಿ ಮೇಲಿನ ದಾಳಿ ಭಯ ಸೃಷ್ಟಿಸುವ ಹುನ್ನಾರ’

ಬೆಂಗಳೂರು: ಅಮೆರಿಕದ ನ್ಯೂಯಾರ್ಕ್‌ನಲ್ಲಿ ನಡೆದ ಬರಹಗಾರ ಸಲ್ಮಾನ್ ರಶ್ದಿ ಮೇಲಿನ ದಾಳಿಯನ್ನು ಇಂಡಿಯನ್ ಮುಸ್ಲಿಮ್ಸ್ ಫಾರ್ ಸೆಕ್ಯುಲರ್ ಡೆಮಾಕ್ರೆಸಿ (ಐಎಂಎಸ್‌ಡಿ) ಖಂಡಿಸಿದೆ. ಇರಾನಿನ ನಾಯಕ ಅಯಾತ್‌ಉಲ್ಲಾ ಅಲಿ ಖೊಮೇನಿ 1989ರಲ್ಲಿ ಹೊರಡಿಸಿದ ಫತ್ವಾವೇ ಆ ದಾಳಿಗೆ ಕಾರಣ ಎಂದು ಹೇಳಿದೆ.



ಸಲ್ಮಾನ್ ರಶ್ದಿ

‘ಪ್ರವಾದಿಯವರನ್ನು ನಿಂದಿಸಿದ್ದಾರೆ ಎಂಬ ಆರೋಪಕ್ಕೆ ರಶ್ದಿ ಕಳೆದ 33 ವರ್ಷಗಳಿಂದ ತುತ್ತಾಗಿದ್ದಾರೆ. ‘ಮುಸಲ್ಮಾನರಿಗೆ ಭಾವನಾತ್ಮಕ ನೋವು’ ಉಂಟುಮಾಡಿದ್ದಕ್ಕೆ ರಶ್ದಿ ಅವರು ಕ್ಷಮೆ ಕೇಳಿದ ಮೇಲೆಯೂ ಅವರ ವಿರುದ್ಧದ ಫತ್ವಾ ಜಾರಿಯಲ್ಲಿಯೇ ಇದೆ ಎಂಬುದನ್ನು ಈ ದಾಳಿ ತೋರಿಸುತ್ತದೆ. ಮುಸ್ಲಿಂ ಪ್ರಮುಖ ಸಂಸ್ಥೆ ಮತ್ತು ಸಂಘಟನೆಗಳು ಈ ದಾಳಿಯನ್ನು ಖಂಡಿಸಿಲ್ಲ. ಇಸ್ಲಾಮ್ ದೇಶಗಳೂ ಮೌನ ವಹಿಸಿವೆ. ಆ ಮೌನವು ಇಸ್ಲಾಮ್ ದ್ವೇಷಿಗಳಿಗೆ ಬಲ ನೀಡುತ್ತದೆ. ಇಸ್ಲಾಂ ಎಂದರೆ ಹಿಂಸಾಚಾರ ಮತ್ತು ಭಯೋತ್ಪಾದಕ ಮತ ಎಂದು ಟೀಕಿಸಲು ಸುಲಭವಾಗುತ್ತದೆ’ ಎಂದು ಅಭಿಪ್ರಾಯಪಟ್ಟಿದೆ.

‘ಇಸ್ಲಾಂ ಧಿಕ್ಕರಿಸಿ ನಡೆದವರು ಕ್ಷಮೆ ಕೇಳಿದರೆ ಅದನ್ನು ಮಾನ್ಯ ಮಾಡಬೇಕು, ಪ್ರವಾದಿ ಮೊಹಮ್ಮದರನ್ನು ನಿಂದಿಸಿದರೆ ಅವರಿಗೆ ಯಾವ ರೀತಿಯ ದಯೆಯನ್ನೂ ತೋರದೆ ತಲೆದಂಡ ಪಡೆಯಬೇಕೆಂದು ಇಸ್ಲಾಂ ದೈವಮತಶಾಸ್ತ್ರ ಹೇಳುತ್ತದೆ’ ಎಂದು ಹೇಳಿದೆ.

‘ಧರ್ಮದ ಟೀಕೆಯ ವಿಷಯದಲ್ಲಿ ತಾವು ತಳೆಯುತ್ತ ಬಂದಿರುವ ನಿಲುವನ್ನು ಎಲ್ಲಾ ಮುಸ್ಲಿಂ ಸಂಘಟನೆಗಳೂ ಮರು ವಿವೇಚನೆಗೆ ಒಳಪಡಿಸಬೇಕಿದೆ’ ಎಂದು ಐಎಂಎಸ್‌ಡಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ. ಲೇಖಕ ರಾಮ್ ಪುನಿಯಾನಿ, ಹೋರಾಟಗಾರ್ತಿ ಮೇಧಾ ಪಾಟ್ಕರ್, ಸ್ವರಾಜ್ ಅಭಿಯಾನದ ಯೋಗೇಂದ್ರ ಯಾದವ್, ‘ನ್ಯೂ ಏಜ್ ಇಸ್ಲಾಂ’ ಸಂಪಾದಕ ಸುಲ್ತಾನ್ ಶಾಹಿನ್, ಶಂಶುಲ್ ಇಸ್ಲಾಂ, ಇರ್ಫಾನ್ ಇಂಜಿನಿಯರ್, ವಿದ್ವಾಂಸ ಗುಲಾಮ್ ರಸೂಲ್ ದೆಹಲ್ವಿ ಸೇರಿ 61 ಮಂದಿ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದೆ.

ಕರಾವಳಿಯಲ್ಲಿ ಗಾಳಿ, ಮಳೆ

ಕಾರವಾರ/ಮಂಗಳೂರು: ಜಿಲ್ಲೆಯ ಕರಾವಳಿಯಲ್ಲಿ ಸೋಮವಾರ ದಿನವಿಡೀ ಗಾಳಿ, ಮಳೆಯಾಗಿದೆ.

ಭಟ್ಕಳ, ಹೊನ್ನಾವರ, ಕುಮಟಾ ಭಾಗದಲ್ಲಿ ತುಸು ಜೋರಾಗಿ ಸುರಿದರೆ, ಅಂಕೋಲಾ, ಕಾರವಾರ ತಾಲ್ಲೂಕುಗಳಲ್ಲಿ ಬಿಟ್ಟು ಬಿಟ್ಟು ಬಂದಿದೆ. ಮಲೆನಾಡಿನ ಶಿರಸಿ, ಸಿದ್ದಾಪುರ ತಾಲ್ಲೂಕಿನಾದ್ಯಂತ ಕೂಡ ಮಳೆಯಾಗಿದೆ.

ಜಿಲ್ಲೆಯಲ್ಲಿ ಹಲವು ದಿನಗಳಿಂದ ಮಳೆ ಇರಲಿಲ್ಲ. ಕರಾವಳಿಯ ಮೂರೂ ಜಿಲ್ಲೆಗಳಲ್ಲಿ ಆ.23ರಂದೂ ಮಳೆ ಸಾಧ್ಯತೆಯಿದ್ದು, ‘ಯೆಲ್ಲೋ ಅಲರ್ಟ್’ ಘೋಷಿಸಲಾಗಿದೆ ಎಂದು ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರವು ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಾಗ ಬಿಡುವು ಕೊಟ್ಟು ರಭಸದ ಮಳೆಯಾಯಿತು. ಕರಾವಳಿ ಜಿಲ್ಲೆಗಳಲ್ಲಿ ಆ.24 ಮತ್ತು 25ರಂದು ಯಲ್ಲೊ ಅಲರ್ಟ್ ಘೋಷಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯದ ಸಮೀಪದ ಕುಮಾರಧಾರಾ ನದಿಯಲ್ಲಿ ಭಾನುವಾರ ಸ್ನಾನಕ್ಕೆ ಇಳಿದಿದ್ದ ಬೆಂಗಳೂರಿನ ಶಿವು (25) ಎಂಬುವರು ಕಾಣೆಯಾಗಿದ್ದಾರೆ. ಸೋಮವಾರ ಸಂಜೆಯವರೆಗೂ ಶೋಧ ನಡೆಯಿತು.

ಮಡಿಕೇರಿ ವರದಿ: ನಗರ ಸೇರಿದಂತೆ ನಾಪೋಕ್ಲು ಹೋಬಳಿ ಹಾಗೂ ಸೋಮವಾರಪೇಟೆ ತಾಲ್ಲೂಕಿನಲ್ಲಿ ದಿನವಿಡೀ ಬಿರುಗಾಳಿ ಸಹಿತ ಮಳೆ ಸುರಿದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.33	7,105	5,022
ಹಾರಂಗಿ	2,859	2,858.24	6,000	1,300
ಕಬಿನಿ	2284.00	2,283.43	4,350	2,000
ಹೇಮಾವತಿ	2,922	2,921.90	5,712	5,650
ಲಿಂಗನಮಕ್ಕಿ	1,819	1,813	12,262	5,155
ಸೂಪಾ (ಮೀ)	564	549.05	9,628	221
ಮಾಣಿ	595	588	2,523	-
ತುಂಗಭದ್ರಾ	1,633	1,632.99	30,590	30,190
ಮಲಪ್ರಭಾ	2079.5	2,077.80	2,556	994
ಘಟಪ್ರಭಾ	2175	2,174.70	6,924	4,990
ಭದ್ರಾ	186	184	7,553	5,145
ಆಲಮಟ್ಟಿ (ಮೀ)	519.6	519.60	56,145	67,500
ನಾರಾಯಣಪುರ (ಮೀ)	492.25	491.90	70,000	67,218

* ನೆಲಮಟ್ಟದಿಂದ

2 ತಿಂಗಳಲ್ಲಿ 34 ಸಾವಿರ ಅರ್ಜಿ ಸಲ್ಲಿಕೆ

ಕಂದಾಯ ಸಹಾಯವಾಣಿ: ವಾರಕ್ಕೆ 3 ಸಾವಿರ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆ ಆರಂಭಿಸಿರುವ ‘ಹಲೋ ಕಂದಾಯ ಸಚಿವರೇ’ ಸಹಾಯವಾಣಿಗೆ ವಾರಕ್ಕೆ ಸರಾಸರಿ 3,000ಕ್ಕೂ ಹೆಚ್ಚು ಕರೆಗಳ ಮೂಲಕ ಅರ್ಜಿಗಳು ಸಲ್ಲಿಕೆಯಾಗುತ್ತಿದ್ದು, ಈವರೆಗೆ ಸುಮಾರು 34,020 (ಸಾಮಾಜಿಕ ಭದ್ರತಾ ಯೋಜನೆಯ ಪಿಂಚಣಿಗಳು) ಅರ್ಜಿಗಳು ಸಲ್ಲಿಕೆಯಾಗಿವೆ.

ಅರ್ಜಿ ಸಲ್ಲಿಕೆಯಾದ 72 ಗಂಟೆಗಳಲ್ಲಿ ಅರ್ಹರಿಗೆ ಪಿಂಚಣಿಯ ಒದಗಿಸುವ ಮಂಜೂರಾತಿ ಆದೇಶಗಳನ್ನು ನೀಡುವ ಯೋಜನೆ ಇದಾಗಿದೆ. ಮಧ್ಯವರ್ತಿಗಳ ಹಾವಳಿ, ಕಂದಾಯ ಅಧಿಕಾರಿಗಳು ಮತ್ತು ಗ್ರಾಮಲೆಕ್ಕಿಗರಿಂದ ಆಗುತ್ತಿದ್ದ ವಿಳಂಬ ಮತ್ತು ಭ್ರಷ್ಟಾಚಾರಕ್ಕೂ ಕಡಿವಾಣ ಬಿದ್ದಿದೆ ಎಂದು ಕಂದಾಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈವರೆಗೆ ಸಲ್ಲಿಕೆಯಾಗಿರುವ ಒಟ್ಟು ಅರ್ಜಿಗಳಲ್ಲಿ ಪೈಕಿ 26,751 ಅರ್ಜಿಗಳಿಗೆ ಆದೇಶ ಆಗಿದೆ. 6,454 ಅರ್ಜಿಗಳು ತಿರಸ್ಕೃತವಾಗಿದ್ದು, 815 ಇತ್ಯರ್ಥವಾಗಬೇಕಾಗಿದೆ ಎಂದು ಅವರು ಹೇಳಿದರು.

ಸಾರ್ವಜನಿಕರು ಟೋಲ್‌ಫ್ರೀ ಸಂಖ್ಯೆ 155245 ಗೆ ಕರೆ ಮಾಡಿದರೆ ಸಹಾಯವಾಣಿ ಕೇಂದ್ರದಲ್ಲಿರುವ ಸಿಬ್ಬಂದಿ, ಕರೆ ಮಾಡಿದವರ ಆಧಾರ್ ಸಂಖ್ಯೆ, ವಿಳಾಸ, ವಯಸ್ಸು, ಯಾವ ವಿಭಾಗದಡಿ ಸಾಮಾಜಿಕ ಪಿಂಚಣಿ ಕೋರುತ್ತಿದ್ದಾರೆ ಎಂಬ ಮಾಹಿತಿಯನ್ನು ಪಡೆಯುತ್ತಾರೆ. ಅದನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುತ್ತಿದ್ದಂತೆ ಮಾಹಿತಿ ಸಮೇತ ಅರ್ಜಿಯು ಸಂಬಂಧಿಸಿದ ಗ್ರಾಮಲೆಕ್ಕಿಗರ ಮೊಬೈಲ್ ಸಂಖ್ಯೆಗೆ ರವಾನೆಯಾಗುತ್ತದೆ. ಗ್ರಾಮಲೆಕ್ಕಿಗರು ಅರ್ಜಿದಾರರ ಮನೆಗೆ ತೆರಳಿ ಅಗತ್ಯ ದಾಖಲೆ ಪಡೆದು, ಅರ್ಹತೆ ಇರುವವರಿಗೆ ಮೂರು ದಿನಗಳಲ್ಲಿ ಆದೇಶದ ಪ್ರತಿ ನೀಡಲಾಗುತ್ತದೆ ಎಂದು ವಿವರಿಸಿದರು.

‘ಸಾಮಾಜಿಕ ಪಿಂಚಣಿ ಪಡೆಯಲು ಸಾಮಾನ್ಯ ಜನ ಕಷ್ಟಪಡುತ್ತಿದ್ದು ಗ್ರಾಮ ವಾಸ್ತವ್ಯದ ಸಂದರ್ಭದಲ್ಲಿ ಗಮನಕ್ಕೆ ಬಂದಿತು. ಬಡ– ಹಿರಿಯ ನಾಗರಿಕರು ನೆಮ್ಮದಿಯಿಂದ ಇರಬೇಕು. ಸಚಿವರು, ಶಾಸಕರ ಮುಂದೆ ಹಿರಿಯ ನಾಗರಿಕರು ದಾರಿ ಮಧ್ಯೆ ಪಿಂಚಣಿಗಾಗಿ ಅರ್ಜಿ ಹಿಡಿದು ನಿಲ್ಲುವುದನ್ನು ತಪ್ಪಿಸಿದ್ದೇವೆ. ಒಟ್ಟು 75.50 ಲಕ್ಷ ಮಂದಿ ವಿವಿಧ ಪಿಂಚಣಿ ಪಡೆಯುತ್ತಿದ್ದು, 2022–23 ನೇ ಸಾಲಿನಲ್ಲಿ 2.02 ಲಕ್ಷ ಹೊಸ ಫಲಾನುಭವಿಗಳು ಸೇರ್ಪಡೆಯಾಗಿದ್ದಾರೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದ್ದಾರೆ.



ಬಡ ಹಿರಿಯ ನಾಗರಿಕರು ನೆಮ್ಮದಿಯಿಂದ ಇರಬೇಕು ಎನ್ನುವ ಕಾರಣಕ್ಕೆ ದೇಶದಲ್ಲೇ ಪ್ರಥಮಬಾರಿಗೆ ಮಾಹಿತಿ ತಂತ್ರಜ್ಞಾನ ಬಳಸಿ, ಪಾರದರ್ಶಕ ವ್ಯವಸ್ಥೆ ತಂದಿದ್ದೇವೆ

ಆರ್.ಅಶೋಕ, ಕಂದಾಯ ಸಚಿವ

ಪಿಂಚಣಿ ಪರಿಷ್ಕರಣೆ

ರಾಜ್ಯ ಸರ್ಕಾರ ಸಾಮಾಜಿಕ ಭದ್ರತೆಯ ಪಿಂಚಣಿಯಡಿ ವರ್ಷಕ್ಕೆ ₹10 ಸಾವಿರ ಕೋಟಿಯನ್ನು ಖರ್ಚು ಮಾಡುತ್ತಿದೆ. ಪಿಂಚಣಿಯ ಮೊತ್ತವನ್ನು ಪರಿಷ್ಕರಿಸಲಾಗಿದ್ದು, ಪರಿಷ್ಕೃತ ಮೊತ್ತ ಹೀಗಿದೆ

ವೃದ್ಧಾಪ್ಯ ಪಿಂಚಣಿ	₹1,200
ವಿಧವಾ ಪಿಂಚಣಿ	₹800
ಅಂಗವಿಕಲ ಪಿಂಚಣಿ	₹800
ಅವಿವಾಹಿತ ಮತ್ತು ವಿಚ್ಛೇದಿತ ಮಹಿಳೆಯರು	₹800
ಮಂಗಳಮುಖಿಯರು	₹800
ಆಸಿಡ್ ದಾಳಿಗೆ ತುತ್ತಾದ ಮಹಿಳೆಯರಿಗೆ	₹10,000

'ಕೊಡಗು ಬಚಾವೋ' ಪ್ರತಿಭಟನೆಗೆ ಜೆಡಿಎಸ್ ಸಿದ್ಧತೆ

ಒಂದೇ ದಿನ ಸಮಾವೇಶ, ಪ್ರತಿಭಟನೆಗೆ ಸಮ್ಮತಿ ಕ್ಷೀಣ

ಪ್ರಜಾವಾಣಿ ವಾರ್ತೆ

ಮಡಿಕೇರಿ: ನಗರದಲ್ಲಿ ಒಂದೇ ದಿನ ನಡೆಸಲು ಉದ್ದೇಶಿಸಿದ್ದ ಬಿಜೆಪಿ ಜನ ಜಾಗೃತಿ ಸಮಾವೇಶ ಮತ್ತು ಕಾಂಗ್ರೆಸ್ ಪ್ರತಿಭಟನೆಗೆ ಅನುಮತಿ ನೀಡದಿರಲು ಪೊಲೀಸ್ ಇಲಾಖೆ ಚಿಂತನೆ ನಡೆಸಿದೆ. ಇನ್ನೊಂದೆಡೆ 'ಅನುಮತಿ ನೀಡಿದರೆ ಅಹಿತಕರ ಘಟನೆಗಳು ನಡೆಯುವ ಸಾಧ್ಯತೆ ಇದೆ' ಎಂದು ಗುಪ್ತಚರ ವಿಭಾಗವು ಸರ್ಕಾರಕ್ಕೆ ವರದಿ ಸಲ್ಲಿಸಿದೆ.

'ಎರಡೂ ಪಕ್ಷದವರನ್ನು ಸೇರಿಸಿ ಆ.23ರಂದು ಸಭೆ ನಡೆಸಲು ನಿರ್ಧರಿಸಿದ್ದು, ಪ್ರತ್ಯೇಕ ದಿನಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಲಿದ್ದಾರೆ. ಒಪ್ಪದಿದ್ದರೆ ಅನುಮತಿ ನಿರಾಕರಿಸಿ, ಎರಡು ದಿನ ಮುಂಚೆಯೇ ನಿಷೇಧಾಜ್ಞೆ ಹೇರುವ ಚಿಂತನೆ ನಡೆಸಿದ್ದಾರೆ. ಹೆಚ್ಚುವರಿ ಪೊಲೀಸರನ್ನು ಕರೆಯಿಸಿಕೊಳ್ಳಲೂ ನಿರ್ಧರಿಸಲಾಗಿದೆ.

'ಟಿಪ್ಪು ಜಯಂತಿ ಗಲಭೆಯನ್ನೇ ಇನ್ನೂ ಮರೆತಿಲ್ಲ. ಅದು ಪುನರಾವರ್ತನೆಯಾಗುವುದು ಬೇಡ. ಒಂದೇ ದಿನ ಎರಡೂ ಪಕ್ಷಗಳಿಂದ ಸಾವಿರಾರು ಜನರು ಬಂದರೆ ತಡೆದುಕೊಳ್ಳುವ ಶಕ್ತಿ ಮಡಿಕೇರಿ ನಗರಕ್ಕೆ ಇಲ್ಲ. ಎರಡೂ ಪಕ್ಷಗಳ ಕಾರ್ಯಕ್ರಮಗಳಿಗೆ ಅನುಮತಿ ನೀಡಬಾರದು' ಎಂದು ಕೊಡಗು ರಕ್ಷಣಾ ವೇದಿಕೆ ಒತ್ತಾಯಿಸಿದೆ. ಅದಕ್ಕೆ ವಾಣಿಜ್ಯೋದ್ಯಮಿಗಳು, ವ್ಯಾಪಾರಿಗಳೂ ದನಿಗೂಡಿಸಿದ್ದಾರೆ.

'ಎರಡೂ ಕಾರ್ಯಕ್ರಮಗಳನ್ನು ರದ್ದುಪಡಿಸಬೇಕು' ಎಂದು ಮನವಿ ಮಾಡಿರುವ ಜೆಡಿಎಸ್ ಜಿಲ್ಲಾ ಘಟಕವು ಆಗಸ್ಟ್ 25ರಂದು 'ಕೊಡಗು ಬಚಾವೊ' ಎಂದು ಆಗ್ರಹಿಸಿ ಪಂಜಿನ ಮೆರವಣಿಗೆ ನಡೆಸಲು ನಿರ್ಧರಿಸಿದೆ. ಪಾಲ್ಗೊಳ್ಳುವಂತೆ ಸಾರ್ವಜನಿಕರಿಗೆ ಮುಕ್ತ ಆಹ್ವಾನವನ್ನೂ ನೀಡಿದೆ.

'26ರಂದು ಅಹಿತಕರ ಘಟನೆಗಳು ನಡೆದರೆ ಎರಡೂ ಪಕ್ಷಗಳು ಜವಾಬ್ದಾರಿ ಹೊರಬೇಕು. ಸಂಭವಿಸುವ ನಷ್ಟಕ್ಕೆ ಎರಡೂ ಪಕ್ಷಗಳ ಮುಖಂಡರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ಜಿಲ್ಲಾ ಜೆಡಿಎಸ್ ಘಟಕದ ಅಧ್ಯಕ್ಷ ಕೆ.ಎಂ. ಗಣೇಶ್ ಆಗ್ರಹಿಸಿದ್ದಾರೆ.

ಈ ಮಧ್ಯೆ, 'ಕುಶಾಲನಗರದ ಗುಡ್ಡೆಹೊಸೂರಿನಲ್ಲಿ ನನ್ನ ಕಾರಿಗೂ ಮೊಟ್ಟೆ ಏಟು ಬಿದ್ದಿತ್ತು. ಬಂಧಿತ ಸಂಪತ್ ನನ್ನ ಬೆಂಬಲಿಗನಾಗಲು ಹೇಗೆ ಸಾಧ್ಯ' ಎಂದು ಕಾಂಗ್ರೆಸ್ ಮುಖಂಡ ಜೀವಿಜಯ ಪ್ರತಿಕ್ರಿಯಿಸಿದ್ದಾರೆ.

'ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಮೊಟ್ಟೆ ಎಸೆದ ಆರೋಪಿಗಳನ್ನು ಗುರುತಿಸುವಲ್ಲಿ ವಿಳಂಬ ಮಾಡುತ್ತಿರುವುದೇಕೆ?' ಎಂದು ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಅವರು ಪ್ರಶ್ನಿಸಿದ್ದಾರೆ.

'ಕೃಷ್ಣ, ಯಡಿಯೂರಪ್ಪ ಮಧ್ಯಸ್ಥಿಕೆ ವಹಿಸಲಿ'

ಮೈಸೂರು: 'ಬಿಜೆಪಿ ಪ್ರಮುಖರಾದ ಶಾಸಕ ಬಿ.ಎಸ್. ಯಡಿಯೂರಪ್ಪ, ಎಸ್.ಎಂ.ಕೃಷ್ಣ ಮಧ್ಯಸ್ಥಿಕೆ ವಹಿಸಿ ಎರಡೂ ಪಕ್ಷದವರ ಮನವೊಲಿಸಬೇಕು. ಕಾನೂನು–ಸುವ್ಯವಸ್ಥೆ ಹಾಳಾಗದಂತೆ ನೋಡಿಕೊಳ್ಳಬೇಕು' ಎಂದು ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಪ್ರತಿಪಾದಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೊಡಗಿನವರಿಗೆ ಕಾಂಗ್ರೆಸ್–ಬಿಜೆಪಿ ಎರಡೂ ಪಕ್ಷಗಳ ಮೇಲೂ ಆಕ್ರೋಶವಿದೆ. ಜಿಲ್ಲೆ ಪ್ರತ್ಯೇಕ ಲೋಕಸಭಾ ಕ್ಷೇತ್ರವಾಗಬೇಕು ಎನ್ನುವ ಕೊಡವರ ಬೇಡಿಕೆ ಹಾಗೇ ಉಳಿದಿದೆ. ಜಿಲ್ಲೆಯ ಅಭಿವೃದ್ಧಿ ಮೊದಲು ಚರ್ಚೆಯಾಗಲಿ' ಎಂದರು.

'ನಾಯಕರ ಮೇಲೆ ಜನ ಮೊಟ್ಟೆ, ಕಲ್ಲು, ಟೊಮೆಟೊ, ಸೆಗಣಿ ಎಸೆಯುವುದು ಸಹಜ. ಬೇಕಿದ್ದರೆ ವಿಧಾನಸಭೆಯಲ್ಲಿ ಅವಿಶ್ವಾಸ ಮಂಡಿಸಿ. ಚುನಾವಣೆ ಸಮೀಪಿಸುತ್ತಿದ್ದು ಏನು ಬೇಕಾದರೂ ಆಗಬಹುದು. ಅದಕ್ಕೆ ಹೊಣೆಯಾಗಬೇಡಿ' ಎಂದು ಸಿದ್ದರಾಮಯ್ಯನವರಿಗೆ ಸಲಹೆ ನೀಡಿದರು.

'ಸಿದ್ದು ಸುಲ್ತಾನ್'ಗೆ ಹೆದರುತ್ತಾರೆಯೇ?'

ಮೈಸೂರು: 'ಸಿದ್ದರಾಮಯ್ಯ ಕೊಡಗಿನ ಮೇಲೆ ದ್ವೇಷ ಸಾಧಿಸುತ್ತಿದ್ದಾರೆ. ಟಿಪ್ಪು ಸುಲ್ತಾನ್ ದಂಡೆತ್ತಿ ಬಂದಾಗಲೇ ಹೆದರದ ಕೊಡಗಿನ ಜನ, ಈ ಸಿದ್ದು ಸುಲ್ತಾನ್‌ಗೆ ಹೆದರುತ್ತಾರೆಯೇ?' ಎಂದು ಮೈಸೂರು–ಕೊಡಗು ಬಿಜೆಪಿ ಸಂಸದ ಪ್ರತಾಪ ಸಿಂಹ ವ್ಯಂಗ್ಯವಾಡಿದರು.

'ಅಕ್ಕ–ಪಕ್ಕದ ಜಿಲ್ಲೆಗಳ ಜನರೊಂದಿಗೆ ಕೇರಳದಿಂದ ಸಾಕುಮಕ್ಕಳಾದ ಎಸ್‌ಡಿಪಿಐ ಕಾರ್ಯಕರ್ತರನ್ನೂ ಕಾಂಗ್ರೆಸ್ ಕರೆತರಲಿ. ಹೊರಗಡೆಯಿಂದ ಜನರನ್ನು ಕರೆತರುವ ದೈನೇಸಿ ಸ್ಥಿತಿ ಕೊಡಗಿನ ಬಿಜೆಪಿಗೆ ಬಂದಿಲ್ಲ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಮೊಟ್ಟೆ ಎಸೆತ: ಬಂಧಿತರ ಸಂಖ್ಯೆ 18ಕ್ಕೆ ಏರಿಕೆ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕೋಳಿಮೊಟ್ಟೆ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದು, ಬಂಧಿತರ ಸಂಖ್ಯೆ 18ಕ್ಕೆ ಏರಿದೆ.

ಸಿದ್ದರಾಮಯ್ಯ ತಪ್ಪು ಮಾಡಿಲ್ಲ: ಮುತಾಲಿಕ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮಾಂಸ ತಿಂದು ದೇವಸ್ಥಾನಕ್ಕೆ ಹೋಗಿದ್ದೆ ಎಂದು ಸಿದ್ದರಾಮಯ್ಯ ಹೇಳಿದ್ದರಲ್ಲಿ ತಪ್ಪಿಲ್ಲ, ಅವರು ತಪ್ಪು ಮಾಡಿಲ್ಲ. ಅವರ ಮೇಲೆ ವಿನಾಕಾರಣ ಆರೋಪ ಮಾಡುತ್ತಿರುವ ಬಿಜೆಪಿ ಬಗ್ಗೆ ಅಸಹ್ಯವಾಗುತ್ತಿದೆ' ಎಂದು ಶ್ರೀರಾಮಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಾಂಸ ಸೇವಿಸಿ ದೇವಸ್ಥಾನಕ್ಕೆ ಹೋಗಿದ್ದೆ ಎನ್ನುವುದು ಚರ್ಚೆ ವಿಷಯವೇ ಅಲ್ಲ. ನಮ್ಮಲ್ಲಿ ಮಾಂಸ ಸೇವಿಸುವ ಮತ್ತು ಸೇವನೆ ಮಾಡದಿರುವ ಭಕ್ತರು ಸಾಕಷ್ಟು ಇದ್ದಾರೆ' ಎಂದರು.

ಮಾಂಸ ಸೇವಿಸಿ ದೇಗುಲಕ್ಕೆ ಹೋಗುವುದು ತಪ್ಪು ಎಂದು ನಾನು ಹೇಳಿಲ್ಲ. ದೇಗುಲಕ್ಕೆ ಹೇಗೆ ಹೋಗಬೇಕು ಎಂಬುದು ಭಾವನೆಗೆ ಸಂಬಂಧಪಟ್ಟಿದ್ದು. ಸಿದ್ದರಾಮಯ್ಯ ಅವರಿಗೆ ಯಾವ ಭಾವನೆ ಇದೆ ಗೊತ್ತಿಲ್ಲ.

ಸುನಿಲ್ ಕುಮಾರ್, ಇಂಧನ ಸಚಿವ

ಹಿಂದೂ ಧರ್ಮದ ದೇಗುಲಗಳಿಗೆ ಹೋಗಬೇಕಾದರೆ ಸಂಪ್ರದಾಯ ಪಾಲಿಸಬೇಕು. ಅವರ ಸಹೋದರರು ಪಾಲಿಸುತ್ತಿದ್ದಾರೆ. ಸಿದ್ದರಾಮಯ್ಯ ಏನು ಮೇಲಿನಿಂದ ಇಳಿದು ಬಂದಿದ್ದಾರೆಯೇ?

ಎಸ್.ಮುನಿಸ್ವಾಮಿ, ಸಂಸದ

ಎಸ್ಪಿ ಕಚೇರಿ ಚಲೋ ಅಧಿಕಾರಿ ವಿರುದ್ಧ ಅಲ್ಲ: ಡಿ.ಕೆ. ಶಿವಕುಮಾರ್

ಬೆಂಗಳೂರು: 'ಸಿದ್ದರಾಮಯ್ಯ ಅವರ ವಾಹನದ ಮೇಲೆ ಮೊಟ್ಟೆ ಎಸೆದ ಘಟನೆ ಖಂಡಿಸಿ ಇದೇ 26ರಂದು ಹಮ್ಮಿಕೊಂಡಿರುವ ಕೊಡಗು ಎಸ್ಪಿ ಕಚೇರಿ ಚಲೋ ಹೋರಾಟ ರಾಜ್ಯ ಸರ್ಕಾರದ ವಿರುದ್ಧವೇ ಹೊರತು, ಅಧಿಕಾರಿ (ಎಸ್ಪಿ) ವಿರುದ್ಧ ಅಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ವಿರುದ್ಧ ಕಪ್ಪು ಬಾವುಟ ಪ್ರತಿಭಟನೆಯನ್ನು ಸರ್ಕಾರವೇ ಪ್ರಾಯೋಜಿಸಿದೆ' ಎಂದು ಆರೋಪಿಸಿದರು.

'ಮೊಟ್ಟೆ ಎಸೆದವನನ್ನು ಹೀರೊ ರೀತಿ ಬಿಂಬಿಸುವ ಬದಲು ಜನರ ಸಂಕಷ್ಟಗಳತ್ತ ಗಮನಹರಿಸಿ. ರಾಜಕೀಯದಲ್ಲಿ ಯಾರೂ ಶಾಶ್ವತವಲ್ಲ. ನಿಮಗೆ ರಾಜ್ಯದ ಜನರ ಸೇವೆಗೆ ಅವಕಾಶ ಸಿಕ್ಕಿದ್ದು, ನೀವು ಏನು ನೀಡಿದ್ದೀರಿ ಎಂಬುದು ಮುಖ್ಯ' ಎಂದು ಬಿಜೆಪಿ ನಾಯಕರಿಗೆ ಸಲಹೆ ನೀಡಿದರು.

ಭಂಡತನ ಸರಿ ಅಲ್ಲ: ವಿಜಯೇಂದ್ರ

ಲಕ್ಷ್ಮೇಶ್ವರ (ಗದಗ): 'ಯಾರು ಏನು ಬೇಕಾದರೂ ತಿನ್ನಬಹುದು. ಆ ಸ್ವಾತಂತ್ರ್ಯ ಅವರಿಗೆ ಇದೆ. ಆದರೆ, ಮಾಂಸ ತಿಂದು ದೇವಸ್ಥಾನಕ್ಕೆ ಹೋಗುತ್ತೇನೆ ಅನ್ನುವ ಭಂಡತನವನ್ನು ಯಾರೂ ಒಪ್ಪಲಾರರು' ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ನಮ್ಮದು ಸಂಸ್ಕೃತಿ, ಪರಂಪರೆ ಇರುವ ನಾಡು. ಇಲ್ಲಿ ಧಾರ್ಮಿಕ ಶ್ರದ್ಧೆ ಬಹಳ ಮುಖ್ಯ. ನಾವು ದೈವವನ್ನು ನಂಬಿ ಜೀವನ ನಡೆಸುವವರು. ರಾಜಕಾರಣದಲ್ಲಿ ಇರುವವರು ಬಹಿರಂಗ ಹೇಳಿಕೆ ಕೊಡುವಾಗ ಎಚ್ಚರಿಕೆ ವಹಿಸಬೇಕು' ಎಂದರು.

ಚರ್ಚೆಯಿಂದ ಏನು ಪ್ರಯೋಜನ: ಯತೀಂದ್ರ

ಚಾಮರಾಜನಗರ: 'ಆಹಾರ ಸೇವನೆ ಅವರವರ ಇಚ್ಛೆ. ದೇವಸ್ಥಾನಕ್ಕೆ ಇಂತಹದ್ದನ್ನೇ ತಿಂದು ಹೋಗಬೇಕು ಎಂದು ಯಾರು ಹೇಳಿದ್ದಾರೆ? ಅಲ್ಲಿಗೆ ಬರುವ ಪ್ರತಿಯೊಬ್ಬರನ್ನೂ ಏನು ತಿಂದಿದ್ದಾರೆ ಎಂದು ಪರಿಶೀಲಿಸಲು ಆಗುತ್ತದೆಯೇ. ಈ ಚರ್ಚೆಯಿಂದ ಜನರು, ನಾಡಿಗೇನು ಪ್ರಯೋಜನ' ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಪ್ರಶ್ನಿಸಿದರು.

'ನಮ್ಮ ತಂದೆಯವರು ದನ ಮತ್ತು ಹಂದಿ ಮಾಂಸ ತಿನ್ನುವುದಿಲ್ಲ. ಹಾಗಿರುವಾಗ ಬೇರೆಯವರನ್ನು ತಿನ್ನಿ ಎನ್ನಲಾಗುತ್ತದೆಯೇ? ಪ್ರತಾಪ್ ಸಿಂಹ ಬಂದು ಬಲವಂತವಾಗಿ ತಿನ್ನಿಸಲು ಆಗುತ್ತದೆಯೇ' ಎಂದು ಪ್ರಶ್ನಿಸಿದರು.

'ನಾರಾಯಣಗುರು ಅಭಿವೃದ್ಧಿ ನಿಗಮ ಶೀಘ್ರ'

ಚಿತ್ತಾಪುರ (ಕಲಬುರಗಿ ಜಿಲ್ಲೆ): 'ಆರ್ಯ ಈಡಿಗ ಸಮಾಜದ ಕುಲಗುರು ನಾರಾಯಣ ಗುರುಗಳ ಹೆಸರಲ್ಲಿ ಅಭಿವೃದ್ಧಿ ನಿಗಮ ಸ್ಥಾಪಿಸುವ ಬಗ್ಗೆ ಸರ್ಕಾರದಿಂದ ಶೀಘ್ರವೇ ಸಿಹಿ ಸುದ್ದಿ ಹೊರ ಬೀಳಲಿದೆ' ಎಂದು ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

ತಾಲ್ಲೂಕಿನ ಕರದಾಳದಲ್ಲಿ ಸೋಮವಾರ ಬ್ರಹ್ಮಶ್ರೀ ನಾರಾಯಣ ಗುರುಗಳ ಶಕ್ತಿಪೀಠದ ಭೂಮಿ ಪೂಜೆ ಬಳಿಕ ಧಾರ್ಮಿಕ ಸಭೆ ಉದ್ಘಾಟಿಸಿದ ಅವರು, 'ಈಡಿಗರ ಕುಲಕಸುಬಾದ ಸೇಂದಿ ಪುನರಾರಂಭದ ಸಾಧಕ–ಬಾಧಕ ಪರಿಶೀಲಿಸಿ ಸರ್ಕಾರ ನಿರ್ಧರಿಸಲಿದೆ' ಎಂದರು.

ಸಿಇಟಿ: ಅವ್ಯವಸ್ಥೆ ಮಧ್ಯೆ ದಾಖಲೆಗಳ ಪರಿಶೀಲನೆ ಆರಂಭ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮೂಲಕ ವೃತ್ತಿಪರ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅರ್ಹರಾಗಿರುವ ಅಭ್ಯರ್ಥಿಗಳ ದಾಖಲೆ ಪರಿಶೀಲನಾ ಕಾರ್ಯ ಸೋಮವಾರ ಆರಂಭವಾಗಿದ್ದು, ಅವ್ಯವಸ್ಥೆಯಿಂದಾಗಿ ಮೊದಲ ದಿನವೇ ವಿದ್ಯಾರ್ಥಿಗಳು, ಪೋಷಕರು ಪರದಾಡಿದರು.

ದಾಖಲೆ ಪರಿಶೀಲನೆಗಾಗಿ ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ಸಾವಿರಾರು ಅಭ್ಯರ್ಥಿಗಳು ಮತ್ತು ಪೋಷಕರು ಜಮಾಯಿಸಿದ್ದರು. ಸರ್ವರ್ ಸಮಸ್ಯೆಯಿಂದ ಪ್ರಕ್ರಿಯೆ ಒಂದೂವರೆ ಗಂಟೆ ತಡವಾಗಿ ಆರಂಭವಾಯಿತು. ಗೊಂದಲಗಳನ್ನು ತಪ್ಪಿಸಲು ಪರಿಶೀಲನಾ ಹೊಣೆಯನ್ನು ಕೆಇಎ ಬೆಂಗಳೂರು ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಹಿಸಿತ್ತು. ಬೆಳಗ್ಗೆ 8.30ಕ್ಕೆ ಬರಬೇಕಿದ್ದ ಅಧಿಕಾರಿಗಳು 10 ಕ್ಕೆ ಬಂದರು ಎಂದು ಪೋಷಕರು, ಅಭ್ಯರ್ಥಿಗಳು ಆರೋಪಿಸಿದರು.

ಅಭ್ಯರ್ಥಿಗಳಿಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸಹ ಇರಲಿಲ್ಲ. ಮೊದಲ ದಿನ, 1 ರಿಂದ 5,000ರ ರ‍್ಯಾಂಕ್ ಹೊಂದಿರುವ ಅಭ್ಯರ್ಥಿಗಳನ್ನು ದಾಖಲೆ ಪರಿಶೀಲನೆಗೆ ಕರೆಯಲಾಗಿತ್ತು.

ಮಂಗಳೂರಿಗೆ ಸೆ.2ಕ್ಕೆ ಮೋದಿ

ಮಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 2ರಂದು ಮಂಗಳೂರಿಗೆ ಭೇಟಿ ನೀಡಲಿದ್ದಾರೆ.

ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವರು, ನಂತರ ಗೋಲ್ಡ್‌ಫಿಂಚ್ ಸಿಟಿ ಮೈದಾನದಲ್ಲಿ ನಡೆಯಲಿರುವ ಸಾರ್ವಜನಿಕ ಸಭೆಯಲ್ಲಿ ಮಾತನಾಡಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬೆಂಬಲಿಗರೊಂದಿಗೆ ಶಾಸಕ ಶಿವಲಿಂಗೇಗೌಡ ಪ್ರತಿಭಟನೆ

ಜೆಡಿಎಸ್–ಬಿಜೆಪಿ ಮುಖಂಡರಿಗೆ ಸಂದೇಶ

ಪ್ರಜಾವಾಣಿ ವಾರ್ತೆ

ಅರಸೀಕೆರೆ (ಹಾಸನ): 'ಬಿಜೆಪಿ ಮುಖಂಡ ಎನ್.ಆರ್.ಸಂತೋಷ್ ನನ್ನ ವಿರುದ್ಧ ಆಧಾರರಹಿತ ಆರೋಪ ಮಾಡುವ ಮೂಲಕ ಅಶಾಂತಿ ವಾತಾವರಣ ಸೃಷ್ಟಿಸುತ್ತಿದ್ದಾರೆ' ಎಂದು ಆರೋಪಿಸಿ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಸೋಮವಾರ ಅಭಿಮಾನಿಗಳು ಹಾಗೂ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಎನ್.ಆರ್.ಸಂತೋಷ್ ನೇತೃತ್ವದಲ್ಲಿ ಇತ್ತೀಚೆಗೆ ಅರಸೀಕೆರೆಯಲ್ಲಿ ಶಾಸಕ ಶಿವಲಿಂಗೇಗೌಡರ ವಿರುದ್ಧ ಪ್ರತಿಭಟನೆ ನಡೆದಿತ್ತು. ಆಗ ಬಿಜೆಪಿ ಮುಖಂಡರು, ಶಿವಲಿಂಗೇಗೌಡರನ್ನು 'ರಾಗಿ ಕಳ್ಳ' ಎಂದು ಕರೆದಿದ್ದರು. ಅದನ್ನು ವಿರೋಧಿಸಿ ಶಿವಲಿಂಗೇಗೌಡರ ಬೆಂಬಲಿಗರು ಪ್ರತಿಭಟಿಸಿದರು.

'ಸಂತೋಷ್ ಹಠಾವೋ ಅರಸೀಕೆರೆ ಬಚಾವೋ' ಘೋಷಣೆ ಮೂಲಕ ನಗರದ ಅಯ್ಯಪ್ಪಸ್ವಾಮಿ ದೇಗುಲ ಬಳಿಯಿಂದ ಆರಂಭವಾದ ಮೆರವಣಿಗೆ ಪಿಪಿ ವೃತ್ತದ ಮೂಲಕ ಸಮಾವೇಶ ನಿಗದಿಯಾಗಿದ್ದ ಅನಂತ ಅನಂತ್ ಸದ್ವಿದ್ಯಾ ವಿದ್ಯಾ ಸಂಸ್ಥೆಯ ಸಮೀಪ ನಿರ್ಮಿಸಿದ್ದ ವೇದಿಕೆಯವರೆಗೆ ಸಾಗಿತು. 20 ಸಾವಿರಕ್ಕೂ ಅಧಿಕ ಜನ ಭಾಗವಹಿಸಿದ್ದರು.



ಅರಸೀಕೆರೆಯಲ್ಲಿ ಸೋಮವಾರ ಬಿಜೆಪಿ ಮುಖಂಡ ಎನ್‌.ಆರ್‌.ಸಂತೋಷ್ ವಿರುದ್ಧ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಶಾಸಕ ಕೆ.ಎಂ.ಶಿವಲಿಂಗೇಗೌಡರ ಬೆಂಬಲಿಗರು ಪಾಲ್ಗೊಂಡಿದ್ದರು

ಅರಸೀಕೆರೆ ಕ್ಷೇತ್ರದಲ್ಲಿ ಚುನಾವಣೆ ಕಾವು ಜೋರಾಗುತ್ತಿದ್ದು, ಶಿವಲಿಂಗೇಗೌಡರು ಒಂದೇ ಏಟಿಗೆ ಬಿಜೆಪಿ, ಜೆಡಿಎಸ್‌ಗೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ ಎಂಬ ಮಾತು ಕೇಳಿ ಬಂದವು.

'ಪ್ರತಿಭಟನೆಯಲ್ಲಿ ಜೆಡಿಎಸ್ ಪಕ್ಷದ ಹೆಸರು ಹಾಗೂ ಬಾವುಟ ಕಂಡು ಬರಲಿಲ್ಲ. ಈ ಮೂಲಕ ಕ್ಷೇತ್ರದಲ್ಲಿ ತಮಗೆ ಇರುವ ಜನಬೆಂಬಲದ ಸಂದೇಶವನ್ನು ಶಿವಲಿಂಗೇಗೌಡರು ಜೆಡಿಎಸ್ ಮುಖಂಡರಿಗೂ ರವಾನಿಸಿದ್ದಾರೆ' ಎಂಬ ಚರ್ಚೆಗಳು ಆರಂಭವಾಗಿವೆ.

ಪರೀಕ್ಷಾ ಅಕ್ರಮ: 9 ಮಂದಿ ಸೆರೆ

ಒಂದನೇ ಪುಟದಿಂದ...

ಬಂಧಿತರಲ್ಲಿ ಮೂವರು ಅಭ್ಯರ್ಥಿಗಳು, ಪ್ರಶ್ನೆಪತ್ರಿಕೆ ಬಹಿರಂಗ ಮಾಡಿದವರು, ಉತ್ತರ ಸಿದ್ಧಪಡಿಸಿ ಹೇಳಿದವರು, ಇದಕ್ಕೆ ಅನುಕೂಲ ಮಾಡಿಕೊಟ್ಟವರೂ ಸೇರಿದ್ದಾರೆ. ಇವರಲ್ಲಿ ಒಬ್ಬ ಸರ್ಕಾರಿ ಶಾಲೆ ಶಿಕ್ಷಕ. ಕೆಲವರು ಸರ್ಕಾರಿ ನೌಕರಿಯಲ್ಲಿದ್ದಾರೆ. ಗೋಕಾಕ ನಗರದಲ್ಲಿ ವೃತ್ತಿಪರ ತರಬೇತಿ ನೀಡುವ ಕೇಂದ್ರದವರೂ ಸೇರಿದ್ದಾರೆ.

ಆ.7ರಂದು ಗೋಕಾಕದಲ್ಲಿ ನಡೆದ ಪರೀಕ್ಷೆಯಲ್ಲಿ ಅಭ್ಯರ್ಥಿಯೊಬ್ಬ ಸ್ಮಾರ್ಟ್‌ವಾಚ್ ಬಳಸಿ ಪ್ರಶ್ನೆಪತ್ರಿಕೆ ಫೋಟೊ ತೆಗೆದು ಟೆಲಿಗ್ರಾಮ್ ಆ್ಯಪ್ ಮೂಲಕ ಹೊರಗೆ ಕಳುಹಿಸಿದ್ದಾನೆ ಎಂದು ಸಚಿನ್ ಎಂಬ ಇನ್ನೊಬ್ಬ ಅಭ್ಯರ್ಥಿ ದೂರು ನೀಡಿದ್ದರು. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದಾಗ ಇದು ಖಚಿತಪಟ್ಟಿತು.

ಆರೋಪಿ ಸೂಕ್ಷ್ಮವಾದ ಬ್ಲೂಟೂತ್ ಪರಿಕರವನ್ನು ಕಿವಿಯೊಳಗೆ ಇಟ್ಟಿದ್ದ. ಸಿಮ್ ಕಾರ್ಡ್ ಪರಿಕರವನ್ನು ಅನ್ನು ಬಾಯೊಳಗೆ ಇಟ್ಟುಕೊಂಡಿದ್ದ. ಸ್ಮಾರ್ಟ್‌ವಾಚ್ ಬಳಸಿ ಪ್ರಶ್ನೆಪತ್ರಿಕೆ ಫೋಟೊ ಕಳುಹಿಸಿದ್ದ. ಹುಕ್ಕೇರಿ ತಾಲ್ಲೂಕಿನ ಶಿರಹಟ್ಟಿ (ಬಿ.ಕೆ) ಗ್ರಾಮದ ತೋಟದ ಮನೆಯಲ್ಲಿ ಕುಳಿತಿದ್ದ ಈತನ ಸ್ನೇಹಿತರು ಬ್ಲೂಟೂತ್ ಮೂಲಕ ಉತ್ತರ ನೀಡಿದ್ದರು. ಈ ಎಲ್ಲರನ್ನೂ ಬಂಧಿಸಲಾಗಿದೆ ಎಂದು ಎಸ್‌ಪಿ ತಿಳಿಸಿದರು.

ಶಿರಹಟ್ಟಿ ತೋಟದ ಮನೆ ಜಾಲಾಡಿದಾಗ ಅಕ್ರಮಕ್ಕೆ ಬಳಸಿದ ಪರಿಕರಗಳು ದೊರೆತಿವೆ. ಜೊತೆಗೆ ಒಂದು ಪ್ರಶ್ನೆಪತ್ರಿಕೆಯ ನಕಲು ಪ್ರತಿಯೂ ಪತ್ತೆಯಾಗಿದೆ. ಅದರ ಮೂಲೆಯಲ್ಲಿ ಒಂದು ಪರೀಕ್ಷಾ ಕೇಂದ್ರದ ನೋಂದಣಿ ಸಂಖ್ಯೆ ಇತ್ತು. ಅದರ ಜಾಲ ಹಿಡಿದು ಹೋದಾಗ; ಅದು ಗದಗ ನಗರದ ಮುನ್ಸಿಪಲ್ ಕಾಲೇಜಿನಲ್ಲಿ ನೀಡಿದ್ದ ಪ್ರಶ್ನೆ ಪತ್ರಿಕೆ ಎಂದು ಖಚಿತವಾಯಿತು. ತಕ್ಷಣ ಅಲ್ಲಿಗೆ ತೆರಳಿದ ಬೆಳಗಾವಿ ಸೈಬರ್ ಕ್ರೈಂ ಪೊಲೀಸರು ಅಕ್ರಮ ಎಸಗಿದ ಉಪ ಪ್ರಾಂಶುಪಾಲ ಹಾಗೂ ಅವರ ಮಗನನ್ನು ಭಾನುವಾರ ಬಂಧಿಸಿದ್ದರು.

'ಪರೀಕ್ಷಾ ಕೇಂದ್ರದ ಮೇಲ್ವಿಚಾರಣೆ ಹೊತ್ತಿದ್ದ ಉಪ ಪ್ರಾಂಶುಪಾಲ ಹಾಗೂ ಪತ್ರಕರ್ತನ ಸೋಗಿನಲ್ಲಿ ಕೇಂದ್ರದೊಳಗೆ ಹೋಗಿ ಪ್ರಶ್ನೆ ಪತ್ರಿಕೆಯ ಫೋಟೊ ಕ್ಲಿಕ್ಕಿಸಿಕೊಂಡು ಬಂದ ಅವರ ಮಗ ಸಿಕ್ಕಿಬಿದ್ದರು. ಇವರಿಂದ ಇನ್ನೂ ಎಲ್ಲೆಲ್ಲಿಗೆ ಈಗ ಪ್ರಶ್ನೆ ಪತ್ರಿಕೆ ರವಾನೆಯಾಗಿದೆ ಎಂಬ ಬಗ್ಗೆ ತನಿಖೆ ನಡೆದಿದೆ' ಎಂದು ಎಸ್‌ಪಿ ತಿಳಿಸಿದರು.



ಸಿದ್ದಪ್ಪ ಕೆಂಚಪ್ಪ ಕೊತ್ತಲ | ಸಿದ್ದಪ್ಪ ಕೆಂಪಣ್ಣ ಮದಿಹಳ್ಳಿ | ಸುನಿಲ ಅಜ್ಜಪ್ಪ ಭಂಗಿ | ಸಮಿತ್‌ಕುಮಾರ್ ಮಾರುತಿ | ಅಮರೇಶ ಚಂದ್ರಶೇಖರಯ್ಯ | ಮಾರುತಿ ಶಂಕರ



ಬಸವಣ್ಣೆ ಶಿವಪ್ಪ ಡೊಣವಾಡ | ಸಂತೋಷ ಪ್ರಕಾಶ | ರೇಣುಕಾ ವಿಠ್ಠಲ ಜವಾರಿ

ಬಂಧಿತ ಆರೋಪಿಗಳು

ಗೋಕಾಕ ತಾಲ್ಲೂಕಿನ ನಾಗನೂರು ಗ್ರಾಮದ ಸಿದ್ದಪ್ಪ ಕೆಂಪಣ್ಣ ಮದಿಹಳ್ಳಿ, ಮಾಲದಿನ್ನಿಯ ಸುನೀಲ ಅಜ್ಜಪ್ಪ ಭಂಗಿ, ಶಿರಹಟ್ಟಿ ಬಿ.ಕೆ. ಗ್ರಾಮದ ಬಸವಣ್ಣೆ ಶಿವಪ್ಪ ಡೊಣವಾಡ, ವೀರನಗಡ್ಡಿಯ ಸಂತೋಷ ಪ್ರಕಾಶ ಮಾಣಗಾವಿ, ಬೆಣಚಿನಮರಡಿಯ ಸಿದ್ಧಪ್ಪ ಕೆಂಚಪ್ಪ ಕೊತ್ತಲ, ಮಾಲದಿನ್ನಿಯ ರೇಣುಕಾ ವಿಠಲ ಜವಾರಿ, ಗದಗ– ಬೆಟಗೇರಿಯ ಅಮರೇಶ ಚಂದ್ರಶೇಖರಯ್ಯ ರಾಜೂರ, ಮಾರುತಿ ಶಂಕರ ಸೋನವಣೆ (ಉಪ ಪ್ರಾಂಶುಪಾಲ), ಸಮಿತ್‌ಕುಮಾರ ಮಾರುತಿ ಸೋನವಣೆ (ಉಪ ಪ್ರಾಂಶುಪಾಲರ ಪುತ್ರ)

ಎಫ್‌ಐಆರ್‌ಗೆ 'ಲೋಕಾ' ಅಣಿ

ಒಂದನೇ ಪುಟದಿಂದ...

'2016ರ ಮಾರ್ಚ್ 14ರ ಮುನ್ನ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಇದ್ದ ಎಲ್ಲ ಅಧಿಕಾರಗಳೂ ಈಗ ಪುನಃ ದೊರಕಿವೆ. ಸರ್ಕಾರಿ ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಲು ಯಾವ ಅಡ್ಡಿಯೂ ಇಲ್ಲ. ದೂರುಗಳು ಬಂದರೆ ಪ್ರಕರಣ ದಾಖಲಿಸಿ, ತನಿಖೆ ನಡೆಸುವುದಕ್ಕೆ ಲೋಕಾಯುಕ್ತ ಪೊಲೀಸ್ ವಿಭಾಗ ಸಿದ್ಧವಾಗಿದೆ' ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಕರಣ ಹಸ್ತಾಂತರಕ್ಕೆ ಎಸಿಬಿ ಸಿದ್ಧತೆ

ರಾಜ್ಯದಾದ್ಯಂತ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸ್ ಠಾಣೆಗಳಲ್ಲಿ ತನಿಖಾ ಹಂತದಲ್ಲಿರುವ 2,149 ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸಲು ಸಿದ್ಧತೆ ನಡೆದಿದೆ.

ಲಂಚ ಪ್ರಕರಣ, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ, ಅಧಿಕಾರ ದುರ್ಬಳಕೆ ಆರೋಪದಡಿ ಸರ್ಕಾರಿ ನೌಕರರು, ಚುನಾಯಿತ ಪ್ರತಿನಿಧಿಗಳ ವಿರುದ್ಧ ಎಸಿಬಿ ದಾಖಲಿಸಿದ್ದ ಈ ಪ್ರಕರಣಗಳ ತನಿಖೆ ಸಂಪೂರ್ಣ ಸ್ಥಗಿತಗೊಂಡಿದೆ.

ಯಾವುದೇ ಹೊಸ ದೂರುಗಳನ್ನು ಸ್ವೀಕರಿಸದಂತೆ ಮತ್ತು ಪ್ರಕರಣ ದಾಖಲು ಮಾಡಿಕೊಳ್ಳದಂತೆ ಹೈಕೋರ್ಟ್ ತೀರ್ಪು ಪ್ರಕಟವಾದ ದಿನವೇ (ಆಗಸ್ಟ್ 11) ಎಸಿಬಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ತಮ್ಮ ಅಧೀನ ಅಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿದ್ದರು. ಆ ಕ್ಷಣದಿಂದಲೇ ತನಿಖಾ ಕೆಲಸವನ್ನು ಸ್ಥಗಿತಗೊಳಿಸಲಾಗಿದೆ.

'ತನಿಖಾ ಹಂತದಲ್ಲಿರುವ ಪ್ರಕರಣಗಳು, ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ಪ್ರಕರಣಗಳು, ದೂರುಗಳ ವಿಚಾರಣೆಗೆ ಸಂಬಂಧಿಸಿದ ದಾಖಲೆಗಳನ್ನು ಪ್ರತ್ಯೇಕ ಕಡತಗಳಲ್ಲಿ ಹಸ್ತಾಂತರಿಸಲು ಸಿದ್ಧತೆ ನಡೆದಿದೆ. ರಾಜ್ಯ ಸರ್ಕಾರದಿಂದ ಅಧಿಸೂಚನೆ ಪ್ರಕಟವಾದ ತಕ್ಷಣವೇ ಎಲ್ಲ ಪ್ರಕರಣಗಳನ್ನೂ ಲೋಕಾಯುಕ್ತಕ್ಕೆ ಹಸ್ತಾಂತರಿಸಲಾಗುವುದು' ಎಂದು ಎಸಿಬಿ ಮೂಲಗಳು ತಿಳಿಸಿವೆ.

ಲೋಕಾಯುಕ್ತ ಪೊಲೀಸ್ ಬಲಾಬಲ

ಹುದ್ದೆ	ಮಂಜೂರಾತಿ	ಭರ್ತಿ
ಎಡಿಜಿಪಿ	01	01
ಐಜಿಪಿ/ಡಿಐಜಿ	01	0
ಎಸ್‌ಪಿ	22	17
ಡಿವೈಎಸ್‌ಪಿ	42	39
ಇನ್‌ಸ್ಪೆಕ್ಟರ್	88	70
ಪಿಎಸ್‌ಐ	12	02
ಹೆಡ್‌ಕಾನ್‌ಸ್ಟೆಬಲ್	144	84
ಕಾನ್‌ಸ್ಟೆಬಲ್	232	133

ಎಸಿಬಿ ಬಲಾಬಲ

ಎಡಿಜಿಪಿ	01
ಐಜಿಪಿ	01
ಎಸ್‌ಪಿ	10
ಡಿವೈಎಸ್‌ಪಿ	35
ಇನ್‌ಸ್ಪೆಕ್ಟರ್	75
ಹೆಡ್‌ಕಾನ್‌ಸ್ಟೆಬಲ್/ ಕಾನ್‌ಸ್ಟೆಬಲ್	200

'ಆಝಾನ್ ಮೂಲಭೂತ ಹಕ್ಕಿನ ಉಲ್ಲಂಘನೆ ಅಲ್ಲ'

ಬೆಂಗಳೂರು: 'ಮಸೀದಿಗಳಲ್ಲಿ ಧ್ವನಿವರ್ಧಕಗಳ ಮೂಲಕ ಆಝಾನ್ ಕೂಗುವುದನ್ನು ತಡೆಯಲು ನಿರ್ದೇಶಿಸಬೇಕು' ಎಂಬ ಅರ್ಜಿದಾರರ ಕೋರಿಕೆಯನ್ನು ಮಾನ್ಯ ಮಾಡಲು ನಿರಾಕರಿಸಿರುವ ಹೈಕೋರ್ಟ್, 'ಇದರಿಂದ ಸಾರ್ವಜನಿಕರ ಮೂಲಭೂತ ಹಕ್ಕಿಗೆ ಯಾವುದೇ ಧಕ್ಕೆಯಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಬೆಂಗಳೂರಿನ ನಾಗರಭಾವಿ ನಿವಾಸಿ ಆರ್. ಭೈರವೇಶ್ವರ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, 'ಸಂವಿಧಾನದ 25 ಮತ್ತು 26ನೇ ವಿಧಿಯ ಅನುಸಾರ ಗಮನಿಸಿದಾಗ ಸಹಿಷ್ಣುತೆ ಎಂಬುದು ಭಾರತದ ನಾಗರಿಕತೆಯ ಲಕ್ಷಣವಾಗಿದೆ. ಹೀಗಾಗಿ, ಅರ್ಜಿದಾರರ ಆಕ್ಷೇಪಣೆಯನ್ನು ಒಪ್ಪಲು ಆಗುವುದಿಲ್ಲ' ಎಂದು ಹೇಳಿದೆ.

ನಿಧನ ವಾರ್ತೆ

ಗುರುಲಿಂಗಸ್ವಾಮಿ ಹೊಳಿಮಠ



ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಾಧ್ಯಮ ಸಂಯೋಜಕ ಗುರುಲಿಂಗಸ್ವಾಮಿ ಹೊಳಿಮಠ (45) ಹೃದಯಾಘಾತದಿಂದ ಸೋಮವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಜಿಮ್‌ನಲ್ಲಿ ಬೆಳಿಗ್ಗೆ ದೈಹಿಕ ಕಸರತ್ತು ಮಾಡುತ್ತಿದ್ದಾಗ ಗುರುಲಿಂಗ ಸ್ವಾಮಿ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ತಕ್ಷಣ ಅವರನ್ನು ನಾಗರಬಾವಿಯಲ್ಲಿರುವ 'ಲೈಫ್ ಆಸ್ಪತ್ರೆ'ಗೆ ಕರೆದೊಯ್ಯಲಾಯಿತು. ಆದರೆ, ಆಸ್ಪತ್ರೆ ತಲುಪುವ ಮುನ್ನವೇ ಅವರು ಕೊನೆಯುಸಿರೆಳೆದಿದ್ದರು.

ಸುದ್ದಿಮೂಲ, ಕನ್ನಡಪ್ರಭ, ವಿಜಯವಾಣಿ, ಈ–ಟಿವಿ, ವಿಜಯ ಕರ್ನಾಟಕ, ಟಿವಿ5 ಸೇರಿದಂತೆ ಹಲವು ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಗುರುಲಿಂಗಸ್ವಾಮಿ ಕೆಲಸ ಮಾಡಿದ್ದರು. ಕರ್ನಾಟಕ ವಿಶ್ವವಿದ್ಯಾಲಯ ಪತ್ರಿಕೋದ್ಯಮ ವಿದ್ಯಾರ್ಥಿಗಳ ಸಂಘ (ಕವಿಪವಿ), ಉತ್ತರ ಕರ್ನಾಟಕ ಸಂಘ ಸೇರಿದಂತೆ ಹಲವು ಸಂಘಸಂಸ್ಥೆಗಳಲ್ಲಿಯೂ ಸಕ್ರಿಯರಾಗಿದ್ದರು. ಬಸವರಾಜ ಬೊಮ್ಮಾಯಿ ಗೃಹ ಸಚಿವರಾಗಿದ್ದಾಗ ಅವರಿಗೆ ಗುರುಲಿಂಗಸ್ವಾಮಿ ಮಾಧ್ಯಮ ಕಾರ್ಯದರ್ಶಿಯಾಗಿದ್ದರು.

ಗುರುಲಿಂಗಸ್ವಾಮಿ ಅವರ ಹುಟ್ಟೂರು ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಮಂಗಳವಾರ (ಆ. 23) ಬೆಳಿಗ್ಗೆ 10 ಗಂಟೆಗೆ ಅಂತ್ಯಸಂಸ್ಕಾರ ನಡೆಯಲಿದೆ.



❦ ಸುಭಾಷಿತ ❦

ನಿಮ್ಮ ಮನಸ್ಸು ಮುಕ್ತವಾಗಿರಲಿ. ನೀವು ಕೈದಿಯಲ್ಲ. ನೀವು ಕನಸುಗಳಿಗಾಗಿ ಆಕಾಶವನ್ನು ಅರಸುತ್ತಿರುವ ಹಕ್ಕಿಯಂತೆ.

—ಹರುಕಿ ಮುರಾಕಮಿ

ಸ್ಮಾರ್ಟ್‌ ಸಿಟಿ ಯೋಜನೆ ಕಾಮಗಾರಿಗೆ ವೇಗ ತುಂಬಿ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ‘ಸ್ಮಾರ್ಟ್‌ ಸಿಟಿ’ ಕೂಡ ಒಂದು. ನಗರ ಮೂಲಸೌಕರ್ಯಗಳನ್ನು ಕಾಲಮಿತಿಯೊಳಗೆ ಅಭಿವೃದ್ಧಿಪಡಿಸುವ ಈ ಯೋಜನೆಯ ಅನುಷ್ಠಾನವೂ ‘ಸ್ಮಾರ್ಟ್‌’ ಆಗಿದ್ದಿದ್ದರೆ, ಈ ವೇಳೆಗೆ ದೇಶದ ಪ್ರಮುಖ ಮಹಾನಗರಗಳ ಚಿತ್ರಣವೇ ಬದಲಾಗಿರುತ್ತಿತ್ತು. ರಾಜ್ಯದಲ್ಲಂತೂ ಈ ಯೋಜನೆಯ ಕಾಮಗಾರಿಗಳ ಅನುಷ್ಠಾನ ಶುರುವಿನಿಂದಲೂ ನಿರೀಕ್ಷಿತ ವೇಗದಲ್ಲಿ ನಡೆದೇ ಇಲ್ಲ. ಕಾಮಗಾರಿಗಳ ಗುಣಮಟ್ಟದ ಬಗ್ಗೆಯೂ ಬಹಳಷ್ಟು ಆಕ್ಷೇಪಗಳು ವ್ಯಕ್ತವಾಗಿವೆ. ಮೊದಲು ಕಾಂಕ್ರೀಟ್‌ ರಸ್ತೆಗಳನ್ನು ನಿರ್ಮಿಸುವುದು, ನಂತರ ಇನ್ಯಾವುದೋ ಕಾರಣ ಹೇಳಿ ಆ ರಸ್ತೆಗಳನ್ನೇ ಅಗೆಯುವಂತಹ ಅಧ್ವಾನಗಳನ್ನು ಜನ ನೋಡಿದ್ದಾರೆ. ಕೇಂದ್ರ ಸರ್ಕಾರವು ಈ ಯೋಜನೆಯನ್ನು 2015ರಲ್ಲಿ ಆರಂಭಿಸಿತು. 2023ರ ಜೂನ್‌ ಒಳಗೆ ಪೂರ್ಣಗೊಳಿಸಬೇಕು ಎಂದು ಕೇಂದ್ರ ಸೂಚಿಸಿತ್ತು. ಈ ಗಡುವು ಪೂರ್ಣಗೊಳ್ಳುವುದಕ್ಕೆ ಇನ್ನು ಬಾಕಿ ಇರುವುದು 10 ತಿಂಗಳು ಮಾತ್ರ. ಈ ಹಂತದಲ್ಲಿ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರಬೇಕಿತ್ತು. ಆದರೆ, ರಾಜ್ಯದಲ್ಲಿ ₹ 2,239 ಕೋಟಿ ಮೊತ್ತದ 41 ಯೋಜನೆಗಳ ಪ್ರಗತಿ ನಿರೀಕ್ಷೆಗಿಂತ ತೀರಾ ಹಿಂದುಳಿದಿದೆ. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದೆ. ಸಚಿವಾಲಯದ ಕಾರ್ಯದರ್ಶಿಯು ಸ್ಮಾರ್ಟ್‌ ಸಿಟಿ ಕಾಮಗಾರಿಗಳು ವಿಳಂಬವಾಗಿರುವ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾಮಗಾರಿ ಅಪೂರ್ಣವಾದರೆ, ಈ ಯೋಜನೆ ಮೂಲಕ ಜನ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಯತ್ನ ವಿಫಲಗೊಳ್ಳುತ್ತದೆ. ಈ ಯೋಜನೆಯ ಕಾಮಗಾರಿಗಳನ್ನು ಗಡುವಿನೊಳಗೆ ಪೂರ್ಣಗೊಳಿಸುವ ಅಥವಾ ಕೈಬಿಡುವ ಕುರಿತು ವಿವೇಚನೆ ಬಳಸಿ ನಿರ್ಧಾರ ತಳೆಯಬೇಕು. ಗಡುವು ಪೂರ್ಣಗೊಂಡ ಬಳಿಕ ಕೇಂದ್ರದ ಅನುದಾನವನ್ನು ಸ್ಥಗಿತಗೊಳಿಸಲಾಗುತ್ತದೆ. ಬಳಿಕ ಕಾಮಗಾರಿಯ ಎಲ್ಲ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ.



ಸರ್ಕಾರ ನಿದ್ದೆಯಿಂದ ಎಚ್ಚೆತ್ತು ಈ ಯೋಜನೆಯ ಕಾಮಗಾರಿಗಳನ್ನು ಗಡುವಿನೊಳಗೆ ಪೂರ್ಣಗೊಳಿಸಬೇಕು

ಗಡುವಿನೊಳಗೆ ಪೂರ್ಣಗೊಳಿಸಬಹುದಾದ ಕಾಮಗಾರಿಗಳನ್ನು ಮಾತ್ರ ರಾಜ್ಯದಲ್ಲಿ ಈ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿತ್ತು. ಎದುರಾಗಬಹುದಾದ ಅಡ್ಡಿ ಆತಂಕಗಳನ್ನು ನಿವಾರಿಸಿ ಕಾಮಗಾರಿಗಳನ್ನು ತ್ವರಿತವಾಗಿ ಜಾರಿಗೊಳಿಸಲು ಅನುವು ಮಾಡಿಕೊಡುವ ಸಲುವಾಗಿ ವಿಶೇಷ ಉದ್ದೇಶದ ಘಟಕಗಳನ್ನು (ಎಸ್‌ಪಿವಿ) ಸ್ಥಾಪಿಸಲಾಗಿತ್ತು. ಪ್ರತೀ ಎಸ್‌ಪಿವಿಗೆ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಎಂಜಿನಿಯರ್‌ ಒಳಗೊಂಡಂತೆ ಅಧಿಕಾರಿಗಳ ಪ್ರತ್ಯೇಕ ತಂಡವನ್ನೇ ಒದಗಿಸಲಾಗಿತ್ತು. ಈ ಯೋಜನೆಗೆ ಅನುದಾನದ ಕೊರತೆಯೂ ಇಲ್ಲ. ಇಷ್ಟೆಲ್ಲಾ ಸೌಕರ್ಯಗಳನ್ನು ಒದಗಿಸಿದ ನಂತರವೂ ರಾಜ್ಯದ ಏಳು ಮಹಾನಗರಗಳಲ್ಲಿ ಸ್ಮಾರ್ಟ್‌ ಸಿಟಿ ಯೋಜನೆಯ ಕಾಮಗಾರಿಗಳು ತೆವಳುತ್ತಾ ಸಾಗಿರುವುದು ವಿಪರ್ಯಾಸವೇ ಸರಿ. ಈ ಯೋಜನೆಯ ಗಡುವು ಪೂರ್ಣಗೊಳ್ಳುವ ಹಂತಕ್ಕೆ ಬಂದರೂ ಕೆಲ ಕಾಮಗಾರಿಗಳು ಇನ್ನೂ ಆರಂಭವಾಗಿಲ್ಲ. ಒಂಬತ್ತು ಕಾಮಗಾರಿಗಳಲ್ಲಿ ಶೇ 10ರಷ್ಟೂ ಭೌತಿಕ ಪ್ರಗತಿ ಆಗಿಲ್ಲ. ಐದು ಕಾಮಗಾರಿಗಳ ಭೌತಿಕ ಪ್ರಗತಿ ಶೂನ್ಯ. ರಾಜ್ಯದ ಪ್ರಗತಿಗೆ ವೇಗ ತುಂಬಬಲ್ಲ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಬಗ್ಗೆ ರಾಜ್ಯ ಸರ್ಕಾರ ಎಷ್ಟೊಂದು ಅನಾದರ ಪ್ರದರ್ಶಿಸುತ್ತಿದೆ ಎಂಬುದಕ್ಕೆ ಈ ಅಂಕಿ–ಅಂಶಗಳೇ ಸಾಕ್ಷಿ.

ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ನೇತೃತ್ವದ ಸರ್ಕಾರ ಇದ್ದರೆ ಅಭಿವೃದ್ಧಿ ಕಾರ್ಯಗಳಿಗೆ ವೇಗ ಸಿಗುತ್ತದೆ ಎಂದು ಆಡಳಿತಾರೂಢ ಬಿಜೆಪಿ ನಾಯಕರು ಚುನಾವಣಾ ಭಾಷಣಗಳಲ್ಲಿ ಭರವಸೆ ನೀಡುತ್ತಲೇ ಬಂದಿದ್ದಾರೆ. ‘ಡಬಲ್‌ ಎಂಜಿನ್‌ ಸರ್ಕಾರ’ದ ಸಾಧನೆಗಳ ಬಗೆಗೆ ಹೆಮ್ಮೆಯಿಂದ ಮಾತನಾಡುತ್ತಾರೆ. ಸ್ಮಾರ್ಟ್‌ ಸಿಟಿ ಯೋಜನೆಯ ಕಾಮಗಾರಿಗಳ ಆಮೆಗತಿಯ ಅನುಷ್ಠಾನವು ಆ ಮಾತುಗಳನ್ನು ಅಣಕಿಸುವಂತಿದೆ. ಕಾಮಗಾರಿಗಳ ಗುತ್ತಿಗೆದಾರರು ಬಿಲ್‌ ಮೊತ್ತವನ್ನು ಪಡೆಯಲು ಶೇ 40ರಷ್ಟು ಕಮಿಷನ್‌ ನೀಡಬೇಕಾದ ಸ್ಥಿತಿ ರಾಜ್ಯದಲ್ಲಿದೆ ಎಂಬ ಆರೋಪವು ಗುತ್ತಿಗೆದಾರರಿಂದಲೇ ಬಂದಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನದಲ್ಲಿ ಅನುಷ್ಠಾನಗೊಳ್ಳುವ ಈ ಕಾಮಗಾರಿಗಳ ವಿಳಂಬದ ಹಿಂದೆಯೂ ಇಂತಹದ್ದೇ ಕಾರಣಗಳಿರಬಹುದು ಎಂಬ ಶಂಕೆ ಮೂಡದಿರದು. ಸರ್ಕಾರ ನಿದ್ದೆಯಿಂದ ಎಚ್ಚೆತ್ತು ಈ ಯೋಜನೆಯ ಕಾಮಗಾರಿಗಳಿಗೆ ವೇಗ ತುಂಬಬೇಕು. ಅಧಿಕಾರಿಗಳಿಗೆ ಚುರುಕು ಮುಟ್ಟಿಸಿ ಕಾಮಗಾರಿಗಳನ್ನು ಗಡುವಿನೊಳಗೆ ಪೂರ್ಣಗೊಳಿಸಲು ಇನ್ನಾದರೂ ಇಚ್ಛಾಶಕ್ತಿ ತೋರಬೇಕು. ವಿವಿಧ ಇಲಾಖೆಗಳ ನಡುವಿನ ಸಮನ್ವಯದ ಕೊರತೆಯಿಂದ ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬ ಆಗುತ್ತಿದೆ ಎಂಬ ಮಾತಿದೆ. ಇದನ್ನು ನೀಗಿಸುವುದಕ್ಕೂ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್‌


ಮೊಕದ್ದಮೆ ಹೂಡುವರೇ?



ಕೇಜ್ರಿವಾಲ್‌ ಅವರು 2012ರಲ್ಲಿ ಅಂದಿನ ಬಿಜೆಪಿ ಅಧ್ಯಕ್ಷ ಗಡ್ಕರಿ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದರು. ಆಗ ಗಡ್ಕರಿ ಅವರು ಕೇಜ್ರಿವಾಲ್‌ ವಿರುದ್ಧ ಮೊಕದ್ದಮೆ ಹೂಡಿ, ಎಎಪಿ ಮುಖ್ಯಸ್ಥರಿಂದ ಕ್ಷಮೆಯಾಚಿಸುವಲ್ಲಿ ಯಶಸ್ವಿಯಾಗಿದ್ದರು. 2022ರಲ್ಲಿ ಮದ್ಯ ಹಗರಣದ ‘ಕಿಂಗ್‌ಪಿನ್‌’ ಎಂಬ ಆರೋಪಕ್ಕೆ ಗುರಿಯಾಗಿರುವ ಕೇಜ್ರಿವಾಲ್‌ ಅವರು ಬಿಜೆಪಿ ವಿರುದ್ಧ ಮೊಕದ್ದಮೆ ಹೂಡಿ ಈ ಪ್ರಕರಣದಿಂದ ಮುಕ್ತರಾಗುವರೇ?

ರಾಹುಲ್‌ ಶಿವಶಂಕರ್‌, ಪತ್ರಕರ್ತ

ಕಿಡಿನುಡಿ



ದೇಶ ಅಥವಾ ರಾಜ್ಯದ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ರಾಜಕಾರಣಿಗಳನ್ನು ಪತ್ರಕರ್ತರು ಕಟು ವಿಮರ್ಶೆಗೆ ಗುರಿಪಡಿಸಬೇಕು. ಆದರೆ ಅವರು, ಯಾರಾದರೂ ಮಾಂಸ ತಿಂದು ದೇವಸ್ಥಾನ ಪ್ರವೇಶಿಸಿದ್ದಾರಾ ಎಂಬ ಬಗ್ಗೆ ಹೆಚ್ಚು ಕಳವಳ ಹೊಂದಿದ್ದಾರೆ. ಇಂತಹ ಪತ್ರಕರ್ತರು ನಾಲ್ಕನೆಯ ಸ್ತಂಭಕ್ಕೆ ಅವಮಾನ. ಸುದ್ದಿ ವಾಹಿನಿಗಳ ವೀಕ್ಷಕರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಕಡಿಮೆ ಆಗಿರುವುದು ಏಕೆ ಎಂಬುದನ್ನೂ ಇದು ವಿವರಿಸುತ್ತದೆ.

ಗೌತಮ್‌ ಮಾಚಯ್ಯ, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 23-8-1997

● **ಕಾವೇರಿ ಪ್ರಾಧಿಕಾರ: ಕೇಂದ್ರಕ್ಕೆ ಕೋರ್ಟ್‌ ಸೂಚನೆ**

ಬೆಂಗಳೂರು, ಆಗಸ್ಟ್‌ 22– ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ವರದಿ ಜಾರಿಗಾಗಿ ಅಸ್ತಿತ್ವಕ್ಕೆ ತರಲಿರುವ ಕಾವೇರಿ ಪ್ರಾಧಿಕಾರ ರಚನೆ ವಿಚಾರದಲ್ಲಿ ಸಂಬಂಧಿಸಿದ ಎಲ್ಲ ರಾಜ್ಯಗಳ ಸಭೆ ಕರೆದು ಚರ್ಚಿಸಿ, ಇನ್ನು ಆರು ವಾರಗಳಲ್ಲಿ ಅಂತಿಮ ನಿರ್ಧಾರ ತೆಗೆದುಕೊಂಡು ತಿಳಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್‌ ಸೂಚಿಸಿದೆ.

ನ್ಯಾಯಾಲಯವು ನಿನ್ನೆ ನೀಡಿದ ಆದೇಶದಲ್ಲಿ ಈ ಸೂಚನೆ ನೀಡಿದೆ ಎಂದು ಭಾರಿ ನೀರಾವರಿ ಸಚಿವ ಕೆ.ಎನ್‌.ನಾಗೇಗೌಡ ಅವರು ಇಂದು ಸಂಜೆ ತಮ್ಮನ್ನು ಭೇಟಿಯಾದ ಸುದ್ದಿಗಾರರಿಗೆ ತಿಳಿಸಿದರು.

● **ಕಬ್ಬಿನ ಬಾಕಿ ಹಣಕ್ಕೆ ಆಗ್ರಹಿಸಿ ಸಭಾತ್ಯಾಗ**

ಬೆಂಗಳೂರು, ಆಗಸ್ಟ್‌ 22– ರಾಜ್ಯದ ವಿವಿಧ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಕೊಡಬೇಕಿರುವ ಬಾಕಿ ಹಣವನ್ನು ತಕ್ಷಣ ಕೊಡಿಸುವ ಬಗ್ಗೆ ಸ್ಪಷ್ಟ ಭರವಸೆ ನೀಡದ ಸರ್ಕಾರದ ಕ್ರಮವನ್ನು ಖಂಡಿಸಿ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

ಸಕ್ಕರೆ ಕಾರ್ಖಾನೆಗಳಿಂದ ಬಾಕಿ ಕೊಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಸಚಿವರು ಹೇಳುತ್ತಿಲ್ಲ ಎಂದು ಆಪಾದಿಸಿ ಸಭಾತ್ಯಾಗ ಮಾಡಿದರು.

50 ವರ್ಷಗಳ ಹಿಂದೆ

ಬುಧವಾರ, 23-8-1972

● **ಇಂದು ದೆಹಲಿಗೆ ಅರಸು: ರಾಜ್ಯದ ನಾನಾ ಸಮಸ್ಯೆಗಳ ಬಗೆಗೆ ನಾಯಕರ ಜತೆ ಚರ್ಚೆ**

ಬೆಂಗಳೂರು, ಆಗಸ್ಟ್‌ 22– ರಾಜ್ಯಕ್ಕೆ ಸಂಬಂಧಿಸಿದ ನಾನಾ ವಿಷಯಗಳ ಬಗ್ಗೆ ಕೇಂದ್ರದ ನಾಯಕರೊಂದಿಗೆ ಚರ್ಚಿಸಲು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ನಾಳೆ ಸಂಜೆ ದೆಹಲಿಗೆ ತೆರಳುವರು.

ಶ್ರೀ ಅರಸು ಅವರು ತಮ್ಮ ಈ ದೆಹಲಿ ಭೇಟಿಯ ಅವಕಾಶವನ್ನು ಉಪಯೋಗಿಸಿಕೊಂಡು ಕೇಂದ್ರ ನಾಯಕರಿಗೆ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ನಗರಕ್ಕೆ ಶ್ರೀ ಯಶಪಾಲ್‌ ಕಪೂರ್‌ ಅವರ ಭೇಟಿ ನಂತರದ ಅವರ ಪತ್ರಿಕಾಗೋಷ್ಠಿ ಹಾಗೂ ಆನಂತರದ ಶ್ರೀ ಕೆ.ಹನುಮಂತಯ್ಯ ಅವರ ಪತ್ರಿಕಾಗೋಷ್ಠಿ ಎಬ್ಬಿಸಿರುವ ವಾದ ವಿವಾದಗಳನ್ನು ಸ್ಪಷ್ಟಪಡಿಸುವರು ಎಂದು ನಿರೀಕ್ಷಿಸಲಾಗಿದೆ.

● **ವಿದ್ಯುತ್‌ ಕ್ಷಾಮ: ರಾವ್‌ ಎಚ್ಚರಿಕೆ**

ನವದೆಹಲಿ, ಆಗಸ್ಟ್‌ 22– ಐದನೇ ಯೋಜನೆ ಅವಧಿಯಲ್ಲಿ ಇನ್ನೂ 200 ಲಕ್ಷ ಕಿಲೋವಾಟ್‌ ಹೆಚ್ಚು ವಿದ್ಯುತ್ತನ್ನು ಉತ್ಪಾದಿಸದಿದ್ದರೆ ರಾಷ್ಟ್ರ ತೀವ್ರತರ ವಿದ್ಯುತ್‌ ಕೊರತೆಯನ್ನು ಎದುರಿಸಬೇಕಾಗುವುದು ಎಂದು ಕೇಂದ್ರ ನೀರಾವರಿ ಮತ್ತು ವಿದ್ಯುತ್‌ ಸಚಿವ ಡಾ.ಕೆ.ಎಲ್‌.ರಾವ್‌ ಅವರು ಇಂದು ಲೋಕಸಭೆಯಲ್ಲಿ ಎಚ್ಚರಿಕೆ ನೀಡಿದರು.

ದೇಶದ ವಿವಿಧ ಭಾಗಗಳಲ್ಲಿ ತಲೆದೋರಿರುವ ವಿದ್ಯುತ್‌ ಅಭಾವ ಪರಿಸ್ಥಿತಿ ಕುರಿತ ನಾಲ್ಕು ಗಂಟೆ ಕಾಲದ ವಿಶೇಷ ಚರ್ಚೆಯನ್ನು ಮುಕ್ತಾಯಗೊಳಿಸಿ ಮಾತನಾಡಿದ ಅವರು, ಐದನೇ ಯೋಜನೆಯಲ್ಲಿ ಇಪ್ಪತ್ತು ದಶ ಕಿಲೋವಾಟ್‌ ವಿದ್ಯುತ್‌ ಉತ್ಪಾದನೆ ಕಾರ್ಯ ಕೈಗೊಳ್ಳಬೇಕೆಂಬ ಸಲಹೆಯನ್ನು ಯೋಜನಾ ಆಯೋಗ ಒಪ್ಪಿಕೊಂಡಿದೆಯೆಂದು ಹೇಳಿದರು.

ಜನಪರ ಕಾರ್ಯಕ್ರಮಗಳು ಜನರು ಬೆಳವಣಿಗೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಶ್ಯಕ

ಬಡವರಿಂದ ದೂರವಾಗುತ್ತಿದೆಯೇ ‘ರೇವ್ಡಿ’?



ವಿಶ್ಲೇಷಣೆ

ಟಿ.ಎಸ್‌. ವೇಣುಗೋಪಾಲ್‌

ಎಳ್ಳನ್ನು ಚೆನ್ನಾಗಿ ಹುರಿದು ಬೆಲ್ಲದ ಪಾಕದಲ್ಲಿ ಹಾಕಿ ಸಣ್ಣ ಉಂಡೆಗಳನ್ನಾಗಿ ಮಾಡಿದರೆ ರುಚಿಯಾದ ರೇವ್ಡಿ ಸಿದ್ಧ. ಹಬ್ಬದ ಸಂದರ್ಭಗಳಲ್ಲಿ ‘ಉಚಿತ’ವಾಗಿ ಹಂಚುವ ಪೌಷ್ಟಿಕ ಸಿಹಿ ತಿನಿಸು ರೇವ್ಡಿ ಈಗ ಸುದ್ದಿಯಲ್ಲಿದೆ.

ರಾಜಕೀಯ ಪಕ್ಷಗಳು ಕೊಡುವ ಉಚಿತ ಕೊಡುಗೆಗಳನ್ನು ಪ್ರಧಾನಿಯವರು ರೇವ್ಡಿಗೆ ಹೋಲಿಸಿ, ‘ನಮ್ಮ ದೇಶದಲ್ಲಿ ಉಚಿತವಾಗಿ ರೇವ್ಡಿಗಳನ್ನು ಹಂಚಿ ವೋಟು ಗಳಿಸುವ ಪ್ರಯತ್ನ ನಡೆಯುತ್ತಿದೆ. ಈ ರೇವ್ಡಿ ಸಂಸ್ಕೃತಿ ದೇಶದ ಬೆಳವಣಿಗೆಗೆ ತುಂಬಾ ಅಪಾಯಕಾರಿ. ಜನ ಈ ಬಗ್ಗೆ ಎಚ್ಚರದಿಂದ ಇರಬೇಕು’ ಎಂದು ಅದರ ವಿರುದ್ಧ ಸಮರ ಸಾರಿದ್ದಾರೆ. ಅದಕ್ಕೆ ಅರವಿಂದ ಕೇಜ್ರಿವಾಲ್‌ ಅವರು ‘ನಾನು ಉಚಿತವಾಗಿ ರೇವ್ಡಿಯನ್ನು ಹಂಚುತ್ತಿದ್ದೇನೆ ಎಂದು ಆಪಾದನೆ ಮಾಡಲಾಗಿದೆ. ನನ್ನನ್ನು ನಿಂದಿಸಲಾಗುತ್ತಿದೆ, ಗೇಲಿ ಮಾಡಲಾಗುತ್ತಿದೆ. ದೆಹಲಿಯ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಉಚಿತವಾಗಿ ಒಳ್ಳೆಯ ಶಿಕ್ಷಣ ಕೊಡುತ್ತಿದ್ದೇನೆ. ದೆಹಲಿಯಲ್ಲಿ ಯಾರಿಗಾದರೂ ಅಪಘಾತವಾದರೆ ಅವರಿಗೆ ಪುಕ್ಕಟೆಯಾಗಿ ಚಿಕಿತ್ಸೆ ಸಿಗುತ್ತಿದೆ. ಅದು ತಪ್ಪಾ?’ ಎಂದು ಕೇಳುತ್ತಿದ್ದಾರೆ.

ಆಮ್‌ ಆದ್ಮಿ ಪಕ್ಷ ಮಾತ್ರವಲ್ಲ; ಎಲ್ಲ ರಾಜಕೀಯ ಪಕ್ಷಗಳೂ ಚುನಾವಣಾ ಸಮಯದಲ್ಲಿ ಉಚಿತ ಕೊಡುಗೆಗಳ ಘೋಷಣೆ ಮಾಡುತ್ತಲೇ ಬಂದಿವೆ. ಬಿಜೆಪಿ ಕೂಡ ಎಲ್ಲರ ಬ್ಯಾಂಕ್‌ ಖಾತೆಗೆ ₹ 15 ಲಕ್ಷ ಜಮಾ ಮಾಡುವುದಾಗಿ ಹೇಳಿತ್ತು. ಪುಕ್ಕಟೆ ಅಡುಗೆ ಅನಿಲ ಕೊಡುವ ಕಾರ್ಯಕ್ರಮ ಹಾಕಿಕೊಂಡಿತ್ತು. ಎಲ್ಲ ರಾಜಕೀಯ ಪಕ್ಷಗಳೂ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಒಂದಿಷ್ಟು ವಿನಾಯಿತಿ ಕೊಡುವ, ಆಮಿಷ ತೋರಿಸುವ ಕೆಲಸವನ್ನು ಮಾಡುತ್ತಿರುತ್ತವೆ.


ಸಮಸ್ಯೆ ಅಂದರೆ ಉಚಿತ ಕೊಡುಗೆ ಅಂದರೇನು ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಕೆಲವು ಸರ್ಕಾರಗಳು ಪಠ್ಯ ಪುಸ್ತಕಗಳು, ಸಮವಸ್ತ್ರ, ಆಹಾರ, ಆರೋಗ್ಯಸೇವೆ, ಶಿಕ್ಷಣ ಇತ್ಯಾದಿಗಳನ್ನು ಉಚಿತವಾಗಿ ನೀಡುತ್ತಿವೆ. ಆದರೆ ಈಗ ಇವೆಲ್ಲವನ್ನೂ ದಾನ ಅನ್ನುವಂತೆ ಬಣ್ಣಿಸಲಾಗುತ್ತಿದೆ. ಶಿಕ್ಷಣ, ಆರೋಗ್ಯ, ಜೀವನೋಪಾಯ ಮತ್ತು ಘನತೆಯಿಂದ ಬದುಕುವ ಸ್ಥಿತಿಯನ್ನು ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯ. ಕಲ್ಯಾಣ ರಾಜ್ಯದ ಕಲ್ಪನೆಯನ್ನು ತಪ್ಪು ಎಂದು ಬಿಂಬಿಸುವುದಾಗಲಿ, ನಮ್ಮ ಇಂದಿನ ಆರ್ಥಿಕ ಬಿಕ್ಕಟ್ಟುಗಳಿಗೆ ಅಂತಹ ಕೊಡುಗೆಗಳೇ ಕಾರಣ ಅನ್ನುವುದಾಗಲಿ, ಶ್ರೀಲಂಕಾವನ್ನು ಗುಮ್ಮನಾಗಿ ತೋರಿಸಿ ಆತಂಕ ಹುಟ್ಟಿಸುವುದಾಗಲಿ ಸೂಕ್ತವಲ್ಲ.

ಜಗತ್ತಿನ ಆರ್ಥಿಕ ಬೆಳವಣಿಗೆಯನ್ನು ಗಮನಿಸಿದರೆ, ಕಲ್ಯಾಣ ಕಾರ್ಯಕ್ರಮಗಳ ಮಹತ್ವ ಅರ್ಥವಾಗುತ್ತದೆ. ಜಾಗತಿಕ ಯುದ್ಧದ ನಂತರ, ವಿವಿಧ ದೇಶಗಳಲ್ಲಿ ಜಾರಿಗೆ ತಂದ ಕಲ್ಯಾಣ ಕಾರ್ಯಕ್ರಮಗಳಿಂದ ಅಸಮಾನತೆ ಕಡಿಮೆಯಾಗಿದೆ. ಇದನ್ನು ಥಾಮಸ್‌ ಪಿಕೆಟ್ಟಿಯವರ ಅಧ್ಯಯನ ತೋರಿಸಿದೆ. ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ಹಾಕಿ, ಶಿಕ್ಷಣ, ಆರೋಗ್ಯ, ಪಿಂಚಣಿಯಂತಹ ಸೌಲಭ್ಯಗಳನ್ನು ನೀಡಿದ್ದರಿಂದಲೇ ಅಸಮಾನತೆಯಲ್ಲಿ ಇಳಿಕೆ, ಆರ್ಥಿಕ ಪ್ರಗತಿ ಸಾಧ್ಯವಾಗಿದ್ದು ಎಂದು ತಿಳಿಸಿದೆ. ಅಮೆರಿಕದ ಆರ್ಥಿಕ ಪ್ರಗತಿಗೂ ಅಲ್ಲಿ ಶಿಕ್ಷಣದಲ್ಲಿ ಸಾಧಿಸಿದ ಪ್ರಗತಿ ಬಹುಮಟ್ಟಿಗೆ ಕಾರಣ ಅನ್ನುವುದು ಸ್ಪಷ್ಟ. ಇಂತಹ ಕ್ರಮಗಳಿಂದ ಫಲಾನುಭವಿಗಳಿಗೆ ಮಾತ್ರವಲ್ಲದೆ ಇಡೀ ಸಮಾಜಕ್ಕೆ ಅನುಕೂಲವಾಗಿದೆ ಎನ್ನುತ್ತಾರೆ ಪಿಕೆಟ್ಟಿ.

1950ರಲ್ಲಿ ಭಾರತವು ಆರ್ಥಿಕವಾಗಿ ಚೀನಾ ಇದ್ದ ಸ್ಥಿತಿಯಲ್ಲೇ ಇತ್ತು. ಆದರೆ ಚೀನಾ ಪ್ರತಿಯೊಬ್ಬರಿಗೂ ಆಹಾರ, ಆರೋಗ್ಯ, ಶಿಕ್ಷಣ ಕೊಡುವ ಮೂಲಕ ಭಾರತಕ್ಕಿಂತ ಹಲವು ಪಟ್ಟು ಮುನ್ನಡೆ ಸಾಧಿಸಿದೆ. ನಮ್ಮಲ್ಲಿ ನರೇಗಾ, ಪಡಿತರ ಪದ್ಧತಿ, ರಾಜ್ಯ ಸರ್ಕಾರಗಳ ಶಿಕ್ಷಣ ಹಾಗೂ ಆರೋಗ್ಯ ಯೋಜನೆಗಳು, ಇವೆಲ್ಲಾ ದೀರ್ಘಾವಧಿಯಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿವೆ. ತಕ್ಷಣದ ಲಾಭವನ್ನು ಗಮನದಲ್ಲಿಟ್ಟು ಪೊಳ್ಳು ಭರವಸೆಗಳನ್ನು ಕೊಡುವುದು ಒಳ್ಳೆಯದಲ್ಲ. ಆದರೆ ಯಾವುದು ಸರಿ ಯಾವುದು ತಪ್ಪು ಎಂದು ನಿರ್ಧರಿಸುವುದು ಕಷ್ಟ. ಉದಾಹರಣೆಗೆ ಉಚಿತವಾಗಿ ಲ್ಯಾಪ್‌ಟಾಪ್‌ ಕೊಡುವುದು ಉತ್ಪಾದಕತೆಯನ್ನು, ಜ್ಞಾನವನ್ನು, ನೈಪುಣ್ಯವನ್ನು ಹೆಚ್ಚಿಸುವುದಕ್ಕೆ ಅವಶ್ಯಕ ಎಂದು ಯೋಚಿಸಬಹುದು. ಇವನ್ನು ಹೆಚ್ಚು ಸೂಕ್ಷ್ಮವಾಗಿ ಗಮನಿಸಬೇಕು.

ಜನರಿಗೆ ಕೊಡುವ ನೆರವಿನಿಂದ ಜನ ಸೋಮಾರಿಗಳಾಗುತ್ತಾರೆ ಅನ್ನುವ ಟೀಕೆಗೂ ಅರ್ಥವಿಲ್ಲ, ಬದಲಿಗೆ ಜನ ಹೆಚ್ಚು ಉತ್ಪಾದಕ ಹಾಗೂ ಕ್ರಿಯಾತ್ಮಕವಾಗುತ್ತಾರೆ ಅನ್ನುತ್ತಾರೆ ಅರ್ಥಶಾಸ್ತ್ರಜ್ಞ ಅಭಿಜಿತ್‌ ಬ್ಯಾನರ್ಜಿ. ಕೇಂದ್ರವು ಬಡವರಿಗೆ ಮಾತ್ರವಲ್ಲ ಕಾರ್ಪೊರೇಟ್‌ ಸಂಸ್ಥೆಗಳಿಗೂ ಉಚಿತ ಕೊಡುಗೆಗಳನ್ನು ಕೊಡುತ್ತಿದೆ. ಉದಾಹರಣೆಗೆ 2019ರಲ್ಲಿ ಆರ್ಥಿಕ ಹಿಂಜರಿತದಿಂದ ಹೊರಬರುವುದಕ್ಕೆ ಆರ್ಥಿಕತೆಯನ್ನು ‘ಉತ್ತೇಜಿಸುವ’ ಉದ್ದೇಶದಿಂದ ಕಾರ್ಪೊರೇಟ್‌ ತೆರಿಗೆಯಲ್ಲಿ ಕಡಿತ ಮಾಡಲಾಯಿತು. ಈ ‘ಉತ್ತೇಜನ’ ಪ್ರಕ್ರಿಯೆಯಿಂದ ತೆರಿಗೆ ಸಂಗ್ರಹಣೆ ₹ 1.45 ಲಕ್ಷ ಕೋಟಿಯಷ್ಟು ಕಡಿಮೆಯಾಯಿತು. ಆದರೆ ಆರ್ಥಿಕತೆ ಪುನಶ್ಚೇತನ ಕಾಣಲಿಲ್ಲ. ಕಾರ್ಪೊರೇಟ್‌ ಸಂಸ್ಥೆಗಳಿಗೆ ಕೊಡುವ ರಿಯಾಯಿತಿಗಳು ಕೂಡ ರೇವ್ಡಿಯೇ. ನಿಜವಾಗಿ ಅವು ಅನವಶ್ಯಕ ಖರ್ಚು. ಇತ್ತೀಚಿನ ದಿನಗಳಲ್ಲಿ ವಿತ್ತೀಯ ಸ್ಥಿರತೆ ಸಾಧಿಸಲು ವಿತ್ತೀಯ ಕೊರತೆಯನ್ನು ನಿಯಂತ್ರಿಸಲಾಗುತ್ತಿದೆ. ಅದಕ್ಕಾಗಿ ಸಬ್ಸಿಡಿ ಹಾಗೂ ಸಾಮಾಜಿಕ ವೆಚ್ಚಗಳ ಕಡಿತ ಮಾಡಲಾಗುತ್ತಿದೆ.

ಕಾರ್ಪೊರೇಟ್‌ ಸಂಸ್ಥೆಗಳಿಗೆ ನೀಡುವ ನೆರವನ್ನು ‘ಉತ್ತೇಜನ’ ಎಂದು ಕರೆದು ಮುಂದುವರಿಸುತ್ತೇವೆ.



ಬಡವರಿಗೆ ಕೊಡುವುದು ‘ಉಚಿತ ಕೊಡುಗೆ’ ಅಂತ ಭಾವಿಸಿ ನಿಲ್ಲಿಸಲು ಒತ್ತಾಯಿಸುತ್ತೇವೆ. ‘ಜನಪ್ರಿಯ ಯೋಜನೆಗಳನ್ನು ಹಾಗೂ ಉಚಿತ ಕೊಡುಗೆಗಳನ್ನು ನಿಲ್ಲಿಸದೇ ಹೋದರೆ ನಾವು ಶ್ರೀಲಂಕಾ ಸ್ಥಿತಿ ತಲುಪುವುದು ಖಾತರಿ’ ಎನ್ನಲಾಗುತ್ತಿದೆ. ಶಿಕ್ಷಣ, ಆರೋಗ್ಯ ನೆರವು ನೀಡುವುದು, ಸಂಕಟದಲ್ಲಿರುವವರಿಗೆ ಹಣ ವರ್ಗಾಯಿಸುವುದು ಅಥವಾ ಸಬ್ಸಿಡಿ ನೀಡುವುದು ಬಹುತೇಕ ದೇಶಗಳಲ್ಲಿ ಇದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಮಾರುಕಟ್ಟೆ ಆರ್ಥಿಕತೆಗಳು ಸೃಷ್ಟಿಸುವ ಅಸಮಾನತೆಯನ್ನು ತಗ್ಗಿಸುವುದಕ್ಕೆ ಸಬ್ಸಿಡಿ, ಪ್ರಗತಿಪರ ತೆರಿಗೆ ಇತ್ಯಾದಿ ಕ್ರಮಗಳು ಅವಶ್ಯಕ ಎಂದು ಪರಿಗಣಿಸಲಾಗಿದೆ. ಪ್ರಗತಿಪರ ತೆರಿಗೆಯಿಂದ ಬಂದ ಹಣವನ್ನು ಇಂತಹ ಕ್ರಮಗಳಲ್ಲಿ ಹೂಡುವುದು ಸ್ವೀಕೃತ ಕ್ರಮವಾಗಿದೆ.


ಬೆಳವಣಿಗೆಯ ಪ್ರಕ್ರಿಯೆಯಲ್ಲೇ ಎಲ್ಲರಿಗೂ ಒಂದು ಕನಿಷ್ಠ ಜೀವನಮಟ್ಟ ಹಾಗೂ ಗುಣಮಟ್ಟದ ಬದುಕು ಸಾಧ್ಯವಾದರೆ ಒಳ್ಳೆಯದು. ಅದು ಸಾಧ್ಯವಾಗದೇ ಹೋದಾಗ ಬಡವರು ಹಾಗೂ ಅವಶ್ಯಕತೆ ಇರುವವರಿಗೆ ಸರ್ಕಾರ ಇಂತಹ ಕ್ರಮಗಳ ಮೂಲಕ ಬೆಂಬಲಿಸಬೇಕಾಗುತ್ತದೆ. ಎಲ್ಲರನ್ನೂ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ವಿಧಾನವಾಗಿ ಇದನ್ನು ಕಾಣಬೇಕು. ಅದರ ‘ಅಪಬಳಕೆ’ ಆಗುತ್ತಿದೆ ಅನ್ನುವುದು ಸಂಪತ್ತಿನ ಮರುಹಂಚಿಕೆಯ ಪ್ರಕ್ರಿಯೆಗೆ ಅಡ್ಡಿಯಾಗಬಾರದು.

1990ರಲ್ಲಿ ಉದಾರೀಕರಣ ನೀತಿ ಜಾರಿಗೆ ಬಂದಾಗಿನಿಂದ ಅಸಮಾನತೆ ಹೆಚ್ಚುತ್ತಿದೆ. ಇದನ್ನು ಎಲ್ಲ ಅಧ್ಯಯನಗಳೂ ಹೇಳುತ್ತಿವೆ. ನಿರುದ್ಯೋಗ, ದಾರಿದ್ರ್ಯ, ಪೌಷ್ಟಿಕಾಂಶದ ಕೊರತೆ, ಹಣದುಬ್ಬರ ಇವೆಲ್ಲಾ ಜನರನ್ನು ಹೆಚ್ಚೆಚ್ಚು ನಿರ್ಗತಿಕರನ್ನಾಗಿಸುತ್ತಿವೆ. ಆರ್ಥಿಕ ಪ್ರಗತಿಯ ಫಲ ಇವರಿಗೆ ಹರಿದು ಬರುತ್ತಿಲ್ಲ. ಜನ ಅಸಹಾಯಕರಾಗಿದ್ದಾರೆ. ಜನರಿಗೆ ಬೇಕಾದ ಮೂಲಭೂತ ಸೌಕರ್ಯಗಳು ರಾಜಕೀಯ ಪಕ್ಷಗಳ ಚುನಾವಣಾ ಘೋಷಣೆಗಳಾಗಿವೆ. ಅಧಿಕಾರಕ್ಕೆ ಬಂದರೆ ಅವುಗಳನ್ನು ಪುಕ್ಕಟೆಯಾಗಿ ಕೊಡುವುದಾಗಿ ಭರವಸೆ ಕೊಡುತ್ತಿವೆ. ದುರಂತವೆಂದರೆ ಸರ್ಕಾರಗಳ ಸಂವಿಧಾನಾತ್ಮಕ ಕರ್ತವ್ಯ ಇಂದು ವಿತ್ತೀಯ ಸ್ಥಿರತೆಗೆ ಮಾರಕವಾಗಿ ಕಾಣುತ್ತಿದೆ.

ಜನಪರ ಯೋಜನೆಗಳಿಗೆ ಮಾಡಬೇಕಾದ ಖರ್ಚು ದುಂದುವೆಚ್ಚವೆನಿಸುತ್ತಿದೆ. ನಮ್ಮ ಆರ್ಥಿಕತೆ ಕುಸಿಯುವುದಕ್ಕೆ ಇಂಥ ಯೋಜನೆಗಳು ಕಾರಣವಲ್ಲ. ಆರ್ಥಿಕ ವೈಫಲ್ಯದಿಂದಾಗಿ ಅದಕ್ಕೆ ಬೇಕಾದ ಹಣ ಕ್ರೋಡೀಕರಿಸಲು ಸಾಧ್ಯವಾಗುತ್ತಿಲ್ಲ. ಹಣ ಸಂಗ್ರಹಕ್ಕೆ ಸಂಪತ್ತಿನ ಮೇಲೆ ತೆರಿಗೆಯಂತಹ ಕ್ರಮಗಳನ್ನು ನಾವು ತೆಗೆದುಕೊಳ್ಳಲು ಸಿದ್ಧರಿಲ್ಲ ಅನ್ನುವುದು ನಮ್ಮ ಉದ್ದಿಮೆಗಳ ಪರ ನಿಲುವನ್ನು ತೋರಿಸುತ್ತದೆ. ಆರ್ಥಿಕ ಬಿಕ್ಕಟ್ಟಿಗೆ ನಿಜವಾದ ಕಾರಣ ಅರಿಯಬೇಕಾಗಿದೆ. ಭಾವನಾತ್ಮಕ ಅಥವಾ ಪುಕ್ಕಟೆ ಕೊಡುಗೆಯಂತಹ ವಿಷಯಗಳಿಂದ ದಿಕ್ಕುತಪ್ಪಿಸುವುದು, ತಪ್ಪುವುದು ಪರಿಹಾರವಲ್ಲ. ಆರ್ಥಿಕ ಪ್ರಶ್ನೆಗಳು ನಮ್ಮ ಸಾವು ಬದುಕಿನ ಪ್ರಶ್ನೆಗಳು.

ಇದನ್ನು ರಾಜಕೀಯ ಪಕ್ಷಗಳು ನಿರ್ಧರಿಸುವಂತಾಗಬಾರದು. ಜನಪರ ಕಾರ್ಯಕ್ರಮಗಳು ಜನರು ಬೆಳವಣಿಗೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಶ್ಯಕ. ಅಸಮಾನತೆ ತಗ್ಗುವುದಕ್ಕೆ, ಸಂಪತ್ತಿನ ಮರುಹಂಚಿಕೆಯಾಗುವುದಕ್ಕೆ ಕಲ್ಯಾಣ ಕಾರ್ಯಕ್ರಮಗಳು ಮುಂದುವರಿಯುವುದು, ಅದಕ್ಕೆ ಬೇಕಾದ ಹಣ ಸಂಗ್ರಹಣೆ, ಸಂಪತ್ತಿನ ಮೇಲೆ ತೆರಿಗೆಯಂತಹ ಕ್ರಮಗಳು ಚಾಲ್ತಿಗೆ ಬರಬೇಕಾದದ್ದು ಇಂದಿನ ತುರ್ತು.

ಚುರುಮುರಿ



ಬೇತಾಳ ಗೀತೆ

● ಲಿಂಗರಾಜು ಡಿ.ಎಸ್‌.

ಎಂದಿನಂತೆ ಬೇತಾಳನನ್ನು ಹುಡುಕುತ್ತಾ ರಾಜಾ–ವಿಕ್ರಮಾದಿತ್ಯ ಹೊರಟಿದ್ದ. ವಿಧಾನಸೌಧದ ಬಳಿ ಬೇತಾಳ ‘ಆಶ್ವಾಸನೆ ನಾನೂರ ಹತ್ತೊಂಬತ್ತು, ಆಶ್ವಾಸನೆ ನಾನೂರಾ ಇಪ್ಪತ್ತು’ ಅಂತ ಬರೆಯುತ್ತ ಎಣಿಸಿಕೊಳ್ಳುತ್ತಿತ್ತು.

‘ರಾಜನ್‌, ಈಗ ನನಗೆ ಟೈಮಿಲ್ಲ, ನಿನಗೀವತ್ತು ಒಂದೇ ಪ್ರಶ್ನೆ’ ಅಂತು ರಾಜನ ಮುಖ ನೋಡಿದ ಬೇತಾಳ. ವಿಕ್ರಮಾದಿತ್ಯ ಸುಮ್ಮನಿದ್ದ.

‘ನೋಡು ರಾಜನ್‌, ದೇಶದಲ್ಲಿ ನ್ಯಾಯ–ನೀತಿ ನಾಪತ್ತೆಯಾಗಿವೆ. ಸ್ವಾತಂತ್ರ್ಯಕ್ಕೆ ಹೋರಾಡಿ ಸತ್ತೋರು ಈಗ ಕ್ಯಾರೆಕ್ಟರ್‌ ಸರ್ಟಿಫಿಕೇಟ್‌ ತಂದು ತೋರಿಸೋ ಸ್ಥಿತಿ ಬಂದಿದೆ. ಕಚೇರಿಗಳಲ್ಲಿ ಭ್ರಷ್ಟಾಚಾರ, ಪರೀಕ್ಷೆಗಳಲ್ಲಿ ಅಕ್ರಮ, ಸಮಿತಿ ಅಧ್ಯಕ್ಷನಾಗಕ್ಕೆ ಲಾಬಿ, ಉತ್ಸವ ಮಾಡಕ್ಕೆ ಪೈಪೋಟಿ… ಇದಕ್ಕೆಲ್ಲಾ ಕಾರಣ ಏನು? ಉತ್ತರ ಗೊತ್ತಿದ್ದರೂ ಹೇಳದಿದ್ದಲ್ಲಿ ನಿನ್ನ ತಲೆ ಒಡೆದ ಮೊಟ್ಟೆಯಂತೆ ಸಾವಿರ ಹೋಳಾಗುತ್ತದೆ ಜಾಗ್ರತೆ’ ಅಂತು ಬೇತಾಳ. ವಿಕ್ರಮಾದಿತ್ಯನು ಬಾಯಿ ಬಿಡಲೇಬೇಕಾಯಿತು.

‘ಎಲೈ ಬೇತಾಳವೇ, ರಾಜಕಾರಣಿಗಳು ಪದವಿ ಕನಸಲ್ಲಿ ಹಬ್ಬಿಸಿದ ಧರ್ಮದ ಕಿಚ್ಚು, ಏರಿಯಾ ರೊಚ್ಚು ಜನರನ್ನು ಸುಡುತ್ತಿದ್ದರೆ, ಅವಕಾಶವಾದಿಗಳು ಅದರ ಬೆಂಕಿಯಲ್ಲಿ ತಮಟೆ ಕಾಯಿಸಿಕೊಳ್ಳುತ್ತಿದ್ದಾರೆ. ಅಂದು ಸತ್ಯಕ್ಕಾಗಿ ಹುಲಿ ಪ್ರಾಣ ಕಳಕೊಂಡಿತ್ತು, ಇಂದು ಸತ್ಯದ ಅವನತಿ ನೋಡಲಾಗದೆ ಪುಣ್ಯಕೋಟಿಗಳೇ ಪ್ರಾಣ ಕಳೆದುಕೊಳ್ಳುತ್ತಿವೆ. ಜನ ಕೈಯ್ಯಲ್ಲಿ ಕೆರ ಹಿಡಿದು ಬೀದಿಗೆ ಬಂದು ಭಯಸ್ಕರ ಶಿಕ್ಷಣ ಶುರು ಮಾಡಿದರೆ ಮಾತ್ರ ನ್ಯಾಯ, ನೀತಿ, ಧರ್ಮ ಉಳಿಯಲು ಸಾಧ್ಯ’ ಅಂದ ವಿಕ್ರಮಾದಿತ್ಯ.

‘ರಾಜನ್‌, ನಿನ್ನ ಮಾತು ಸದ್ಯಕ್ಕೆ ನಿಜವಾಗುವಂತೆ ಕಾಣುತ್ತಿಲ್ಲ. ಈಗ ಬಿಬಿಎಂಪಿ ಎಲೆಕ್ಷನ್‌, ಅದರ ಜೊತೆಗೇ ವಿಧಾನಸಭೆ ಎಲೆಕ್ಷನ್‌ ಬರುತ್ತಿವೆ. ರಾಜಕಾರಣಿಗಳು ಹುಚ್ಚಾಪಟ್ಟೆ ರೇವಡಿ ಆಶ್ವಾಸನೆ ಕೊಡೋ ಟೈಮು ಶುರು. ಅವುರ ಮ್ಯಾಲೆಲ್ಲಾ ನಾವು ಅಮರಿಕೊಂಡು ಬುದ್ಧಿ ಕೆಡಿಸಿ ಬಾಯಿಂದ ಬೈಗುಳ ಹೊರಡಿಸಿ ಪರಸ್ಪರ ಜಗಳ ಆಡಿಸಬಕು. ಈಗ ನಿನ್ನ ಮೌನ ಭಂಗವಾಗಿದ್ರಿಂದ ನಾನು ಹೊರಟೆ’ ಅಂದ ಬೇತಾಳ ಹಾರಿಹೋಯಿತು.

ಸಂಗತ

ವಿವಾದಿತ ಜಾಗ: ಬೇಕು ದೃಢ ನಿಲುವು

ವಿವಾದಾಸ್ಪದವಾಗಿರುವ ಮೈದಾನದಂತಹ ಸ್ವತ್ತುಗಳನ್ನು ಸರ್ಕಾರ ವಶಕ್ಕೆ ಪಡೆದು, ಸರ್ವಜನರ ಬಳಕೆಗೆ ಮುಕ್ತ ಅವಕಾಶ ಕಲ್ಪಿಸಬೇಕು

● ಡಾ. ಚನ್ನು ಅ. ಹಿರೇಮಠ


ಬೆಂಗಳೂರಿನ ಚಾಮರಾಜಪೇಟೆಯ ಆಟದ ಮೈದಾನ ಮಾಲೀಕತ್ವದ ವಿಚಾರದಲ್ಲಿ ವಾದ-ವಿವಾದಗಳು ನಡೆದಿವೆ. ಈ ಸಲದ ಸ್ವಾತಂತ್ರ್ಯ ದಿನದಂದು ರಾಷ್ಟ್ರಧ್ವಜಾರೋಹಣ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಅದೇ ಮೈದಾನದಲ್ಲಿ ಗಣೇಶೋತ್ಸವ ಆಚರಿಸುವ ಬಗ್ಗೆ ಪರ– ವಿರೋಧದ ಮಾತುಗಳು ಕೇಳಿಬರುತ್ತಿವೆ.

ದೇಶದ ವಿವಿಧೆಡೆ ಕೆಲವು ಮೈದಾನಗಳು ಮಾಲೀಕತ್ವದ ವಿಚಾರದಲ್ಲಿ ಕಲಹಕ್ಕೆ, ರಾಜಕೀಯ ಸಮರಕ್ಕೆ ಎಡೆ ಮಾಡಿಕೊಡುತ್ತಿವೆ. ಎಷ್ಟೋ ವರ್ಷಗಳಿಂದ ಈ ಸಂಗತಿಗಳು ಜ್ವಲಂತವಾಗಿಯೇ ಇವೆ. ಸುಲಭವಾಗಿ ಬಗೆಹರಿಯದ ಇಂತಹ ಸಂಗತಿಗಳನ್ನು ಇಟ್ಟುಕೊಂಡು ಮತಬ್ಯಾಂಕ್‌ ರಾಜಕಾರಣ, ಜಾತಿ ರಾಜಕಾರಣಕ್ಕೆ ಅವಕಾಶ ನೀಡಬಾರದು. ವಿವಾದಾಸ್ಪದವಾಗಿರುವ ಮೈದಾನದಂತಹ ಸ್ವತ್ತುಗಳನ್ನು ಸರ್ಕಾರ ವಶಕ್ಕೆ ಪಡೆದು, ಸರ್ವಜನರಿಗೂ ಜಾತಿ ಮತಭೇದವೆಣಿಸದೆ ಮುಕ್ತವಾಗಿ ಬಳಸಲು ಅವಕಾಶ ನೀಡಬೇಕು. ಹಬ್ಬ ಹರಿದಿನಗಳ ಆಚರಣೆಗೆ ಆ ಜಾಗಗಳನ್ನು ಯಾರಾದರೂ ಬಳಸಬಹುದಾದ ರೀತಿಯಲ್ಲಿ ನೀತಿಯನ್ನು ಜಾರಿಗೊಳಿಸಬೇಕು. ತೀರಾ ಜಟಿಲವಾಗಿರುವ ಪ್ರಸಂಗಗಳಲ್ಲಿ ವಾಹನಗಳ ನಿಲುಗಡೆಗೆ ಮೀಸಲಿಡಬಹುದು.

ಇಂತಹ ವಿಷಯಗಳಲ್ಲಿ ದೃಢ ನಿಲುವು ತಾಳದೇ ಇದ್ದರೆ ರಾಜಕೀಯ ಪಕ್ಷಗಳಿಗೆ, ರಾಜಕೀಯ ಧುರೀಣರಿಗೆ ಒಂದಿಲ್ಲೊಂದು ಸಂದರ್ಭದಲ್ಲಿ, ಒಂದಿಲ್ಲೊಂದು ಸ್ಥಳದಲ್ಲಿ ಈ ತೆರನಾದ ಸಂಘರ್ಷವನ್ನು ಹುಟ್ಟುಹಾಕಲು ನಿರಂತರವಾಗಿ ಅವಕಾಶ ಸಿಗುತ್ತದೆ. ಇದರಲ್ಲಿ ರಾಜಕೀಯ ಪಕ್ಷಗಳು ಕಳೆದುಕೊಳ್ಳುವಂಥದ್ದು ಏನೂ ಇರುವುದಿಲ್ಲ. ಇಂಥ ಸಂಗತಿಗಳ ಹಿನ್ನೆಲೆಯಲ್ಲಿ ಉದ್ಭವಿಸಬಹುದಾದ ಕಾನೂನು ಸುವ್ಯವಸ್ಥೆಯ ನಿರ್ವಹಣೆಯಲ್ಲಿ ಅನಗತ್ಯವಾದ ಖರ್ಚುವೆಚ್ಚಗಳು ಪರೋಕ್ಷವಾಗಿ ಜನಸಾಮಾನ್ಯರ ತೆರಿಗೆಗೆ ಸೇರಿಸಲ್ಪಡುತ್ತವೆ. ಸಾರ್ವಜನಿಕರ ಸ್ವತ್ತುಗಳು ಯಾರದ್ದೋ ಕೋಪ ತಣಿಸಲು, ಯಾವುದೋ ಸಮುದಾಯವನ್ನು ತುಷ್ಟಿಗೊಳಿಸಲು ನಷ್ಟಕ್ಕೀಡಾಗುತ್ತವೆ. ಗಲಭೆಗಳು ಉಂಟಾದಾಗ ಕರ್ಫ್ಯೂ, ನಿಷೇಧಾಜ್ಞೆ, ವ್ಯಾಪಾರ ವಹಿವಾಟುಗಳ ಮೇಲೆ ನಿರ್ಬಂಧ ಹೀಗೆ ಸಮಸ್ಯೆಗಳ ಸರಮಾಲೆಯೇ ಸೃಷ್ಟಿಯಾಗುತ್ತದೆ.

ಶಿವಮೊಗ್ಗದಲ್ಲಿ ಇತ್ತೀಚೆಗೆ ಫ್ಲೆಕ್ಸ್‌ ವಿಚಾರದಲ್ಲಿ ಉಂಟಾದ ಗಲಭೆಯ ಕಾರಣ ಸಂಜೆ 5 ಗಂಟೆಗೆ ಪ್ರಮುಖ ಮಾರುಕಟ್ಟೆಗಳನ್ನು ಪೊಲೀಸರು ಮುಚ್ಚಿಸಿದ್ದರು. ತಳ್ಳುಗಾಡಿಯ ತಿನಿಸು ವ್ಯಾಪಾರಿಯೊಬ್ಬರು ‘ನಮಗೆ ಹೆಚ್ಚು ವ್ಯಾಪಾರವಾಗುವುದೇ ಸಂಜೆ. ರಾತ್ರಿ ಹತ್ತು ಗಂಟೆಯ ತನಕ ದುಡಿದರೆ ಮರುದಿನ ಹೊಟ್ಟೆ ತುಂಬುತ್ತದೆ. ಸಂಜೆಯ ವ್ಯಾಪಾರಕ್ಕೆಂದು ಬೆಳಿಗ್ಗೆಯೇ ಆಹಾರ ಸಾಮಗ್ರಿ ಸಿದ್ಧಪಡಿಸಿಕೊಂಡಿರುತ್ತೇವೆ. ಹೀಗೆ ಏಕಾಏಕಿ ವಹಿವಾಟು ನಿಲ್ಲಿಸಿದರೆ ನಮಗಾಗುವ ನಷ್ಟ ತುಂಬಿಕೊಡುವ ಮಾತು ಇರಲಿ, ನಾಳೆಯ ಖರ್ಚು ವೆಚ್ಚಗಳಿಗೆ ಯಾರನ್ನು ಕೇಳಬೇಕು’ ಎಂದು ಗೋಳಾಡುತ್ತಿದ್ದರು. ಇದೊಂದು ನಿದರ್ಶನವಷ್ಟೆ. ಪ್ರತಿಬಾರಿ ಗಲಭೆ ಉಂಟಾದಾಗಲೂ ಹೀಗೆ ನರಳುವವರು ಇದ್ದೇ ಇರುತ್ತಾರೆ. ಸಮಾಜದಲ್ಲಿ ಕ್ಷೋಭೆ ಹುಟ್ಟುಹಾಕುವವರಾಗಲೀ, ಅಸಹನೆಯ ಕಟ್ಟೆಯೊಡೆಯಲು ಕುಮ್ಮಕ್ಕು ತುಂಬುವವರಾಗಲೀ ಇಂತಹ ಪ್ರಕರಣಗಳಿಂದ ಯಾವುದೇ ರೀತಿಯ ಕಷ್ಟನಷ್ಟಕ್ಕೆ ಒಳಗಾಗುವುದಿಲ್ಲ.

ನಮ್ಮ ದೇಶ ‘ಜಾತ್ಯತೀತ’ ಎಂದು ಹೇಳುತ್ತಲೇ, ಜಾತಿ ಸಂಘರ್ಷವನ್ನು, ಜಾತಿ ಸಂಕೋಲೆಯನ್ನು ವ್ಯವಸ್ಥಿತವಾಗಿ ಪೋಷಿಸಿಕೊಂಡು ಬರಲಾಗುತ್ತಿದೆ. ಯಾವುದೋ ಕಾಲದಲ್ಲಿ, ಯಾವುದೋ ಕಾರಣಕ್ಕಾಗಿ ಯಾವುದೋ ಒಂದು ಜಾತಿಗೆ ಅಥವಾ ಸಮುದಾಯಕ್ಕೆ ಸಿಕ್ಕಿರಬಹುದಾದ ಜಾಗಗಳನ್ನು ಸರ್ವ ಸಮುದಾಯಕ್ಕೂ ಸೇರಿದ ಸ್ವತ್ತು ಎಂದು ಪರಿಗಣಿಸಿದಲ್ಲಿ ಕಾಲಕ್ರಮೇಣ, ಅಷ್ಟರಮಟ್ಟಿಗಾದರೂ ವಾದವಿವಾದಗಳ ಸಂಖ್ಯೆ ಕಡಿಮೆಯಾಗುತ್ತದೆ, ಸಾಮಾಜಿಕ ಸ್ವಾಸ್ಥ್ಯ ಆ ಪ್ರಮಾಣದಲ್ಲಿಯಾದರೂ ಸದೃಢವಾಗಿರುತ್ತದೆ.



ಇಂತಹ ಘಟನೆಗಳಿಗೆ ಸಂಬಂಧಿಸಿದಂತೆ ಬಹಳಷ್ಟು ನೇತಾರರು ಪ್ರಚೋದನೆ ನೀಡಿ, ಪ್ರಚಾರ ಪಡೆದು, ನೇಪಥ್ಯಕ್ಕೆ ಸರಿದುಬಿಡುತ್ತಾರೆ. ಅಮಾಯಕರು ಅಂಥ ಮಾತುಗಳಿಗೆ ಮರುಳಾಗಿ, ಗಲಭೆ ಉಂಟು ಮಾಡುತ್ತಾರೆ. ಹುಬ್ಬಳ್ಳಿಯ ಈದ್ಗಾ ಮೈದಾನದ ಹೆಸರಿನಲ್ಲಿ ವರ್ಷಾನುಗಟ್ಟಲೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಿತು. ಅನೇಕ ಸಂಘರ್ಷಮಯ ಸನ್ನಿವೇಶಗಳು ಎದುರಾದವು. ಈದ್ಗಾ ಮೈದಾನದ ಹೆಸರಿನಲ್ಲಿ ಮುನ್ನೆಲೆಗೆ ಬಂದು ಇಂದು ರಾಜಕೀಯ ಜೀವನದಲ್ಲಿ ಸುಭದ್ರವಾಗಿ ನೆಲೆಯೂರಿದವರೂ ಇದ್ದಾರೆ. ಆದರೆ ಈ ಎಲ್ಲವುಗಳ ಮಧ್ಯೆ ನರಳಿದವರು ಮತ್ತದೇ ಜನಸಾಮಾನ್ಯರು! ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂತಹ ಕ್ಷುಲ್ಲಕ ಸಂಗತಿಗಳಿಗೆ ಪ್ರಾಣ ತೆತ್ತವರೆಷ್ಟೋ, ಆಸ್ತಿಪಾಸ್ತಿ ಕಳೆದುಕೊಂಡವರೆಷ್ಟೋ, ಬದುಕುವ ಭರವಸೆಯನ್ನೇ ಬಿಟ್ಟವರೆಷ್ಟೋ?!

ಸಮಷ್ಟಿಪ್ರಜ್ಞೆಯಿಂದ ಯೋಚಿಸುವ, ಸಮಚಿತ್ತವನ್ನೇ ಕಳೆದುಕೊಂಡಿರುವ ರಾಜಕೀಯ ವ್ಯವಸ್ಥೆಯ ಇಂತಹ ವ್ಯಸನಕ್ಕೆ, ಕಿಂಚಿತ್ತೂ ಸಾಮಾಜಿಕ ಕಳಕಳಿ ಇಲ್ಲದವರಿಗೆ ಯಾವುದೋ ಒಂದು ಜಾಗದ ಕುರಿತು ವಿವಾದವನ್ನೆಬ್ಬಿಸುವ, ಅದರಲ್ಲಿ ತಮ್ಮ ಬೆಳವಣಿಗೆಯನ್ನು ಕಾಣಬಯಸುವ ವಿಕ್ಷಿಪ್ತ ಮನಃಸ್ಥಿತಿಗೆ ಕಡಿವಾಣ ಹಾಕುವುದು ಜನಸಾಮಾನ್ಯರ ನೆಮ್ಮದಿ, ನಿರಾತಂಕದ ಜೀವನಕ್ಕೆ ಸಹಕಾರಿ.

ದೇಶದ ಸಮಗ್ರತೆ, ಏಕತೆ, ಸಂಘಟಿತ ಅಭಿವೃದ್ಧಿಯ ದೃಷ್ಟಿಯಲ್ಲಿ ಇಂತಹ ನಿರ್ಧಾರಗಳು ಎಲ್ಲ ಜಾತಿ-ಜನಾಂಗ-ಮತ-ಪಂಥ-ಧರ್ಮದವರಿಗೂ ಅನುಕೂಲಕರವೇ ಆಗುತ್ತವಾದ್ದರಿಂದ ಈ ದಿಸೆಯಲ್ಲಿ ದೃಢವಾದ ನಿಲುವು ಇಂದಿನ ಅಗತ್ಯ.

ವಾಚಕರ ವಾಣಿ

ಗದ್ದಲ ಸೃಷ್ಟಿಸಿ ಪರಾರಿಯಾಗುವವರು...

ಇಂದು ನಾವೆಲ್ಲರೂ ಹೋರಾಟ ಮಾಡಬೇಕಾಗಿರುವುದು ಅಭಿವೃದ್ಧಿಗಾಗಿ, ಜನರಿಗೆ ಒದಗಿಸಬೇಕಾದ ಮೂಲ ಸೌಕರ್ಯಗಳಿಗಾಗಿ, ಜೀವನಮಟ್ಟ ಸುಧಾರಣೆಗಾಗಿ, ಭ್ರಷ್ಟಾಚಾರ ನಿರ್ಮೂಲನೆಗಾಗಿ. ಇದನ್ನು ಮರೆತು ನಾವು ಸಾವರ್ಕರ್‌, ಟಿಪ್ಪು ಸುಲ್ತಾನ್‌, ನೆಹರೂ ಅಂತಹವರ ಹೆಸರಿನಲ್ಲಿ ಕಚ್ಚಾಡುತ್ತಿರುವುದು ಮೂರ್ಖತನದ ಪರಮಾವಧಿ. ಯಾರೂ ಪರಿಪೂರ್ಣ ವ್ಯಕ್ತಿ ಆಗಿರಲು ಸಾಧ್ಯವಿಲ್ಲ. ಹೋರಾಟದ ಸಂದರ್ಭದಲ್ಲಿ ಮಾನವಸಹಜ ದೌರ್ಬಲ್ಯಗಳು ವ್ಯಕ್ತವಾದ ಮಾತ್ರಕ್ಕೆ ಅವರನ್ನು ದೇಶದ್ರೋಹಿಗಳೆಂದಾಗಲಿ, ರಾಷ್ಟ್ರ ವಿರೋಧಿಗಳೆಂದಾಗಲಿ ಕರೆಯುವುದು ಸರಿಯಲ್ಲ. ಸಾವರ್ಕರ್‌ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಕಾಲಾಪಾನಿಯಂತಹ ಕಠಿಣ ಶಿಕ್ಷೆಗೆ ಒಳಗಾಗಿ ಚಿತ್ರಹಿಂಸೆಯನ್ನು ಅನುಭವಿಸುತ್ತಿರುವಾಗ, ಯಾರೂ ಅವರ ಸಹಾಯಕ್ಕೆ ಬಾರದೆ ಬ್ರಿಟಿಷರ ಹೀನಕೃತ್ಯದ ಕೂಟಕ್ಕೆ ಶರಣಾಗಿರಬಹುದು. ಅಂದಮಾತ್ರಕ್ಕೆ ಅವರನ್ನು ಸದಾ ಹೀಯಾಳಿಸುವುದು ಸರಿಯೇ? ಟಿಪ್ಪು ಸುಲ್ತಾನ್‌ ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ್ದಾರೆ, ಆಡಳಿತದಲ್ಲಿ ಕೆಲವೊಂದು ತಪ್ಪುಗಳು ನಡೆದಿರಬಹುದು, ಅಂದಮಾತ್ರಕ್ಕೆ ಸದಾ ಹೀಯಾಳಿಸುವುದು ಎಷ್ಟು ಸರಿ?

ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್‌ ನೆಹರೂ ವೈಜ್ಞಾನಿಕ ವಿಚಾರಗಳುಳ್ಳ, ದೂರದೃಷ್ಟಿಯ ನಾಯಕರಾಗಿದ್ದರು. ನಮ್ಮ ದೇಶ ಎಲ್ಲಾ ರೀತಿಯಿಂದ ಬಡ ರಾಷ್ಟ್ರವಾಗಿದ್ದ ಸಂದರ್ಭದಲ್ಲಿ ಅಭಿವೃದ್ಧಿ ಪಥದತ್ತ ಮುನ್ನಡೆಸಿದ ಮೇಧಾವಿ. ಈಗ ನಾವು ಬರೀ ರಾಜಕೀಯ ದೃಷ್ಟಿಯಿಂದ ಸರ್ಕಾರಿ ಜಾಹೀರಾತಿನಲ್ಲಿ ಅವರ ಫೋಟೊ ಹಾಕದೇ ಇರುವುದು ಸರಿಯೇ? ಇಂದು ಕೆಲವು ರಾಜಕೀಯ ನಾಯಕರಿಗೆ ಬೇಕಾಗಿರುವುದು ಗೊಂದಲ, ಗದ್ದಲ ಸೃಷ್ಟಿಸುವುದು, ಈ ಗದ್ದಲದಲ್ಲಿ ಜೇಬು ತುಂಬಿಸಿಕೊಂಡು ಪರಾರಿಯಾಗುವುದು. ಪ್ರಜೆಗಳು ಜಾಗೃತರಾಗಬೇಕು.

ಗೋಡೆ ಶಿವರಾಜ್‌ ಸಿರಿಗೇರಿ, ಬಳ್ಳಾರಿ

ಆಹಾರದ ಲೆಕ್ಕ: ಉದ್ಯೋಗ ಸೃಷ್ಟಿಸಲಿ!

ಮಾಂಸ ಸೇವನೆ ಮಾಡಿ ದೇವಸ್ಥಾನಕ್ಕೆ ಭೇಟಿ ಕೊಟ್ಟರು ಎಂಬ ವಿರೋಧಿಗಳ ಆರೋಪಕ್ಕೆ, ‘ಇಂತಹದ್ದೇ ತಿನ್ನು ಎಂದು ದೇವರು ಎಲ್ಲಿಯಾದರೂ ಹೇಳಿದ್ದಾನೆಯೇ?’ ಎಂಬ ಕಾಂಗ್ರೆಸ್‌ ಮುಖಂಡ ಸಿದ್ದರಾಮಯ್ಯ ಅವರ ಆಕ್ಷೇಪದ ಉತ್ತರ ಸ್ವಾರಸ್ಯಕರವಾಗಿದೆ (ಪ್ರ.ವಾ., ಆ. 22). ಬರುವ ಭಕ್ತರು ಮಾಂಸಾಹಾರ ತಿಂದರೋ ಸಸ್ಯಾಹಾರ ತಿಂದು ಬಂದರೋ ಅನ್ನುವುದು ಭಕ್ತರ ಆಂತರ್ಯಕ್ಕೆ ಮತ್ತು ದೇವರ ಪ್ರಸನ್ನತೆಗೆ ಬಿಟ್ಟ ವಿಷಯ. ಆದರೂ ದೇವಸ್ಥಾನದ ಮುಂದೆ ಒಬ್ಬರನ್ನು ಕೂಡಿಸಿ, ಬರುವ ಭಕ್ತರು ಆ ದಿನ ಯಾವ ಆಹಾರ ಸೇವಿಸಿದ್ದಾರೆ ಎನ್ನುವ ಮಾಹಿತಿಯನ್ನು ದಾಖಲೆ ಮಾಡಿಸುವುದು ಸೂಕ್ತ ಅನ್ನಿಸುತ್ತಿದೆ. ಏಕೆಂದರೆ, ಈ ಅಂಕಿ ಅಂಶವನ್ನು ಬಳಸಿ, ಮಾಂಸಾಹಾರ ಮತ್ತು ಸಸ್ಯಾಹಾರ ತಿಂದು ಹೋದವರಲ್ಲಿ, ಯಾರು ಯಾರಿಗೆ ಶೇಕಡಾವಾರು ಎಷ್ಟೆಷ್ಟು ಪ್ರಮಾಣದಲ್ಲಿ ಒಳ್ಳೆಯದಾಗಿದೆ ಎಂಬುದರ ಬಗ್ಗೆ ಮುಂದೆ ಪರಿಶೋಧನೆ ಮಾಡಬಹುದೇನೋ. ಏನಿಲ್ಲವೆಂದರೂ ಸದ್ಯಕ್ಕೆ ಒಬ್ಬರಿಗೆ ಕೆಲಸ ಕೊಟ್ಟಂತಾದರೂ ಆಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮುರುಕು ಕಬೋರ್ಡ್‌, ಚಿಲಕವಿಲ್ಲದ ಶೌಚಾಲಯ...

ಹಿಂದುಳಿದ ವರ್ಗದ ಹಾಸ್ಟೆಲ್‌ಗಳಿಗೆ ಅನುದಾನ ಮತ್ತು ಹೊಸ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಕುರಿತ ಮುಖ್ಯಮಂತ್ರಿ ಅವರ ಹೇಳಿಕೆಯನ್ನು (ಪ್ರ.ವಾ., ಆ. 21) ಓದಿದಾಗ, ನನ್ನ ಹಾಸ್ಟೆಲ್‌ ಜೀವನ ನೆನಪಿಗೆ ಬಂದಿತು. ಹಾಸ್ಟೆಲ್‌ ಕೋಣೆಯಲ್ಲಿ ಜಂಗು ಹತ್ತಿದ್ದ ಕಾಟುಗಳು, ಕೀಲಿ ಇಲ್ಲದ ಮುರುಕು ಕಬೋರ್ಡ್‌ಗಳು, ಚಿಲಕವಿಲ್ಲದ ಶೌಚಾಲಯಗಳು, ಅಸಮರ್ಪಕ ನೀರಿನ ಸೌಲಭ್ಯದಂತಹ ಅನೇಕ ಮೂಲ ಸೌಕರ್ಯಗಳ ಕೊರತೆಯನ್ನು ಅನುಭವಿಸಬೇಕಾಗಿತ್ತು. ಆದರೆ ಈಗ ವಿವಿಧ ಇಲಾಖೆಗಳ ಮೂಲಕ ರಾಜ್ಯದಲ್ಲಿನ ಸರ್ಕಾರಿ ಹಾಸ್ಟೆಲ್‌ಗಳ ಅಭಿವೃದ್ಧಿಗೆ ಕೋಟಿಗಟ್ಟಲೆ ಹಣವನ್ನು ಸರ್ಕಾರ ಮೀಸಲಿಡುತ್ತಿದೆ. ಆದರೂ ಕನ್ನಹಾಕುವ ವ್ಯವಸ್ಥೆಯು ಹಾಸ್ಟೆಲ್‌ಗಳ ದುರದೃಷ್ಟಕರ ಸ್ಥಿತಿಯ ಮೇಲೆ ಬೆಳಕು ಚೆಲ್ಲಿದೆ.

ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಗುರಿಯೊಂದಿಗೆ ರಾಜ್ಯದ ವಿವಿಧ ಭಾಗಗಳಿಂದ ನಗರಗಳಿಗೆ ಬರುವ ವಿದ್ಯಾರ್ಥಿಗಳಿಗೆ ಒಂದೇ ಸೂರಿನಡಿ ಜೀವನದ ಮೌಲ್ಯಗಳನ್ನೂ ಕಲಿಸುವ ಹಾಸ್ಟೆಲ್‌ಗಳನ್ನು ಸುಧಾರಿಸುವುದು ಅತ್ಯಗತ್ಯ. ಅವುಗಳ ಕಳಪೆ ನಿರ್ವಹಣೆಯ ದೂರುಗಳ ಮೇಲ್ವಿಚಾರಣೆಯನ್ನು ತ್ವರಿತವಾಗಿ ಕೈಗೊಳ್ಳಲು, ಕಟ್ಟುನಿಟ್ಟಿನ ಕ್ರಮಗಳ ಮೂಲಕ ಹಾಸ್ಟೆಲ್‌ಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಮುಂದಾಗಬೇಕು.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

ಬಾಡೂಟದ್ದೇ ಮಾತು: ನಾವು ಯಾವ ಕಾಲದಲ್ಲಿದ್ದೇವೆ?

ಶಾಲಾ ಮಕ್ಕಳಿಗೆ ಮೊಟ್ಟೆ ಕೊಟ್ಟದ್ದು, ಬಾಡೂಟ ಮಾಡಿ ಗುಡಿಗೆ ಹೋಗಿದ್ದು... ಇಂತಹ ವಿಷಯಗಳ ಕುರಿತೇ ಕರ್ನಾಟಕದ ಮಂತ್ರಿಗಳು, ಮಾಧ್ಯಮಗಳು ಹಾಗೂ ಪರ–ವಿರೋಧ ಎರಡು ನಿಲುವುಗಳಿಗೂ ಇಂಬು ಕೊಡುವ ಗುಂಪುಗಳು ಚರ್ಚೆ ಮಾಡುತ್ತಾ ಕಾಲ ಕಳೆಯುವುದನ್ನು ನೋಡಿದರೆ, ನಾವು ಯಾವ ಕಾಲದಲ್ಲಿದ್ದೇವೆ ಎಂಬ ಅನುಮಾನ ಮೂಡುತ್ತಿದೆ.

ಹೇಳಿ ಕೇಳಿ ನಮ್ಮಲ್ಲಿ ಮತ–ಧರ್ಮ, ಊಟದ ಪದ್ಧತಿ, ಆಚಾರ ವಿಚಾರಗಳು ಎಲ್ಲವೂ ಭಿನ್ನವೇ. ಇವು ನಿಂತಿರುವುದು ಅವರವರ ನಂಬಿಕೆಗಳ ಮೇಲಷ್ಟೇ. ಅದು ಸರಿ, ಇದು ತಪ್ಪು; ಇದು ಸರಿ, ಅದು ತಪ್ಪು ಎಂದು ಹೇಳುವ ಅಥವಾ ಪ್ರತಿಪಾದಿಸುವ ಯಾವುದೇ ಸಾಕ್ಷ್ಯ ಇಲ್ಲಿಲ್ಲ. ವೈಜ್ಞಾನಿಕ ಕಾರಣವೂ ಸಿಗುವುದಿಲ್ಲ. ಹೀಗಿರುವಾಗ ಇಂತಹ ಧಾರ್ಮಿಕ, ಭಾವನಾತ್ಮಕ ವಿಷಯಗಳಲ್ಲೇ ಕಾಲವ್ಯಯ ಮಾಡದೆ ವೈಚಾರಿಕ ಚಿಂತನೆಗಳನ್ನು ಬೆಳೆಸಿಕೊಳ್ಳುವತ್ತ ಗಮನಹರಿಸುವುದು ಇಂದಿನ ತುರ್ತು ಅಗತ್ಯ.

ಜನರ ಜೀವನಕ್ಕೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಲು ಆದ್ಯತೆ ನೀಡೋಣ. ಅಗತ್ಯ ವಸ್ತುಗಳ ಬೆಲೆ ಹೆಚ್ಚಳ, ಅತಿಯಾದ ವಲಸೆ, ನಿರುದ್ಯೋಗ... ಇಂತಹ ಹತ್ತಾರು ಜ್ವಲಂತ ಸಮಸ್ಯೆಗಳನ್ನು ಬಗೆಹರಿಸುವತ್ತ ಚರ್ಚೆ ನಡೆಯಲಿ. ಸಮಸ್ಯೆಗಳು ನಿವಾರಣೆಯಾಗಲಿ.

ನಾಗರಾಜ ಮಾದೇಗೌಡ, ಕನಕಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ದೇಶದಾದ್ಯಂತ ಮಾಂಸಾಹಾರ ವೈವಿಧ್ಯ

ದೇಶದ ಶೇ 85ರಷ್ಟು ಪುರುಷರು ಮೊಟ್ಟೆ–ಮಾಂಸ ತಿನ್ನುತ್ತಾರೆ. ಮೊಟ್ಟೆ–ಮಾಂಸ ತಿನ್ನದೇ ಇರುವ ಪುರುಷರ ಪ್ರಮಾಣ ಶೇ 15ರಷ್ಟಿದೆ ಎನ್ನುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5ರ ದತ್ತಾಂಶಗಳು. ದೇಶದಲ್ಲಿನ ಮಹಿಳೆಯರ ಆಹಾರದಲ್ಲೂ ಮಾಂಸಕ್ಕೆ ಪ್ರಮುಖ ಸ್ಥಾನವಿದೆ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ. ದೇಶದ ಮಹಿಳೆಯರಲ್ಲಿ ಮೊಟ್ಟೆ–ಮಾಂಸ ತಿನ್ನದೇ ಇರುವವರ ಪ್ರಮಾಣ ಶೇ 28ರಷ್ಟಿದೆ ಎಂದು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮಾಂಸ ತಿನ್ನುವ ಸ್ವರೂಪದಲ್ಲೂ ವೈವಿಧ್ಯವಿದೆ, ಮಾಂಸಾಹಾರದಲ್ಲೂ ವೈವಿಧ್ಯವಿದೆ.




79.1% ಕರ್ನಾಟಕದಲ್ಲಿ ಮಾಂಸ ತಿನ್ನುವ ಪುರುಷರ ಪ್ರಮಾಣ

78.7% ಕರ್ನಾಟಕದಲ್ಲಿ ಮಾಂಸ ತಿನ್ನುವ ಮಹಿಳೆಯರ ಪ್ರಮಾಣ



ಮಹಿಳೆಯರ ಆಹಾರದಲ್ಲಿ ಮಾಂಸಕ್ಕೂ ಪ್ರಮುಖ ಸ್ಥಾನ

ಮಹಿಳೆಯರು (ಶೇಕಡಾವಾರುಗಳಲ್ಲಿ)




- ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರಲ್ಲಿ ಶೇ 72ರಷ್ಟು ಮಹಿಳೆಯರು ತಾವು ಮೊಟ್ಟೆ ತಿನ್ನುತ್ತೇವೆ ಎಂದು ಹೇಳಿದ್ದಾರೆ. ಪ್ರತಿದಿನ ಮೊಟ್ಟೆ ತಿನ್ನುವವರ ಪ್ರಮಾಣ ಶೇ 5.2ರಷ್ಟಿದ್ದರೆ, ವಾರಕ್ಕೊಮ್ಮೆ ಮೊಟ್ಟೆ ತಿನ್ನುವವರ ಪ್ರಮಾಣ ಶೇ 40ರಷ್ಟಿದೆ. ಅಪರೂಪಕ್ಕೆ ಮೊಟ್ಟೆ ತಿನ್ನುವವರ ಪ್ರಮಾಣವೂ ಶೇ 26.9ರಷ್ಟಿದೆ. ಮೊಟ್ಟೆ ತಿನ್ನದೇ ಇರುವವರ ಪ್ರಮಾಣ ಶೇ 30ಕ್ಕಿಂತಲೂ ಕಡಿಮೆ
- ದೇಶದಲ್ಲಿ ಮಹಿಳೆಯರ ಆಹಾರದಲ್ಲಿ ಮೀನಿಗೂ ಪ್ರಮುಖ ಸ್ಥಾನವಿದೆ. ಮೀನು ತಿನ್ನುವವರ ಪ್ರಮಾಣವೂ ಗಣನೀಯವಾಗಿದೆ. ಶೇ 65ಕ್ಕಿಂತಲೂ ಹೆಚ್ಚು ಮಹಿಳೆಯರು ಮೀನು ತಿನ್ನುತ್ತಾರೆ. ಪ್ರತಿದಿನ ಮೀನು ತಿನ್ನುವವರ ಪ್ರಮಾಣ ಶೇ 5.1ರಷ್ಟೇ ಇದ್ದರೂ, ವಾರಕ್ಕೊಮ್ಮೆ ಮತ್ತು ಅಪರೂಪಕ್ಕೆ ಮೀನು ತಿನ್ನುವವರ ಪ್ರಮಾಣ ಶೇ 60ಕ್ಕಿಂತಲೂ ಹೆಚ್ಚು
- ಕೋಳಿ ಮಾಂಸ, ಕುರಿ/ಮೇಕೆಯ ಮಾಂಸವನ್ನು ಆಹಾರವಾಗಿ ಬಳಸುವ ಮಹಿಳೆಯರ ಪ್ರಮಾಣವೂ ಹೆಚ್ಚು ಇದೆ. ಸಮೀಕ್ಷೆಯಲ್ಲಿ ಭಾಗಿಯಾದ ಮಹಿಳೆಯರಲ್ಲಿ ಈ ಮಾಂಸಗಳನ್ನು ಬಳಸುವವರ ಪ್ರಮಾಣ ಶೇ 70.6ರಷ್ಟಿದೆ. ದೇಶದ ಶೇ 29.4ರಷ್ಟು ಮಹಿಳೆಯರು ಮಾತ್ರ ಈ ಬಗೆಯ ಆಹಾರವನ್ನು ತಿನ್ನುವುದಿಲ್ಲ
- ಮೊಟ್ಟೆಯನ್ನು ಮಾತ್ರ ಬಳಸುವವರು ಮತ್ತು ಎಲ್ಲಾ ಸ್ವರೂಪದ ಮಾಂಸಾಹಾರಗಳನ್ನು ತಿನ್ನುವವರ ಪ್ರಮಾಣದಲ್ಲಿ ಗಣನೀಯ ಅಂತರವಿಲ್ಲ. ಆದರೆ, ಮೀನು ಮಾತ್ರ ತಿನ್ನುವ ಮಹಿಳೆಯರ ಪ್ರಮಾಣ ಸ್ವಲ್ಪ ಕಡಿಮೆ ಇದೆ

ಮಾಂಸಾಹಾರ: ಮಹಿಳೆಯರಿಗಿಂತ ಪುರುಷರಲ್ಲಿ ಹೆಚ್ಚು

- ಮಹಿಳೆಯರಿಗೆ ಹೋಲಿಸಿದರೆ ಮಾಂಸ ತಿನ್ನುವ ಪುರುಷರ ಪ್ರಮಾಣ ಅತಿ ಹೆಚ್ಚು. ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಶೇ 85ಕ್ಕಿಂತಲೂ ಹೆಚ್ಚು ಜನರು ತಾವು ಮೊಟ್ಟೆ ತಿನ್ನುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಶೇ 50ಕ್ಕಿಂತಲೂ ಹೆಚ್ಚು ಪುರುಷರು ವಾರಕ್ಕೆ ಒಮ್ಮೆಯಾದರೂ ಮೊಟ್ಟೆ ತಿನ್ನುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಶೇ 7.1ರಷ್ಟು ಪುರುಷರು ಪ್ರತಿದಿನ ಮೊಟ್ಟೆ ತಿನ್ನುತ್ತೇವೆ ಎಂದಿದ್ದಾರೆ
- ಇತರ ಮಾಂಸಗಳಿಗೆ ಹೋಲಿಸಿದರೆ, ಮೀನು ತಿನ್ನುವ ಪುರುಷರ ಪ್ರಮಾಣ ಕಡಿಮೆ ಇದೆ. ಆದರೆ ದೇಶದ ಶೇ 79.6ರಷ್ಟು ಪುರುಷರು ಮೀನು ತಿನ್ನುತ್ತೇವೆ ಎಂದಿದ್ದಾರೆ. ಶೇ 39ರಷ್ಟು ಪುರುಷರು ವಾರಕ್ಕೊಮ್ಮೆ ಮೀನು ತಿನ್ನುತ್ತೇವೆ ಎಂದು ಹೇಳಿದ್ದಾರೆ. ಮೀನು ತಿನ್ನದೇ ಇರುವವರ ಪ್ರಮಾಣ ಶೇ 21.4ರಷ್ಟು ಮಾತ್ರ
- ಸಮೀಕ್ಷೆಯಲ್ಲಿ ಭಾಗಿಯಾದ ಪುರುಷರಲ್ಲಿ ಶೇ 16.6ರಷ್ಟು ಪುರುಷರು ಮೀನು, ಕೋಳಿ ಮಾಂಸ, ಕುರಿ/ಮೇಕೆ ಮಾಂಸ ತಿನ್ನುವುದಿಲ್ಲ ಎಂದು ಹೇಳಿದ್ದಾರೆ. ಉಳಿದ ಶೇ 84.4ರಷ್ಟು ಪುರುಷರು ತಾವು ಈ ಮಾಂಸಗಳನ್ನು ತಿನ್ನುತ್ತೇವೆ ಎಂದಿದ್ದಾರೆ. ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಶೇ 49ಕ್ಕೂ ಹೆಚ್ಚು ಜನರು ತಾವು ವಾರಕ್ಕೊಮ್ಮೆಯಾದರೂ ಈ ಮಾಂಸ ತಿನ್ನುತ್ತೇವೆ ಎಂದು ಹೇಳಿಕೊಂಡಿದ್ದಾರೆ.

ಪುರುಷರು (ಶೇಕಡಾವಾರುಗಳಲ್ಲಿ)




ದಕ್ಷಿಣದಲ್ಲಿ ಹೆಚ್ಚು, ಉತ್ತರದಲ್ಲಿ ಕಡಿಮೆ

ದೇಶದಲ್ಲಿ ಶೇ 71ರಷ್ಟು ಜನರು ಮಾಂಸ ತಿನ್ನುತ್ತಾರೆ ಎನ್ನುತ್ತದೆ ಕೇಂದ್ರ ಸರ್ಕಾರದ 'ಸ್ಯಾಂಪಲ್ ರಿಜಿಸ್ಟ್ರೇಷನ್ ಸಿಸ್ಟಂ ಬೇಸ್‌ಲೈನ್ ಸಮೀಕ್ಷೆ–2014'ರ ವರದಿ. ಆದರೆ, ರಾಷ್ಟ್ರೀಯ ಕುಟುಂಬ ಆರೋಗ್ಯ ವರದಿಯ ಪ್ರಕಾರ ದೇಶದಲ್ಲಿ ಮಾಂಸ ತಿನ್ನುವವರ ಪ್ರಮಾಣ ಶೇ 72ರಷ್ಟು. ಈ ಎರಡೂ ಸಮೀಕ್ಷೆಯ ವರದಿಗಳ ದತ್ತಾಂಶಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಆದರೆ ವ್ಯತ್ಯಾಸದ ಅಂತರ ತೀರಾ ಕಡಿಮೆ ಇದೆ.

ದೇಶದ ಎಲ್ಲಾ ರಾಜ್ಯಗಳಲ್ಲಿ ಮಾಂಸ ತಿನ್ನುವವರ ಪ್ರಮಾಣ ಒಂದೇ ರೀತಿಯಲ್ಲಿ ಇಲ್ಲ. ದಕ್ಷಿಣ, ಪೂರ್ವ ಕರಾವಳಿ ಮತ್ತು ಈಶಾನ್ಯ ಭಾರತದ ರಾಜ್ಯಗಳ ಜನರಲ್ಲಿ ಮಾಂಸ ತಿನ್ನುವವರ ಪ್ರಮಾಣ ಗರಿಷ್ಠ ಮಟ್ಟದಲ್ಲಿದೆ. ಮಧ್ಯ ಭಾರತದ ರಾಜ್ಯಗಳಲ್ಲಿ ಈ ಪ್ರಮಾಣ ಸ್ವಲ್ಪ ಕಡಿಮೆಯಾಗುತ್ತದೆ. ಉತ್ತರ ಮತ್ತು ಪಶ್ಚಿಮದ ರಾಜ್ಯಗಳಲ್ಲಿ ಮಾಂಸ ತಿನ್ನುವವರ ಪ್ರಮಾಣ ಕಡಿಮೆ ಇದೆ.

90%ಕ್ಕೂ ಹೆಚ್ಚು ಮಾಂಸಾಹಾರಿಗಳು ಇರುವ ರಾಜ್ಯಗಳ ಸಂಖ್ಯೆ **6**

9 ನಿಖರ ಮಾಹಿತಿ ಲಭ್ಯವಿಲ್ಲದ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ



70%ರಿಂದ **90%**ರಷ್ಟು ಮಾಂಸಾಹಾರಿಗಳು ಇರುವ ರಾಜ್ಯಗಳ ಸಂಖ್ಯೆ **6**

50%ರಿಂದ **70%**ರಷ್ಟು ಮಾಂಸಾಹಾರಿಗಳು ಇರುವ ರಾಜ್ಯಗಳ ಸಂಖ್ಯೆ **4**

30%ರಿಂದ **50%**ರಷ್ಟು ಮಾಂಸಾಹಾರಿಗಳು ಇರುವ ರಾಜ್ಯಗಳ ಸಂಖ್ಯೆ **4**

30%ಕ್ಕಿಂತ ಕಡಿಮೆ ಮಾಂಸಾಹಾರಿಗಳು ಇರುವ ರಾಜ್ಯಗಳ ಸಂಖ್ಯೆ **1**

- ದಕ್ಷಿಣ ಭಾರತದ ರಾಜ್ಯಗಳು, ಪೂರ್ವ ಕರಾವಳಿಯ ರಾಜ್ಯಗಳಲ್ಲಿ ಮಾಂಸ ತಿನ್ನುವವರ ಪ್ರಮಾಣ ಅತ್ಯಧಿಕವಾಗಿದೆ
- ಈಶಾನ್ಯ ಭಾರತದ ಅಸ್ಸಾಂನಲ್ಲೂ ಮಾಂಸ ತಿನ್ನುವವರ ಪ್ರಮಾಣ ಹೆಚ್ಚು
- ಉತ್ತರ ಭಾರತದಲ್ಲಿ, ಹಿಂದಿ ಭಾಷಿಕ ರಾಜ್ಯಗಳಲ್ಲಿ ಮಾಂಸ ತಿನ್ನುವವರ ಪ್ರಮಾಣ ಕಡಿಮೆ ಇದೆ
- ಗುಜರಾತ್, ರಾಜಸ್ಥಾನ ಮತ್ತು ಪಂಜಾಬ್‌ನಲ್ಲಿ ಮಾಂಸ ತಿನ್ನುವವರ ಪ್ರಮಾಣ ತೀರಾ ಕಡಿಮೆ ಇದೆ

ಆಧಾರ: ಪಿಟಿಐ, ಸ್ಯಾಂಪಲ್ ರಿಜಿಸ್ಟ್ರೇಷನ್ ಸಿಸ್ಟಂ ಬೇಸ್‌ಲೈನ್ ಸಮೀಕ್ಷೆ–2014'ರ ವರದಿ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಗಳು

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 206

ಪಾರ್ವತಿಯ ಸೇವೆ ಒಪ್ಪದ ಶಿವ

ತಪಸ್ಸಿಗೆ ಕುಳಿತಿದ್ದ ಶಿವನ ಬಳಿಗೆ ಹಿಮವಂತ ತನ್ನ ಪುತ್ರಿ ಪಾರ್ವತಿಯೊಡನೆ ಬಂದ. ತಾನೇ ಪ್ರೀತಿಯಿಂದ ಸಂಗ್ರಹಿಸಿ ತಂದಿದ್ದ ಒಳ್ಳೆಯ ಪುಷ್ಪ ಮತ್ತು ಫಲಗಳನ್ನು ಶಿವನಿಗೆ ಅರ್ಪಿಸಿ, 'ಚಂದ್ರಶೇಖರ, ಈ ನನ್ನ ಪುತ್ರಿಯು ನಿನ್ನನ್ನು ಸೇವಿಸಲಿಚ್ಛಿಸಿದ್ದಾಳೆ. ನಿನ್ನ ಆರಾಧನೆಗಾಗಿ ಇವಳನ್ನು ಕರೆದುಕೊಂಡು ಬಂದಿರುವೆ. ಪಾರ್ವತಿಯ ಸೇವೆಗೆ ಅನುಮತಿಯನ್ನು ಕೊಡು' ಎಂದು ಪ್ರಾರ್ಥಿಸಿದ.

ಆಗ ಶಂಕರನು ಪಾರ್ವತಿಯನ್ನು ನೋಡಿದ. ಅರಳಿದ ಕಮಲದ ದಳದಂತೆ ಅರಳಿದ ಅವಳ ಯೌವನ. ಶ್ಯಾಮವರ್ಣದಲ್ಲೂ ಪೂರ್ಣಚಂದ್ರನಂತೆ ಮನೋಹರವಾಗಿ ಕಾಣುತ್ತಿದ್ದ ಮುಖಾರವಿಂದ. ಶಂಖದಂತಿದ್ದ ಕತ್ತು. ವಿಶಾಲವಾದ ಕಣ್ಣುಗಳು. ಸುಂದರವಾದ ಕಿವಿಗಳು. ತಾವರೆನಾಳದಂತೆ ನೀಳವಾಗಿದ್ದ ಬಾಹುಗಳು. ಹಂಸದಂಥ ಅವಳ ಹೆಜ್ಜೆಗಳು. ನೋಡಿದ ಮಾತ್ರದಿಂದಲೇ ಜಿತೇಂದ್ರಿಯರಾದ ಮುನಿಗಳ ಮನಸ್ಸನ್ನು ಕೆಡಿಸುವಷ್ಟು ಸುಂದರಿಯಾಗಿದ್ದ ಪಾರ್ವತಿಯನ್ನು ನೋಡಿ ಮಹಾಯೋಗಿಯಾದ ಶಂಕರ ವಿಚಲಿತನಾದವನಂತೆ ತಕ್ಷಣ ತನ್ನ ಕಣ್ಣುಗಳನ್ನು ಮುಚ್ಚಿಕೊಂಡ. ಪ್ರಕೃತಿಗಿಂತಲೂ ಭಿನ್ನವಾದ ತನ್ನ ಸ್ವರೂಪವಾದ ಪರವಸ್ತುಗಳನ್ನು ಮನಸ್ಸಿನಲ್ಲಿ ಏಕೀಕೃತಗೊಳಿಸಿ, ಮತ್ತೆ ಧ್ಯಾನಿಸತೊಡಗಿದ. ಹೀಗೆ ಕಣ್ಣನ್ನು ಮುಚ್ಚಿ ತಪಸ್ಸನ್ನು ಮಾಡುತ್ತಿದ್ದ ಶಂಕರನನ್ನು ನೋಡಿ ಹಿಮವಂತನಿಗೆ ಪಾರ್ವತಿಯನ್ನು ಮದುವೆಯಾಗುವನೋ ಇಲ್ಲವೋ – ಎಂಬ ಸಂಶಯವಾಗಿ, 'ಓ ಮಹಾದೇವ, ನಿನ್ನನ್ನು ಮೊರೆಹೊಕ್ಕಿರುವ ನನ್ನನ್ನು ನೋಡು. ನಿನ್ನ ಮಹಿಮೆಯು ವಾಕ್ಯ ಮತ್ತು ಮನಸ್ಸುಗಳಿಗೆ ನಿಲುಕದಂತಹುದು. ಶ್ರುತಿಯು ನಿನ್ನ ಸ್ವರೂಪವನ್ನು ಎಲ್ಲ ಜಡವಸ್ತುಗಳಿಗಿಂತಲೂ ಭಿನ್ನವಾದುದು ಎಂದು ವರ್ಣಿಸುವುದು. ಇಂಥ ನಿನ್ನ ದರ್ಶನಕ್ಕೆ ಪ್ರತಿದಿನವೂ ಪಾರ್ವತಿಯೊಡನೆ ಬರುವೆನು. ಇದಕ್ಕಾದರೂ ಅನುಮತಿಯನ್ನು ಕೊಡು' ಎಂದು ಕೋರಿದ.

ಬಹಿರ್ಮುಖನಾದ ಮಹೇಶ್ವರ ಹೇಳಿದ, 'ಎಲೈ ಪರ್ವತರಾಜ, ನಿತ್ಯವೂ ನೀನು ನನ್ನ ದರ್ಶನಕ್ಕೆ ಬರಬಹುದು. ಆದರೆ ನಿನ್ನ ಪುತ್ರಿಯನ್ನು ಮನೆಯಲ್ಲಿಯೇ ಬಿಟ್ಟು ಬರಬೇಕು' ಎಂದ. ಹಿಮವಂತ 'ಶಂಕರ, ಪಾರ್ವತಿಯನ್ನೇಕೆ ಕರೆದುಕೊಂಡು ಬರಬಾರದು? ಇವಳು ನಿನ್ನ ಸೇವೆಗೆ ಅಯೋಗ್ಯಳೇ?' ಎಂದು ವಿಸ್ಮಯದಿಂದ ಪ್ರಶ್ನಿಸಿದ. ಇದಕ್ಕೆ ಶಂಕರ ನಕ್ಕು, 'ಎಲೈ ಪರ್ವತರಾಜ, ಈ ನಿನ್ನ ಕುಮಾರಿಯು ಸುಂದರಿಯಾಗಿರುವಳು. ಚಂದ್ರನಂತೆ ಮುಖವುಳ್ಳ ನಿನ್ನ ಮಗಳು ನನ್ನ ಬಳಿಗೆ ಬಂದರೆ ನನ್ನ ತಪಕ್ಕೆ ಅಡ್ಡಿಯಾಗುವುದು. ಏಕೆಂದರೆ, ಸ್ತ್ರೀಯನ್ನು ಮಾಯೆಯೆಂದು ತಿಳಿದವರು ಹೇಳಿರುವರು. ಅದರಲ್ಲಿಯೂ ಯುವತಿಯಾದವಳು ತಪಸ್ವಿಗಳಿಗೆ ವಿಘ್ನವನ್ನುಂಟು ಮಾಡುವವಳು. ಹೀಗಿರುವಾಗ ಯೌವನಭರಿತ ಸುಂದರಿ ಪಾರ್ವತಿ ನನ್ನ ಬಳಿ ಬರುವುದು ಸರಿಯಲ್ಲ. ಸ್ತ್ರೀಯ ಸಂಬಂಧದಿಂದ ವಿಷಯಸುಖದಲ್ಲಿ ಅಭಿಲಾಷೆಯುಂಟಾದರೆ ವೈರಾಗ್ಯವು ನಾಶವಾಗುವುದು. ಇದರಿಂದ ತಪಸ್ಸು ಹಾಳಾಗುವುದು. ಆದಕಾರಣ ತಪಸ್ವಿಯಾದವನು ಸ್ತ್ರೀಯರ ಸಂಬಂಧವನ್ನು ಬೆಳೆಸಬಾರದು. ಇದೆಲ್ಲಾ ನಿನಗೆ ತಿಳಿಯದ ವಿಷಯವೇನೂ ಅಲ್ಲಾ. ನಿನ್ನ ಮಗಳು ಪಾರ್ವತಿಯನ್ನು ನನ್ನ ಸೇವೆಗೆ ನಿಯೋಜಿಸುವ ನಿನ್ನ ಯೋಚನೆ ಸರಿಯಲ್ಲ. ಆದ್ದರಿಂದ ಈ ವಿಷಯದಲ್ಲಿ ನನ್ನ ಹೆಚ್ಚು ಒತ್ತಾಯಿಸಬೇಡ' ಎಂದು ಹೇಳಿದ ಶಂಕರ ಮತ್ತೆ ಕಣ್ಣುಮುಚ್ಚಿ ತಪೋಮಗ್ನನಾದ.

ರುದ್ರನ ನಿಷ್ಠುರವಾದಂತಹ ಮಾತನ್ನು ಕೇಳಿ ಹಿಮವಂತ ದುಃಖಿತನಾದ. ತಂದೆ ಪರ್ವತರಾಜ ದುಃಖಿತನಾದುದನ್ನು ನೋಡಿ ಮಗಳು ಪಾರ್ವತಿ ಶಂಕರನನ್ನುದ್ದೇಶಿಸಿ ಮಾತನಾಡಲು ಉದ್ಯುಕ್ತಳಾದಳು ಎಂಬಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೆಯದಾದ ರುದ್ರಸಂಹಿತೆಯ ಮೂರನೇ ಖಂಡವಾದ ಪಾರ್ವತೀಖಂಡದ ಹನ್ನೆರಡನೆ ಅಧ್ಯಾಯ ಮುಗಿಯುತ್ತದೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಬಿಟ್ಟು, ಸರ್ಕಾರಿ ಸ್ವಾಮ್ಯದ ಎಲ್ಲ ಬ್ಯಾಂಕ್‌ಗಳನ್ನು ಖಾಸಗೀಕರಣ ಮಾಡಲು ಸರ್ಕಾರ ನಿರ್ಧರಿಸಿದೆ ಎಂಬುದಾಗಿ 'ಝೀನ್ಯೂಸ್ ಹಿಂದಿ' ಸೇರಿದಂತೆ ಕೆಲವು ಮಾಧ್ಯಮಗಳು ವರದಿ ಮಾಡಿವೆ. ಸಾಮಾಜಿಕ ಜಾಲತಾಣಗಳಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತಿದೆ. ಬಂಡವಾಳ ಹಿಂತೆಗೆತ ನೀತಿಯಡಿ 2 ಬ್ಯಾಂಕ್‌ಗಳ ಖಾಸಗೀಕರಣ ಮಾಡುವುದಾಗಿ ಹಣಕಾಸು ಸಚಿವರು 2021–22ರ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದರು ಎಂಬುದಾಗಿಯೂ ಚರ್ಚೆಯಾಗುತ್ತಿದೆ.

ನೀತಿ ಆಯೋಗದ ಮಾಜಿ ಉಪಾಧ್ಯಕ್ಷ ಅರವಿಂದ ಪನಗರಿಯಾ ಹಾಗೂ ಎನ್‌ಸಿಎಇಆರ್ ಮಹಾನಿರ್ದೇಶಕಿ ಪೂನಂ ಗುಪ್ತಾ ಅವರು 'ಭಾರತ ನೀತಿ ವೇದಿಕೆ'ಗೆ ಸಲ್ಲಿಸಿರುವ ವರದಿಯಲ್ಲಿ, ಎಸ್‌ಬಿಐ ಬಿಟ್ಟು ಉಳಿದ ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಪ್ರಸ್ತಾವ ಇರಿಸಿದ್ದರು. ಈ ಪ್ರಸ್ತಾವವನ್ನೇ ನಿರ್ಧಾರ ಎಂಬುದಾಗಿ ತಪ್ಪಾಗಿ ವರದಿ ಮಾಡಲಾಗಿದೆ. ಖಾಸಗೀಕರಣದ ಬಗ್ಗೆ ಸರ್ಕಾರ ಈವರೆಗೆ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಕೇಂದ್ರ ಸಚಿವ ಭಾಗವತ್ ಕರಾಡ್ ಅವರು ಲೋಕಸಭೆಗೆ ತಿಳಿಸಿದ್ದರು. ಈ ಪ್ರಕ್ರಿಯೆ ಆರಂಭಿಸಬೇಕಾದರೆ, ಬ್ಯಾಂಕಿಂಗ್ ಕಾಯ್ದೆಗೆ ತಿದ್ದುಪಡಿ ತರಬೇಕಿದೆ ಎಂಬುದನ್ನು ಅವರು ಉಲ್ಲೇಖಿಸಿದ್ದರು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ವಿಶ್ವಾಮಿತ್ರ ಮಾದರಿ

ಏಸುಸಲ ತಪವಗೈದೇಸು ಬನ್ನಾವನಾಂತು |
ಕೌಶಿಕಂ ಬ್ರಹ್ಮರ್ಷಿಪದಕರ್ಹನಾದನ್ ? ||
ಘಾಸಿಪಡುತಿನ್ನೊಮ್ಮೆ ಮತ್ತೊಮ್ಮೆ ಮರಮರಳಿ |
ಲೇಸಾಗಿಸಾತ್ಮವನು – ಮಂಕುತಿಮ್ಮ || 699 ||

ಪದ-ಅರ್ಥ: ಏಸು = ಎಷ್ಟು, ತಪವಗೈದೇಸು = ತಪವ = ಗೈದು(ಮಾಡಿ) + ಏಸು, ಬನ್ನವನಾಂತು = ಬನ್ನವನು(ಭಂಗವನ್ನು, ಅವಮಾನವನ್ನು) + ಅಂತು(ಹೊಂದಿ), ಬ್ರಹ್ಮರ್ಷಿಪದಕರ್ಹನಾದನ್ = ಬ್ರಹ್ಮರ್ಷಿ + ಪದಕೆ(ಸ್ಥಾನಕ್ಕೆ)) + ಅರ್ಹನಾನ್, ಘಾಸಿಪಡುತಿನ್ನೊಮ್ಮೆ = ಘಾಸಿಪಡುತ + ಇನ್ನೊಮ್ಮೆ, ಲೇಸಾಗಿಸಾತ್ಮವನು = ಲೇಸಾಗಿಸು (ಒಳಿತಾಗಿಸು) + ಆತ್ಮವನು.

ವಾಚ್ಯಾರ್ಥ: ಎಷ್ಟು ಬಾರಿ ತಪಸ್ಸನ್ನು ಮಾಡಿ, ಎಷ್ಟು ಸೋಲು, ಅವಮಾನಗಳನ್ನು ಹೊಂದಿದರೂ ಕೌಶಿಕ ಬ್ರಹ್ಮರ್ಷಿ ಪದವಿಗೆ ಅರ್ಹನಾದನು. ಅದರಂತೆಯೇ ತೊಂದರೆಗಳನ್ನು ಅನುಭವಿಸುತ್ತಲೇ ಮತ್ತೆ ಮತ್ತೆ ಪ್ರಯತ್ನಿಸಿ ನಿನ್ನ ಆತ್ಮವನ್ನು ಉತ್ತಮವಾಗಿಸಿಕೋ.

ವಿವರಣೆ: ಭಾರತೀಯ ಆಧ್ಯಾತ್ಮ ಪರಂಪರೆಯಲ್ಲಿ ವಿಶ್ವಾಮಿತ್ರರ ಹೆಸರು ಒಂದು ಧ್ರುವತಾರೆ. ಒಳ್ಳೆಯ ಹಟಕ್ಕೆ, ಸಾಧನೆಗೆ, ಅವಿರತ ಪರಿಶ್ರಮಕ್ಕೆ ಶ್ರೇಷ್ಠ ಮಾದರಿ ವಿಶ್ವಾಮಿತ್ರರು. ಕೆಲವರು ವಿಶ್ವಾಮಿತ್ರರ ಬಗ್ಗೆ ಹಗುರವಾಗಿ ಮಾತನಾಡಿದಾಗ ನನಗೆ ತುಂಬ ದುಃಖವಾಗುತ್ತದೆ. ಅವರನ್ನು ನಾವು ಸರಿಯಾಗಿ ತಿಳಿಯಲಿಲ್ಲ ಎನ್ನಿಸುತ್ತದೆ. ವಶಿಷ್ಠರ ನಂದಿನಿಗೆ ಆಸೆಪಟ್ಟು ಅವರ ಮಕ್ಕಳನ್ನು ಕೊಂದು ಹಾಕಿದವ, ಆಸೆಗಾಗಿ ತ್ರಿಶಂಕುವಿಗೆ ಸ್ವರ್ಗ ಸೃಷ್ಟಿಮಾಡಿದವ, ಮೇನಕೆಯ ರೂಪಕ್ಕೆ ಮರುಳಾಗಿ ಸನ್ಯಾಸಧರ್ಮವನ್ನು ಮರೆತವ ಎಂದೆಲ್ಲ ಆಪಾದನೆ ಮಾಡುತ್ತೇವೆ. ಅದು ಸರಿಯಲ್ಲ. ಋಷಿ ಪರಂಪರೆಯಲ್ಲಿ ಸಪ್ತರ್ಷಿ ಪದವಿ ಅತ್ಯಂತ ದೊಡ್ಡದು. ವಿಶ್ವಾಮಿತ್ರರು ಈ ಮನ್ವಂತರದ ಸಪ್ತರ್ಷಿಗಳಲ್ಲಿ ಒಬ್ಬರು. ಅವರ ವ್ಯಕ್ತಿತ್ವ ಹಾಗೆ ದೋಷಯುಕ್ತವಾಗಿದ್ದರೆ ಸಪ್ತರ್ಷಿಗಳಲ್ಲಿ ಸೇರುವುದು ಸಾಧ್ಯವಿತ್ತೇ? ಹೌದು, ನಂದಿನಿಗೋಸ್ಕರ ವಶಿಷ್ಠರೊಂದಿಗೆ ಹೋರಾಡಿದ್ದು, ಅವರನ್ನು ದ್ವೇಷಿಸಿದ್ದು ತಪ್ಪು. ಆದರೆ ಆ ತಪ್ಪನ್ನು ತಕ್ಷಣ ತಿಳಿದುಕೊಂಡು, ಕ್ಷತ್ರಿಯ, ದೇಹಬಲಕ್ಕಿಂತ, ಬ್ರಹ್ಮಬಲ, ಆತ್ಮಬಲ ದೊಡ್ಡದೆಂದು ತಿಳಿದು ತಪಸ್ಸು ಮಾಡಿ ದೇವತೆಗಳನ್ನು ಒಲಿಸಿಕೊಂಡದ್ದು, ನಂತರ ಎಂದೆಂದೂ ವಶಿಷ್ಠರನ್ನು ದ್ವೇಷಿಸದಿರುವುದು, ಅವರ ಪುತ್ರಶೋಕ ನಿವಾರಣೆಗೆ ತನ್ನ ಐವತ್ತು ಮಕ್ಕಳನ್ನು ಬಲಿಕೊಟ್ಟದ್ದು ಅಸಾಮಾನ್ಯ ಕ್ರಿಯೆಯಲ್ಲವೆ? ತ್ರಿಶಂಕು ಸ್ವರ್ಗ ಪ್ರಸಂಗ ಒಂದು ಐತಿಹಾಸಿಕ ಅಗತ್ಯವಾಗಿತ್ತು. ಅದಕ್ಕೆ ಉಪಕರಣವಾದವರು ವಿಶ್ವಾಮಿತ್ರರು. ಅಲ್ಲಿ ಕೂಡ ವಶಿಷ್ಠರ ಮಾತು ನಡೆಯಲೆಂದೇ ಅಷ್ಟೊಂದು ಪರಿಶ್ರಮ, ಪ್ರಯತ್ನ. ಸರಿಯಾಗಿ ಗಮನಿಸಿದರೆ ವಿಶ್ವಾಮಿತ್ರರು ಮೇನಕೆಯ ದೇಹಸೌಂದರ್ಯಕ್ಕೆ ಮರುಳಾಗಿ ಪ್ರೇಮಪಾಶದಲ್ಲಿ ಕೊಚ್ಚಿ ಹೋದವರಲ್ಲ. ಮಹಾಭಾರತದ ಮಹಾವೃಕ್ಷಕ್ಕೆ ವಿಶ್ವಾಮಿತ್ರರು ಬೀಜರೂಪವಾಗಿ ಬರಬೇಕೆಂಬುದು ದೇವತೆಗಳ ತೀರ್ಮಾನವಾಗಿತ್ತು. ಅದು ಬರೀ ಕಾಮವಾಗಿದ್ದರೆ, ಶಕುಂತಲೆಯನ್ನು ಹಡೆದ ಮರುದಿನವೇ ಮೇನಕೆ ಮರಳಿ ಸ್ವರ್ಗಕ್ಕೆ ಹೋಗಿಬಿಡಲು ವಿಶ್ವಾಮಿತ್ರರು ಬಿಡುತ್ತಿದ್ದರೆ? ಶಕುಂತಲೆಯ ಮಗ ಭರತ, ಅವನಿಂದ ಮುಂದೆ ಭರತ ವಂಶ, ಮಹಾಭಾರತ ಕಥೆಯ ಪ್ರಾರಂಭ. ಮಹಾಭಾರತ ಮತ್ತು ರಾಮಾಯಣಗಳೆರಡರಲ್ಲೂ ಕಾಣುವ ತಪಸ್ವಿ ವಿಶ್ವಾಮಿತ್ರ. ಶ್ರೀರಾಮನನ್ನು ಎಲ್ಲರಿಗೂ ಕಾಣುವಂತೆ ಎತ್ತರದ ಸ್ಥಾನದಲ್ಲಿ ನಿಲ್ಲಿಸಿದ್ದು, ತನ್ನ ಸ್ವಂತ ಸೋದರಳಿಯ ಜಮದಗ್ನಿಯ ಮಗನಾದ ಪರಶುರಾಮನನ್ನು ಕೆಳಗಿಳಿಸಿ, ಶ್ರೀರಾಮನನ್ನು ಅವತಾರವೆಂದು ನಿಲ್ಲಿಸಿದ್ದು ವಿಶ್ವಾಮಿತ್ರ. ಕ್ರೌರ್ಯದ, ಹಿಂಸೆಯ ಮಾದರಿಯನ್ನು ಪಕ್ಕಕ್ಕೆ ಸರಿಸಿ, ಆದರ್ಶದ ರಾಮನ ಮಾದರಿಯನ್ನು ಸ್ಥಾಪಿಸಿದ್ದು ದೊಡ್ಡ ಕೆಲಸ. ಇದಕ್ಕಾಗಿ, ಸ್ವಾರ್ಥವಿಲ್ಲದೆ, ಮರಮರಳಿ ಶ್ರಮಿಸಿ, ನಡುವೆ ಆದ ಅವಮಾನಗಳನ್ನು ನುಂಗಿಕೊಂಡು ಕೌಶಿಕನೆಂಬ ರಾಜ ಬ್ರಹ್ಮರ್ಷಿಯಾದದ್ದು ಬಹುದೊಡ್ಡ ಅಧ್ಯಾಯ. ಕಗ್ಗ ಅದರಂತೆಯೇ ನಮ್ಮ ಆತ್ಮವನ್ನು ಬಲಪಡಿಸಿಕೊಳ್ಳಲು ಹೇಳುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಆಗಸ್ಟ್ 23, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಏಕಾದಶಿ ಗಂ. 06-08 ನಕ್ಷತ್ರ: ಆರ್ದ್ರಾ ಗಂ. 10-44 ಯೋಗ: ಸಿದ್ಧಿ(ಆಸ್ರಿಕ್) ಗಂ. 24-37, ಕರಣ: ಬಾಲವ ಗಂ. 06-08, ಸಿಂಹ ಮಾಸದ 06ನೇ ದಿನ. ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-22 ಸೂರ್ಯಾಸ್ತ : 06-44 , ಮುಸ್ಲಿಂ ದಿನಾಂಕ : 24 ಮೊಹರಮ್

ದಿನ ವಿಶೇಷ : ಅಜ ಏಕಾದಶಿ

ಅದೃಷ್ಟ ಸಂಖ್ಯೆ : 9, 10

ಮೇಷ: ಮಾನಸಿಕ ಒತ್ತಡ ಹೆಚ್ಚಿಸುವಂತಹ ಕೆಲಸವನ್ನು ಮಾಡುವವರಿಗೆ ಸಹಾಯಕನ ಅವಶ್ಯಕತೆ ಹೆಚ್ಚಾಗುವುದು. ಪಾಲುದಾರಿಕೆಯಲ್ಲಿ ಮೋಸ ಹೋಗುವ ಲಕ್ಷಣಗಳಿರುವುದರಿಂದ ಹೆಚ್ಚಿನ ಗಮನವಿರಲಿ.

ವೃಷಭ: ಇಷ್ಟ ವಸ್ತುಗಳ ಖರೀದಿಯಿಂದ ಅಧಿಕ ಹಣ ವ್ಯಯವಾಗುವುದು. ಅತಿ ಬುದ್ಧಿವಂತಿಕೆಯನ್ನು ಹೊಂದಿದ ಜನರಲ್ಲಿ ವ್ಯವಹಾರ ನಡೆಸಬೇಕಾಗುವುದರಿಂದ ಜಾಗ್ರತೆ ಇರಲಿ. ಪುಣ್ಯಕ್ಷೇತ್ರಗಳ ಭೇಟಿ, ದೇವಿ ದರ್ಶನ ಯೋಗವಿದೆ.

ಮಿಥುನ: ಲೆಕ್ಕ ಪತ್ರಗಳಿಲ್ಲದೇ ಕೇವಲ ನಂಬಿಕೆಯಲ್ಲಿ ಯಾವ ವ್ಯವಹಾರವನ್ನು ಮಾಡುವುದು ಸರಿಯಲ್ಲ. ಈ ದಿನ ನಿಮಗೆ ಕಾಡುವ ಸಮಸ್ಯೆಯಿಂದಾಗಿ ಮತ್ತು ಅಸಹಾಯಕ ಸ್ಥಿತಿಯಿಂದಾಗಿ ಯಾರಲ್ಲೂ ನಂಬಿಕೆ ಇಡದ ಪರಿಸ್ಥಿತಿ ಬರುವುದು.

ಕರ್ಕಾಟಕ: ಅವಿವಾಹಿತರಿಗೆ ಕಂಕಣಬಲಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಲಿದೆ. ಪ್ರೀತಿಯ ವಿಚಾರದಲ್ಲಿ ಗುಣಾತ್ಮಕ ಬೆಳವಣಿಗೆ ಅನುಭವಕ್ಕೆ ಬಂದೀತು. ಉದ್ಯಮದಲ್ಲಿ ಬಂಡವಾಳ ಹೂಡಲು ಈ ದಿನ ಸರಿಯಲ್ಲ.

ಸಿಂಹ: ಹಿಂದೆ ನಡೆದಿರುವ ವಿಚಾರದ ಬಗೆಗಿನ ಯೋಚನೆಗಿಂತ ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸುವುದು ಉತ್ತಮ. ಯಾವ ಕೆಲಸದಲ್ಲೂ ಅಡೆ ತಡೆಗಳೇನೂ ಇರದು.

ಕನ್ಯಾ: ಕಾರ್ಯರಂಗದಲ್ಲಿ ಉತ್ಸಾಹದ ಚಟುವಟಿಕೆಯಿಂದ ಹೆಚ್ಚಿನ ಸಂತೋಷ ಇರುವುದು. ನಿಮ್ಮ ಕಾರ್ಯಕ್ಷೇತ್ರದಲ್ಲಿ ದೂರ ಸಂಚಾರ ಹೆಚ್ಚಾಗಿದ್ದರೂ ಎಣಿಕೆಗೆ ಮೀರಿ ಧನಾಗಮವಿದೆ. ಕಾರ್ಯಗಳು ಸಿದ್ಧಿಸಲಿವೆ.

ತುಲಾ: ನಿಮ್ಮ ಮಾತಿಗೆ ಹೆಚ್ಚಿನ ಬೆಲೆ ಇದ್ದು, ಸಾಮಾಜಿಕವಾಗಿ ಮಾತನಾಡುವಾಗ ಮಾತಿನಲ್ಲಿ ಹಿಡಿತವಿರಲಿ, ಇನ್ನೊಬ್ಬರನ್ನು ಅಗೌರವಿಸಬೇಡಿ. ಅತಿಯಾದ ಸರಳತೆಯನ್ನು ಸಹಚರರು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇದೆ.

ವೃಶ್ಚಿಕ: ನೀವು ಕೈಗೊಂಡ ಸಂಸ್ಥೆಯ ಅಥವಾ ವೈಯಕ್ತಿಕ ಅಭಿವೃದ್ಧಿಯ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆದು ಹೋಗುವುದು. ಮಕ್ಕಳ ಆರೋಗ್ಯ ಉತ್ತಮವಾಗಿರುತ್ತದೆ. ಈಶ್ವರನ ಸೇವೆಯಿಂದ ಕಾರ್ಯಗಳು ಕೂಡಿ ಬರುವುವು.

ಧನು: ಇಂದು ಯಾವ ಉದ್ದೇಶದಲ್ಲಿಯೂ ಯಾರಿಗೂ ಸಾಲದ ರೂಪದಲ್ಲಿ ಹಣ ನೀಡಬೇಡಿ. ಸಿದ್ಧ ಉಡುಪುಗಳ ರಫ್ತು ವ್ಯಾಪಾರದಿಂದ ಹೇರಳ ಲಾಭವುಂಟಾಗುತ್ತದೆ. ನಿಮ್ಮ ಯೋಚನಾಬದ್ಧ ನಿರ್ಧಾರಕ್ಕೆ ತಕ್ಕ ಫಲ ಪಡೆಯುವಿರಿ.

ಮಕರ: ಪಾಲುದಾರಿಕೆ ವ್ಯವಹಾರದಲ್ಲಿ ಬುದ್ಧಿಶಕ್ತಿಯಿಂದ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ಇದ್ದಲ್ಲಿ ಮಾತ್ರ ಹೆಚ್ಚಿನ ಲಾಭವಾಗುವುದು. ಚಿಂತೆಗಳಿಗೆ ನೀವೇ ಆಶ್ರಯತಾಣರಾಗಬೇಡಿ ಜೀರ್ಣಾಂಗ ಸಮಸ್ಯೆ ಕಾಡಬಹುದು.

ಕುಂಭ: ನಿಮಗೆ ಗೊತ್ತಿಲ್ಲದ ವಿಷಯವನ್ನು ಗುರುಹಿರಿಯರ ಬಳಿ ಕೇಳಿ ತಿಳಿಯುವುದು ಅಗೌರವವೆಂದು ಭಾವಿಸಬೇಡಿ. ವಿದ್ಯಾರ್ಥಿಗಳಿಗೆ ಶುಭವಾಗುತ್ತದೆ. ಸಾಂಸಾರಿಕ ಸುಖದಲ್ಲಿ ಅಭಿವೃದ್ಧಿಯನ್ನು ಅಪೇಕ್ಷಿಸಬಹುದು.

ಮೀನ: ಉದ್ಯೋಗ ವ್ಯವಹಾರದಲ್ಲಿನ ತಲ್ಲೀನತೆಯು ಧನಾರ್ಜನೆಗೆ ಕಾರಣವಾಗುವುದು. ಹಣಕಾಸಿನ ವಿಚಾರದಲ್ಲಿ ದಾಕ್ಷಿಣ್ಯ ಸ್ವಭಾವ ಹೊಂದಿದರೆ ನಷ್ಟ. ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ತೃಪ್ತಿ ಸಿಗುವುದು.

ಪದಬಂಧ 5058


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಭಾವಚಿತ್ರವನ್ನು ತೆಗೆಯುವವನು (4)
3. ಈ ಪರಿ ಬಿಟ್ಟುಬಿಡುವಿಕೆ! (4)
5. ಕಾರಿನಲ್ಲಿ ಕುಳಿತಾಗ ಆಡಿದ ಬೇಟೆ (3)
6. ಬೀಜ ಬಿತ್ತಲು ಮಾಡಿರುವ ಮಡಿ (2)
7. ನೆನಪಲ್ಲೇ ಇರುವ ಕಾರಣ (2)
9. ವಿರಮಿಸುತ್ತಿದ್ದಾಗ ಮೂಡಿದ ಸೂರ್ಯ (2)
11. ಏಳು ದಿನಗಳ ಅವಧಿ (2)
12. ಗ್ರಂಥದ ಮೂಲಪ್ರತಿ (3)
14. ಒಳ್ಳೆಯ ಶಿಕ್ಷಣ ಪಡೆದವನು (4)
15. ಬೆನ್ನೆಲುಬಿರುವ ಪ್ರಾಣಿ (4)

ಮೇಲಿಂದ ಕೆಳಕ್ಕೆ

1. ಅಚ್ಚು ಮಾಡುವ ಸ್ಥಳ (4)
2. ಹಿತಚಿಂತಕನನ್ನು ಹೀಗೆನ್ನಿ (3)
3. ಈ ಪರಿ ಓಡಿ ಹೋಗುವಿಕೆ! (3)
4. ಗರ ಬಡಿದಂತಿರುವ ಪತಿವ್ರತೆ (3)
6. ಭಾಗಸ್ಥ ಇಲ್ಲಿದ್ದಾನೆ (4)
8. ಈ ಪರಿ ಕರದಲ್ಲಿ ಹಿಡಿದ ಸಾಮಾನು (4)
10. ಈ ಡಿಸ್ಟ್ರಿಬ್ಯೂಟರ್ ಕನ್ನಡಿಗ! (4)
11. ವಾರದ ಮೊದಲೇ ದೊರೆತಿರುವ ಒಡೆತನ! (3)
12. ಆನೆಯನ್ನು ನಡೆಸುವವನು (3)
13. ದುಷ್ಟ ಇಲ್ಲಿದ್ದಾನೆ (3)



5057ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಭಾರೆ 5.ಬಡನಡು 7.ಪಲ್ಲವಿ 9.ಮಸಣ 10.ಜ್ಞಾತಿಕಲಹ 11.ಪಾವನ 12.ತ್ವರಿತ 14.ಪರಿತೋಷ 17.ಹಸೆಮಣೆ

ಮೇಲಿಂದ ಕೆಳಕ್ಕೆ: 1.ಪರಿತಾಪ 2.ರೆಪ್ಪೆ 3.ಬಿಂಬ 4.ಕಡುಜಾಣ 6.ಏಕೀಕರಣ 8.ವಿಜ್ಞಾನ 9.ಮಹತ್ವ 11.ಪಾರುಪತ್ಯ 13.ತವದೊಣೆ 15.ಷಷ್ಠಿ 16.ದಾಹ

ಸುಡೊಕು 5444

7		5	9					
					2		9	
2		9	3	7		5		4
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5443 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ರಸ್ತೆ ಅಪಘಾತ: 5 ಸಾವಿರಕ್ಕೂ ಹೆಚ್ಚು ಸಾವು

ನವದೆಹಲಿ (ಪಿಟಿಐ): '2018–20ರ ಅವಧಿಯಲ್ಲಿ ರಸ್ತೆಗಳ‌ಲ್ಲಿನ ಗುಂಡಿಗಳಿಂದಾಗಿ ಅಪಘಾತಕ್ಕೀಡಾಗಿ 5,626 ಜನರು ಸಾವಿಗೀಡಾಗಿದ್ದಾರೆ' ಎಂದು ಕೇಂದ್ರ ಸರ್ಕಾರದ ಅಂಕಿಅಂಶಗಳು ತಿಳಿಸಿವೆ.

ವಿದ್ಯುತ್ ಕಂಪನಿಗಳ ಖಾಸಗೀಕರಣ ಕೈಬಿಡಲು ಪಟ್ಟು • ಕನಿಷ್ಠ ಬೆಂಬಲ ಬೆಲೆ ನಿಗದಿಗೆ ಆಗ್ರಹ

ಕೇಂದ್ರ ಸರ್ಕಾರದ ವಿರುದ್ಧ ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದ್ಯುತ್ ಕಂಪನಿಗಳ ಖಾಸಗೀಕರಣ ಕೈಬಿಡಬೇಕು, ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ರೈತರು ಜಂತರ್ ಮಂತರ್‌ನಲ್ಲಿ ಸೋಮವಾರ 'ಮಹಾ ಪಂಚಾಯತ್ ಧರಣಿ' ನಡೆಸಿದರು.

ಕೇಂದ್ರ ಸರ್ಕಾರದ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದರು. ಧರಣಿ ಸ್ಥಳಕ್ಕೆ ರೈತರನ್ನು ಪೊಲೀಸರು ಬರಲು ಬಿಡಲಿಲ್ಲ ಎಂದು ರೈತ ಮುಖಂಡರು ಆರೋಪಿಸಿದರು. ಈ ವಿಚಾರವಾಗಿ ರೈತರು ಹಾಗೂ ದೆಹಲಿ ಪೊಲೀಸರ ನಡುವೆ ಜಟಾಪಟಿ ನಡೆಯಿತು. ಪ್ರತಿಭಟನೆಯಿಂದಾಗಿ ನಗರದಲ್ಲಿ, ಸಿಂಘು ಗಡಿ, ಗಾಜಿಪುರ ಗಡಿಯಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಸಂಯುಕ್ತ ಕಿಸಾನ್ ಮೋರ್ಚಾ ಕರ್ನಾಟಕ ಘಟಕದ ಮುಖ್ಯಸ್ಥ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಕರ್ನಾಟಕದಿಂದ ನೂರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಪಂಜಾಬ್, ಉತ್ತರ ಪ್ರದೇಶ, ಹರಿಯಾಣ, ಮಹಾರಾಷ್ಟ್ರ, ಒಡಿಶಾ, ಕೇರಳ ಮೊದಲಾದ ರಾಜ್ಯಗಳಿಂದ ರೈತರು ಪ್ರತಿಭಟನೆಯಲ್ಲಿ ಭಾಗಿಯಾದರು. ಬಳಿಕ ರೈತ ಮುಖಂಡರು ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಿದರು.

'ಒಂದು ಸಾವಿರಕ್ಕಿಂತ ಹೆಚ್ಚು ರೈತರು ಪ್ರತಿಭಟನೆ ನಡೆಸಲು ಅವಕಾಶ ಇಲ್ಲ ಎಂದು ದೆಹಲಿ ಪೊಲೀಸರು ಷರತ್ತು ಹಾಕಿದರು. ಆದರೆ, ಪೊಲೀಸರ ಅಡ್ಡಿಯ ನಡುವೆಯೂ ಬೇರೆ ಬೇರೆ ರಾಜ್ಯಗಳಿಂದ ಸಾವಿರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡರು' ಎಂದು ಕುರುಬೂರು ಹೇಳಿದರು.

'ನಾನು ಒಂದು ಎಕರೆ ಕೃಷಿ ಭೂಮಿ ಹೊಂದಿದ್ದೇನೆ. ನಾನು ಬಡ ರೈತ. ಕಳೆದ ವರ್ಷ ನಡೆದ ರೈತರ ಹೋರಾಟದಲ್ಲಿ ಭಾಗಿಯಾಗಿದ್ದೆ. ನಮ್ಮ ಬೇಡಿಕೆಗಳನ್ನು ಈಡೇರಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ, ಯಾವುದೇ ಭರವಸೆಯನ್ನು ಈಡೇರಿಸಿಲ್ಲ. ಮತ್ತೊಂದು ಸುತ್ತಿನ ಹೋರಾಟ ನಡೆಸಲು ಸಜ್ಜಾಗಿದ್ದೇವೆ' ಎಂದು ಪಂಜಾಬ್ ರೈತ ಮಘಾ ನಿಬೋರಿ ತಿಳಿಸಿದರು.

'ಜಂತರ್ ಮಂತರ್‌ನಲ್ಲಿ ಇಡೀ ದಿನ ಶಾಂತಿಯುತ ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದೆವು. ಆದರೆ, ಧರಣಿ ನಡೆಸಲು ಪೊಲೀಸರು ಅವಕಾಶ ನೀಡಲಿಲ್ಲ. ನಗರದೊಳಗೆ ಬರದಂತೆ ಸಾವಿರಾರು ರೈತರನ್ನು ತಡೆದರು. ಕೇಂದ್ರ ಸರ್ಕಾರದ ಅಣತಿಯಂತೆ ಪೊಲೀಸರು ನಡೆದುಕೊಳ್ಳುತ್ತಿದ್ದಾರೆ' ಎಂದು ರೈತ ಮುಖಂಡ ಅಭಿಮನ್ಯು ಸಿಂಗ್ ಕೊಹರ್ ಅವರು ದೂರಿದರು.



ದೆಹಲಿಯಲ್ಲಿ ನಡೆದ ಧರಣಿಯಲ್ಲಿ ಪಾಲ್ಗೊಂಡ ಕರ್ನಾಟಕದ ರೈತರು

ರೈತರ ಪ್ರಮುಖ ಬೇಡಿಕೆಗಳು

- ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು.
- ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು.
- ಡಾ.ಸ್ವಾಮಿನಾಥನ್ ವರದಿಯಂತೆ ಬೆಂಬಲ ಬೆಲೆ ನಿಗದಿಪಡಿಸಬೇಕು.
- ಕಬ್ಬಿನ ಎಫ್‌ಆರ್‌ಪಿ ದರ ಪುನರ್ ಪರಿಶೀಲನೆ ನಡೆಸಿ ವೈಜ್ಞಾನಿಕ ದರ ನೀಡಬೇಕು.
- ಕೃಷಿ ಉತ್ಪನ್ನಗಳ ಹಾಗೂ ಉಪಕರಣಗಳ ಮೇಲಿನ ಜಿಎಸ್‌ಟಿ ರದ್ದುಪಡಿಸಬೇಕು.
- ರೈತರ ಸಾಲ ಮನ್ನಾ ಮಾಡಬೇಕು.
- ಕಳೆದ ವರ್ಷ ರೈತ ಹೋರಾಟದ ವೇಳೆ 750 ರೈತರು ಮೃತಪಟ್ಟಿದ್ದು, ಅವರ ಕುಟುಂಬ ಸದಸ್ಯರಿಗೆ ಪರಿಹಾರ ನೀಡಬೇಕು.

ಅಮಿತ್ ಶಾಗೆ ಚಪ್ಪಲಿ ಎತ್ತಿಕೊಟ್ಟ ಬಿಜೆಪಿ ಮುಖಂಡ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಬಿಜೆಪಿಯ ತೆಲಂಗಾಣ ಘಟಕದ ಅಧ್ಯಕ್ಷ ಬಂಡಿ ಸಂಜಯ್ ಅವರು ಕೇಂದ್ರ ಗೃಹಸಚಿವ ಅಮಿತ್ ಶಾ ಅವರಿಗೆ ಚಪ್ಪಲಿಗಳನ್ನು ಎತ್ತಿಕೊಡುವ ದೃಶ್ಯವಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಸೋಮವಾರ ವೈರಲ್ ಆಗಿದೆ.


ಬಂಡಿ ಸಂಜಯ್

ಅಮಿತ್ ಶಾ ಅವರು ಸಿಕಂದರಾಬಾದ್‌ನ ಉಜ್ಜೈನಿ ಮಹಾಂಕಾಳಿ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿ, ಹೊರಬಂದಾಗ ಅವರ ಚಪ್ಪಲಿಗಳನ್ನು ಸಂಸದರೂ ಆಗಿರುವ ಬಂಡಿ ಸಂಜಯ್ ಅವರು ಹುಡುಕಿ ಎತ್ತಿಕೊಡುತ್ತಿರುವ ದೃಶ್ಯ ವಿಡಿಯೊದಲ್ಲಿ ದಾಖಲಾಗಿದೆ.

ಸಂಜಯ್ ಅವರನ್ನು 'ದೆಹಲಿ ಮತ್ತು ಗುಜರಾತ್‌ನ ನಾಯಕರ ಗುಲಾಮ' ಎಂದು ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಮತ್ತು ಕಾಂಗ್ರೆಸ್ ಪಕ್ಷಗಳು ಕರೆದಿವೆ. ಅಲ್ಲದೆ ತೆಲಂಗಾಣದ ಸ್ವಾಭಿಮಾನವನ್ನು ರಕ್ಷಿಸಬೇಕು ಎಂದೂ ಕರೆ ನೀಡಿವೆ.

'ದೆಹಲಿಯ ಬೂಟುಗಳನ್ನು ಎತ್ತಿಕೊಂಡಿರುವ ಗುಜರಾತಿಗಳ ಗುಲಾಮರನ್ನು ಮತ್ತು ದೆಹಲಿ ನಾಯಕರ ವಿರುದ್ಧ ಹೋರಾಡುವ ನಾಯಕನನ್ನು ರಾಜ್ಯದ ಜನರು ಗಮನಿಸುತ್ತಿದ್ದಾರೆ' ಎಂದು ಟಿಆರ್‌ಎಸ್‌ನ ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್ ಅವರು ಟ್ವೀಟ್ ಮಾಡಿದ್ದಾರೆ.

'ಚಪ್ಪಲಿಗಳನ್ನು ಎತ್ತಿಕೊಡುವ ವೇಗ ಮತ್ತು ಶ್ರದ್ಧೆಯನ್ನು ಗಮನಿಸಿದರೆ ನಾಳೆ ಬಿಜೆಪಿಯು ನಮ್ಮ ರಾಜ್ಯವನ್ನು ಅಮಿತ್ ಶಾ ಅವರ ಪಾದದಲ್ಲಿರಿಸಲಿದೆ. ಎಚ್ಚರದಿಂದಿರು ತೆಲಂಗಾಣ' ಎಂದು ಟಿಆರ್‌ಎಸ್ ಮುಖಂಡ ಎಂ.ಕ್ರಿಶಾಂಕ್ ಟ್ವೀಟ್ ಮಾಡಿದ್ದಾರೆ.

ಜೂನಿಯರ್ ಎನ್‌ಟಿಆರ್‌ಗೆ ಶಾ ಆಹ್ವಾನ

ತೆಲಂಗಾಣಕ್ಕೆ ಭಾನುವಾರ ಭೇಟಿ ನೀಡಿದ್ದ ಅಮಿತ್ ಶಾ ಅವರು ಟಾಲಿವುಡ್ ನಟ ಜೂನಿಯರ್ ಎನ್‌ಟಿಆರ್ ಅವರನ್ನು ಭೇಟಿಯಾಗಿ ಮಹತ್ವದ ಮಾತುಕತೆ ನಡೆಸಿರುವುದು, ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ.

ಶಾ ಅವರು ಜೂನಿಯರ್ ಎನ್‌ಟಿಆರ್ ಅವರಿಗೆ ರಾಜಕಾರಣಕ್ಕೆ ಬರುವಂತೆ ಆಹ್ವಾನ ನೀಡಿದ್ದಾರೆ. ಇದು ಕಾರ್ಯಗತವಾದರೆ ಆಂಧ್ರಪ್ರದೇಶ,ತೆಲಂಗಾಣದಲ್ಲಿನ ರಾಜಕೀಯ ಸಮೀಕರಣ ಬದಲಾಯಿಸಬಹುದು ಎನ್ನುವುದು ಶಾ ಲೆಕ್ಕಾಚಾರ.

ಪರಸ್ಪರ ಸಂವಾದ ನಡೆಸಿರುವುದು ಖುಷಿ ಕೊಟ್ಟಿದೆ ಎಂದು ಶಾ ಮತ್ತು ಜೂನಿಯರ್ ಎನ್‌ಟಿಆರ್ ಟ್ವೀಟ್ ಮಾಡಿದ್ದಾರೆ.

'ಎಎಪಿ ಒಡೆದರೆ ಪ್ರಕರಣ ರದ್ದು'

ಒಂದನೇ ಪುಟದಿಂದ

'ಎಎಪಿ ಒಡೆಯಲು ಹೇಳಿದ ಬಿಜೆಪಿಗೆ ನಾನು ಸರಿಯಾದ ಉತ್ತರ ಕೊಟ್ಟಿದ್ದೇನೆ. ನಾನು ರಜಪೂತ, ಮಹಾರಾಣಾ ಪ್ರತಾಪನ ವಂಶಸ್ಥ. ತಲೆ ಕತ್ತರಿಸಿಕೊಳ್ಳಲು ಸಿದ್ಧನೇ ಹೊರತು ಪಿತೂರಿಗಾರರು ಮತ್ತು ಭ್ರಷ್ಟರ ಮುಂದೆ ತಲೆಬಾಗುವುದಿಲ್ಲ. ನನ್ನ ವಿರುದ್ಧದ ಎಲ್ಲ ಪ್ರಕರಣಗಳೂ ಸುಳ್ಳು. ನಿಮಗೆ ಏನು ಬೇಕೋ ಮಾಡಿಕೊಳ್ಳಿ' ಎಂದು ಸಿಸೋಡಿಯಾ ಸವಾಲು ಹಾಕಿದ್ದಾರೆ.

'ಕೇಜ್ರಿವಾಲ್ ಅವರು ನನ್ನ ರಾಜಕೀಯ ಗುರು. ಅವರಿಂದ ರಾಜಕೀಯ ಕಲಿತಿದ್ದೇನೆ. ನಾನು ರಾಜಕೀಯಕ್ಕೆ ಬಂದಿರುವುದು ಮುಖ್ಯಮಂತ್ರಿ ಅಥವಾ ಪ್ರಧಾನಿ ಆಗುವುದಕ್ಕಲ್ಲ' ಎಂದೂ ಅವರು ಹೇಳಿದ್ದಾರೆ.

ಮಹಾರಾಣಾ ಪ್ರತಾಪನ ವಂಶಸ್ಥ ಎಂದು ಹೇಳಿದ್ದಕ್ಕೆ ತಿವಾರಿ ಪ್ರತಿಕ್ರಿಯೆ ನೀಡಿದ್ದಾರೆ. 'ಮಹಾರಾಣಾ ಪ್ರತಾಪನು ಜನರು ಮದ್ಯ ಕುಡಿಯುವಂತೆ ಮಾಡಿದ್ದನೇ? ಮೂಲೆ ಮೂಲೆಯಲ್ಲಿ ನೀವು ಮದ್ಯ ಮಾರುತ್ತಿದ್ದೀರಿ. ದೆಹಲಿಯ ಮಹಿಳೆಯರ ಕೂಗನ್ನು ನೀವು ಕೇಳಿಸಿಕೊಳ್ಳುತ್ತಿಲ್ಲ. ಮಹಾರಾಣಾ ಪ್ರತಾಪ ಮಹಿಳೆಯರಿಗಾಗಿ ಒಮ್ಮೆ ಆಯುಧ ಕೈಗೆತ್ತಿಕೊಂಡಿದ್ದ. ಭ್ರಷ್ಟಾಚಾರ ಪ್ರಕರಣ ಎದುರಿಸುತ್ತಿರುವವರನ್ನು ಮಹಾರಾಣಾ ಪ್ರತಾಪನ ಜತೆ ಹೋಲಿಸಲು ಸಾಧ್ಯವೇ? ಇಂತಹ ಭ್ರಷ್ಟರು ಎಎಪಿಯಲ್ಲಿ ಮಾತ್ರ ಇರಲು ಸಾಧ್ಯ' ಎಂದು ಅವರು ಟೀಕಿಸಿದ್ದಾರೆ.

ಪ್ರತಿಸ್ಪರ್ಧಿ ಪಕ್ಷಗಳ ಮುಖಂಡರ ಮೇಲೆ ತನಿಖಾ ಸಂಸ್ಥೆಗಳ ಮೂಲಕ ಒತ್ತಡ ಹೇರಿ, ಅವರನ್ನು ಪಕ್ಷಕ್ಕೆ ಸೇರಿಸಿಕೊಂಡ ಉದಾಹರಣೆಗಳು ಮೂರು ಡಜನ್‌ಗೂ ಹೆಚ್ಚು ಇವೆ. ಇಂತಹ ಮುಖಂಡರ ಮೇಲೆ ದಾಖಲಾಗಿದ್ದ ಪ್ರಕರಣಗಳು ಅವರು ಬಿಜೆಪಿ ಸೇರಿದ ಮೇಲೆ ರದ್ದಾಗುತ್ತವೆ ಎಂದು ಎಎಪಿ ವಕ್ತಾರ ಸೌರಭ್ ಭಾರದ್ವಾಜ್ ಹೇಳಿದ್ದಾರೆ.

ತಮ್ಮ ಮೊಬೈಲ್ ಅನ್ನು ಸಿಬಿಐ ವಶಕ್ಕೆ ಪಡೆದಿದೆ ಎಂದು ಸಿಸೋಡಿಯಾ ಹೇಳಿದ್ದಾರೆ. ಹಾಗಿದ್ದರೆ ಸಿಸೋಡಿಯಾ ಅವರು ಯಾವ ಮೊಬೈಲ್‌ನಲ್ಲಿ ಮಾತನಾಡಿದರು? ಅವರಿಗೆ ಬಿಜೆಪಿಯ ಸಂದೇಶ ತಲುಪಿಸಿದ ವ್ಯಕ್ತಿ ಯಾರು ಎಂಬುದನ್ನು ಬಹಿರಂಗಪಡಿಸಬೇಕು ಎಂದು ಮನೋಜ್ ತಿವಾರಿ ಹೇಳಿದ್ದಾರೆ. ತಮಗೆ ಸಂದೇಶ ನೀಡಿದವರು ಯಾರು ಎಂಬುದನ್ನು ಸಿಸೋಡಿಯಾ ಬಹಿರಂಗಪಡಿಸಿಲ್ಲ.

ಬಿಜೆಪಿ ಮುಖಂಡರ ಮೇಲೆ ಮಾನನಷ್ಟ ಮೊಕದ್ದಮೆ: ಕವಿತಾ

ಹೈದರಾಬಾದ್ (ಪಿಟಿಐ): ದೆಹಲಿ ಅಬಕಾರಿ ನೀತಿ ಜಾರಿಯಲ್ಲಿ ಅವ್ಯವಹಾರ ಆರೋಪದ ಪ್ರಕರಣದಲ್ಲಿ ತಮ್ಮ ಮತ್ತು ತಮ್ಮ ಕುಟುಂಬದ ಹೆಸರು ಎಳೆದು ತಂದಿರುವುದಕ್ಕೆ ಟಿಆರ್‌ಎಸ್ ನಾಯಕಿ ಕವಿತಾ ಕಲ್ವಕುಂಟ್ಲ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮದ್ಯ ಮಾಫಿಯಾ ಮತ್ತು ಎಎಪಿ ಸರ್ಕಾರದ ನಡುವೆ 'ಮಧ್ಯವರ್ತಿ'ಯಾಗಿ ಕವಿತಾ ಕೆಲಸ ಮಾಡಿದ್ದಾರೆ ಎಂದು ಬಿಜೆಪಿ ಮುಖಂಡರು ಹೇಳಿದ್ದರು.

ಬಿಜೆಪಿ ಮುಖಂಡರು ಮಾಡಿರುವ ಆರೋಪ ಆಧಾರರಹಿತ. ಹಾಗಾಗಿ, ಬಿಜೆಪಿ ಸಂಸದ ಪರ್ವೇಶ್ ವರ್ಮಾ ಮತ್ತು ಪಕ್ಷದ ಮುಖಂಡ ಮಂಜಿಂದರ್ ಸಿಂಗ್ ಸಿರ್ಸಾ ಅವರ ಮೇಲೆ ಮಾನನಷ್ಟ ಪ್ರಕರಣ ದಾಖಲಿಸುವುದಾಗಿ ಕವಿತಾ ಅವರು ಹೇಳಿದ್ದಾರೆ. ಕವಿತಾ ಅವರು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಮಗಳು. ಕೆಸಿಆರ್ ಅವರು ಕೇಂದ್ರ ಸರ್ಕಾರದ ಟೀಕಾಕಾರರು. ಹಾಗಾಗಿಯೇ ತಮ್ಮ ಕುಟುಂಬದ ತೇಜೋವಧೆಗೆ ಬಿಜೆಪಿ ಯತ್ನಿಸಿದೆ ಎಂದು ಕವಿತಾ ಹೇಳಿದ್ದಾರೆ.

ಅಬಕಾರಿ ನೀತಿ ಜಾರಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದ ಬಗ್ಗೆ ಕೇಜ್ರಿವಾಲ್ ಮೌನ ತಾಳಿರುವುದು ಅವರು ಅಪ್ರಾಮಾಣಿಕ ಎಂಬುದನ್ನು ಸಾಬೀತು ಮಾಡಿದೆ
ಗೌರವ್ ಭಾಟಿಯಾ
ಬಿಜೆಪಿ ವಕ್ತಾರ

2024ರ ಚುನಾವಣೆಗೆ ಬಿಜೆಪಿ ಈಗಲೇ ಸಿದ್ಧವಾಗುತ್ತಿರುವುದು ಏಕೆ? ವಿರೋಧ ಪಕ್ಷಗಳ ನಾಯಕರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳಲಾಗುತ್ತಿದೆ
ಅಖಿಲೇಶ್ ಯಾದವ್
ಎಸ್‌ಪಿ ಮುಖ್ಯಸ್ಥ

ಶಿಕ್ಷಣದ ಗುಣಮಟ್ಟ ಹೆಚ್ಚಿಸಿದ ಕೆಲಸಕ್ಕಾಗಿ ಸಿಸೋಡಿಯಾಗೆ 'ಭಾರತರತ್ನ' ನೀಡಬೇಕಿತ್ತು. ರಾಜಕೀಯ ಉದ್ದೇಶಕ್ಕಾಗಿ ಅವರ ಮೇಲೆ ಕೇಂದ್ರ ಎರಗುತ್ತಿದೆ
ಅರವಿಂದ ಕೇಜ್ರಿವಾಲ್
ದೆಹಲಿ ಮುಖ್ಯಮಂತ್ರಿ

ಸತ್ಯೇಂದ್ರ ಜೈನ್‌ಗೆ ಪದ್ಮಭೂಷಣ, ಮನೀಷ್ ಸಿಸೋಡಿಯಾಗೆ ಭಾರತರತ್ನ, ಅವರಿಗೆ (ಕೇಜ್ರಿವಾಲ್) ನೊಬೆಲ್ ಪ್ರಶಸ್ತಿ. ಅರಾಜಕ ಪಕ್ಷವೇ, ಬಹಳ ಚೆನ್ನಾಗಿದೆ
ಬಿ.ಎಲ್. ಸಂತೋಷ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ)

'ಶಿಕ್ಷಣ, ಆರೋಗ್ಯ ಸೇವೆ ಉಚಿತ'

ಅಹಮದಾಬಾದ್ (ಪಿಟಿಐ): ಎಎಪಿ ಅಧಿಕಾರಕ್ಕೆ ಬಂದರೆ, ದೆಹಲಿಯಲ್ಲಿ ಇರುವ ಹಾಗೆಯೇ ಗುಜರಾತ್‌ನಲ್ಲಿ ಕೂಡ ಗುಣಮಟ್ಟದ ಶಿಕ್ಷಣ ಮತ್ತು ಉತ್ತಮ ಆರೋಗ್ಯ ಸೇವೆಯನ್ನು ಉಚಿತವಾಗಿ ನೀಡಲಾಗುವುದು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಸೋಮವಾರ ಭರವಸೆ ಕೊಟ್ಟಿದ್ದಾರೆ.

ಗುಣಮಟ್ಟದ ಶಿಕ್ಷಣವು ಗುಜರಾತ್‌ನ ಪ್ರತಿ ಮಗುವಿನ ಹಕ್ಕು. ಗ್ರಾಮದಲ್ಲಿ ಇರಲಿ ಅಥವಾ ನಗರದಲ್ಲಿರಲಿ, ಸರ್ಕಾರಿ ಶಾಲೆಯಲ್ಲಿ ಕಲಿಯಲಿ ಅಥವಾ ಖಾಸಗಿ ಶಾಲೆಯಲ್ಲಿ ಕಲಿಯಲಿ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂದು ಸಿಸೋಡಿಯಾ ಹೇಳಿದ್ದಾರೆ. ದೆಹಲಿಯ ಶಿಕ್ಷಣ ಇಲಾಖೆಯನ್ನು ಅವರು ನೋಡಿಕೊಳ್ಳುತ್ತಿದ್ದಾರೆ.

ಅಧಿಕಾರಕ್ಕೆ ಬಂದರೆ ಗ್ರಾಮಗಳು ಮತ್ತು ವಾರ್ಡ್ ಮಟ್ಟದಲ್ಲಿ ಮೊಹಲ್ಲಾ ಕ್ಲಿನಿಕ್ ಸ್ಥಾಪಿಸಲಾಗುವುದು. ಸರ್ಕಾರಿ ಆಸ್ಪತ್ರೆಗಳ ಮೂಲಸೌಕರ್ಯ ಹೆಚ್ಚಿಸಿ, ಖಾಸಗಿ ಆಸ್ಪತ್ರೆಗೆ ಪೈಪೋಟಿ ಒಡ್ಡಲಾಗುವುದು ಎಂದು ಅರವಿಂದ ಕೇಜ್ರಿವಾಲ್ ಅವರು ಮಾಧ್ಯಮ ಗೋಷ್ಠಿಯಲ್ಲಿ ಹೇಳಿದ್ದಾರೆ.

ಹುತಾತ್ಮ ಸೈನಿಕರ ಕುಟುಂಬಕ್ಕೆ ನೀಡುವ ಪರಿಹಾರದ ಮೊತ್ತವನ್ನು ₹1 ಲಕ್ಷದಿಂದ ₹1 ಕೋಟಿಗೆ ಹೆಚ್ಚಿಸಲಾಗುವುದು ಎಂದು ಗುಜರಾತ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಮಾಜಿ ಸೈನಿಕರಿಗೆ ಎರಡು ತಿಂಗಳ ಹಿಂದೆ ಭರವಸೆ ಕೊಟ್ಟಿದ್ದೆ. ಗುಜರಾತ್ ಸರ್ಕಾರವು ಈಗ ಪರಿಹಾರವನ್ನು ₹1 ಕೋಟಿಗೆ ಹೆಚ್ಚಿಸಿದೆ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಕೇಜ್ರಿವಾಲ್ ಅವರು ಇತ್ತೀಚಿನ ದಿನಗಳಲ್ಲಿ ಹಲವು ಬಾರಿ ಗುಜರಾತ್‌ಗೆ ಭೇಟಿ ಕೊಟ್ಟಿದ್ದಾರೆ. ಪ್ರತಿ ಮನೆಗೆ ತಿಂಗಳಿಗೆ 300 ಯೂನಿಟ್ ವರೆಗೆ ಉಚಿತ ವಿದ್ಯುತ್, ನಿರುದ್ಯೋಗಿಗಳಿಗೆ ತಿಂಗಳಿಗೆ ₹3,000 ಭತ್ಯೆ ಮುಂತಾದ ಭರವಸೆಗಳನ್ನೂ ಅವರು ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ತವರು ರಾಜ್ಯ ಗುಜರಾತ್‌ನ ವಿಧಾನಸಭೆಗೆ ಈ ವರ್ಷದ ಕೊನೆಯಲ್ಲಿ ಚುನಾವಣೆ ನಡೆಯಲಿದೆ. ಕೇಜ್ರಿವಾಲ್ ನೇತೃತ್ವದ ಎಎಪಿ ಈ ರಾಜ್ಯದ ಮೇಲೆ ಗಮನ ನೆಟ್ಟಿದೆ.

'ಜೆಎನ್‌ಯು ಕುಲಪತಿ ಇನ್ಮುಂದೆ ಕುಲಗುರು'

ನವದೆಹಲಿ (ಪಿಟಿಐ):- ಜೆಎನ್‌ಯು ಕುಲಪತಿಯ ಉಲ್ಲೇಖವನ್ನು ಕುಲಪತಿ ಬದಲು 'ಕುಲಗುರು' ಎಂದು ಬದಲಾಯಿಸಬಹುದು ಎಂದು ಜೆಎನ್‌ಯು ಕುಲಪತಿ ಶಾಂತಿಶ್ರೀ ಧೂಳಿಪುಡಿ ಪಂಡಿತ್ ಸೋಮವಾರ ಹೇಳಿದ್ದಾರೆ.

ಡಾ. ಬಿ.ಆರ್. ಅಂಬೇಡ್ಕರ್ ಉಪನ್ಯಾಸ ಸರಣಿಯಲ್ಲಿ ಮಾತನಾಡಿದ ಅವರು, ಕುಲಗುರು ಎಂದು ಬದಲಾಯಿಸುವ ಮೂಲಕ 'ಲಿಂಗ ತಟಸ್ಥತೆ' ತರಲು ಉದ್ದೇಶಿಸಲಾಗಿದೆ ಎಂದು ಹೇಳಿದರು. ಸೆ.14 ರಂದು ನಡೆಯುವ ಕಾರ್ಯಕಾರಿ ಮಂಡಳಿಯಲ್ಲಿ ಈ ಬಗ್ಗೆ ಚರ್ಚಿಸಲಾಗುತ್ತದೆ. ಕುಲಪತಿಯನ್ನು ಕುಲಗುರು ಎಂದು ಬದಲಾಯಿಸುತ್ತೇವೆ' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಪಾನ್ಸರೆ ಹತ್ಯೆ: ದಾಖಲೆ ಎಟಿಎಸ್‌ಗೆ ಸಲ್ಲಿಕೆ

ಮುಂಬೈ (ಪಿಟಿಐ): ಹೋರಾಟಗಾರ ಗೋವಿಂದ ಪಾನ್ಸರೆ ಅವರ ಹತ್ಯೆಗೆ ಸಂಬಂಧಿಸಿದ ದಾಖಲೆಗಳನ್ನು ಮಹಾರಾಷ್ಟ್ರ ಅಪರಾಧ ತನಿಖಾ ಇಲಾಖೆ ರಾಜ್ಯ ಭಯೋತ್ಪಾದನಾ ನಿಗ್ರಹ ದಳಕ್ಕೆ (ಎಟಿಎಸ್) ಹಸ್ತಾಂತರಿಸಿದೆ ಎಂದು ಎಟಿಎಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಈ ತಿಂಗಳ ಆರಂಭದಲ್ಲಿ ಬಾಂಬೆ ಹೈಕೋರ್ಟ್ ಪ್ರಕರಣದ ತನಿಖೆಯನ್ನು ಎಟಿಎಸ್‌ಗೆ ವರ್ಗಾಯಿಸಿತ್ತು.

ಪದ್ಮ ಪುರಸ್ಕಾರ: ನಾಮನಿರ್ದೇಶನ ಅವಧಿ ವಿಸ್ತರಣೆ

ನವದೆಹಲಿ(ಪಿಟಿಐ): 2023ರ ಸಾಲಿನ ಪದ್ಮ ಪುರಸ್ಕಾರಗಳಿಗೆ ಸೆಪ್ಟೆಂಬರ್ 15ರ ವರೆಗೆ ಆನ್‌ಲೈನ್ ಮೂಲಕ ನಾಮನಿರ್ದೇಶನ ಮತ್ತು ಶಿಫಾರಸು ಮಾಡಬಹುದು ಎಂದು ಕೇಂದ್ರ ಗೃಹ ಸಚಿವಾಲಯ ಸೋಮವಾರ ಹೇಳಿದೆ.

ಸಾರ್ವಜನಿಕರು ನಾಮನಿರ್ದೇಶನ ಮತ್ತು ಶಿಫಾರಸುಗಳನ್ನು ರಾಷ್ಟ್ರೀಯ ಪುರಸ್ಕಾರ್ ಪೋರ್ಟಲ್ (https://awards.gov.in) ಮೂಲಕ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ತೀಸ್ತಾ ಅರ್ಜಿ: ಗುಜರಾತ್ ಸರ್ಕಾರಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರ ಜಾಮೀನು ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಗುಜರಾತ್ ಸರ್ಕಾರಕ್ಕೆ ಸೋಮವಾರ ನೋಟಿಸ್ ನೀಡಿದೆ.



ನ್ಯಾಯಮೂರ್ತಿ ಯು. ಯು. ಲಲಿತ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆಯನ್ನು ಆಗಸ್ಟ್ 25ಕ್ಕೆ ನಿಗದಿ ಮಾಡಿದೆ.

ಮುಂದಿನ ವಿಚಾರಣೆಯನ್ನು ಗುಜರಾತ್ ಹೈಕೋರ್ಟ್ ತುಂಬಾ ದಿನಗಳವರೆಗೆ ಮುಂದೂಡಿದ್ದನ್ನು ಆಕ್ಷೇಪಿಸಿ ತೀಸ್ತಾ ಅವರು ಸುಪ್ರೀಂ ಕೋರ್ಟ್‌ಗೆ ಜಾಮೀನು ಅರ್ಜಿ ಸಲ್ಲಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಹೆಚ್ಚುವರಿ ಜಿಲ್ಲಾಧಿಕಾರಿ ನಡೆಸಿದ ಹಲ್ಲೆ ವಿಡಿಯೊ

ತ್ರಿವರ್ಣಧ್ವಜ ಹಿಡಿದ ಪ್ರತಿಭಟನಕಾರನಿಗೆ ಥಳಿತ

ಪಟ್ನಾ (ಪಿಟಿಐ): ಕೈಯಲ್ಲಿ ತ್ರಿವರ್ಣಧ್ವಜ ಹಿಡಿದು ಉದ್ಯೋಗ ನೀಡಿ ಎಂದು ಪ್ರತಿಭಟನೆ ನಡೆಸುತ್ತಿದ್ದ ಯುವಕನ ಜುಟ್ಟು ಹಿಡಿದ ಹೆಚ್ಚುವರಿ ಜಿಲ್ಲಾಧಿಕಾರಿಯು ರಸ್ತೆಯಲ್ಲಿ ಎಳೆದುಕೊಂಡು ಹೋಗಿ ಲಾಠಿಯಲ್ಲಿ ಚೆನ್ನಾಗಿ ಥಳಿಸಿದ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಅಧಿಕಾರಿಯ ಈ ಕ್ರಮವು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಉದ್ಯೋಗ ನೀಡುವಂತೆ ಮನವಿ ಸಲ್ಲಿಸಲು ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಸಾವಿರಾರು ಯುವಕರು ಸೋಮವಾರ ರಾಜಭವನಕ್ಕೆ ಹೊರಟಿದ್ದರು.

ಬಿಹಾರದಲ್ಲಿ ಆಡಳಿತಾರೂಢ ಮೈತ್ರಿಕೂಟದ ಭಾಗವಾಗಿರುವ ಕಾಂಗ್ರೆಸ್, ಘಟನೆಯನ್ನು ತೀವ್ರವಾಗಿ ಖಂಡಿಸಿ ಹೇಳಿಕೆ ಬಿಡುಗಡೆ ಮಾಡಿದೆ. 'ಯುವಕನು ಕಲ್ಲು ತೂರಾಟದಲ್ಲೋ ಅಥವಾ ಇನ್ನಾವುದೋ ದೈಹಿಕ ಹಿಂಸೆಯಲ್ಲಿ ಭಾಗವಹಿಸಿದ್ದರೆ ಈ ರೀತಿ ಮಾಡುವುದನ್ನು ಸಹಿಸಿಕೊಳ್ಳಬಹುದಿತ್ತು. ತ್ರಿವರ್ಣಧ್ವಜ ಹಿಡಿದ ಯುವಕನನ್ನು ಹೊಡೆದಿರುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಹೆಚ್ಚುವರಿ ಜಿಲ್ಲಾಧಿಕಾರಿ ಕೆ.ಕೆ. ಸಿಂಗ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಪಕ್ಷದ ವಕ್ತಾರ ಅಸಿತ್‌ನಾಥ ತಿವಾರಿ ಹೇಳಿದ್ದಾರೆ.

ಬಿಹಾರದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರ ಕಚೇರಿಯು ಘಟನೆ ಬಗ್ಗೆ ಟ್ವೀಟ್ ಮಾಡಿದ್ದು, 'ಜಿಲ್ಲಾಧಿಕಾರಿಯೊಂದಿಗೆ ತೇಜಸ್ವಿ ಅವರು ಮಾತನಾಡಿದ್ದಾರೆ. ಹೆಚ್ಚುವರಿ ಜಿಲ್ಲಾಧಿಕಾರಿಯು ಯಾಕಾಗಿ ಸ್ವತಃ ಲಾಠಿ ಪ್ರಹಾರ ನಡೆಸಿದರು ಎನ್ನುವುದರ ಕುರಿತು ತನಿಖೆ ನಡೆಸಲು ಉನ್ನತ ಸಮಿತಿಯನ್ನು ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ. ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತೇಜಸ್ವಿ ತಿಳಿಸಿದ್ದಾರೆ' ಎಂದಿದೆ.


ಉದ್ಯೋಗ ನೀಡುವಂತೆ ಆಗ್ರಹಿಸಿ ಸೋಮವಾರ ಪ್ರತಿಭಟನೆ ನಡೆಸುತ್ತಿದ್ದ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಸಾವಿರಾರು ಯುವಕರ ಮೇಲೆ ಪೊಲೀಸರು ಜಲ ಫಿರಂಗಿ ಪ್ರಯೋಗಿಸಿದರು –ಪಿಟಿಐ ಚಿತ್ರ

ಡಾಕ್ ಬಂಗಲೆ ಕ್ರಾಸ್ ಬಳಿ ಮೆರವಣಿಗೆ ನಡೆಸಲು ಅನುಮತಿ ಇಲ್ಲ. ಪ್ರತಿಭಟನೆಯಲ್ಲಿ ತೊಡಗಿದ್ದವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು
ಜಿಲ್ಲಾಧಿಕಾರಿ

ಮತ್ತೊಂದು ಪ್ರತಿಭಟನೆ: ವಿವಿಧ ಬೇಡಿಕೆ ಈಡೇರಿಸುವಂತೆ ಜನ್ ಅಧಿಕಾರ್ ಪಕ್ಷದ ನೂರಾರು ಕಾರ್ಯಕರ್ತರು ಕೂಡ ಸೋಮವಾರ ಮೆರವಣಿಗೆ ಹೊರಟಿದ್ದರು. ರಾಜಭವನವು ಇನ್ನೂ ಕೆಲವು ಕಿ.ಮೀ. ದೂರ ಇರುವಾಗಲೇ ಪೊಲೀಸರು ಲಾಠಿ ಪ್ರಹಾರ ನಡೆಸಿ, ಜಲ ಫಿರಂಗಿ ಪ್ರಯೋಗಿಸಿದರು.

ಲಾಠಿ ಪ್ರಹಾರ ಮತ್ತು ಜಲ ಫಿರಂಗಿ ಪ್ರಯೋಗಿಸಿರುವ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾಧಿಕಾರಿ, 'ಪ್ರತಿಭಟನಕಾರರ ಇಷ್ಟೊಂದು ದೊಡ್ಡ ಗುಂಪಿಗೆ ಡಾಕ್ ಬಂಗಲೆ ಕ್ರಾಸ್ ದಾಟಿ ಮುಂದಕ್ಕೆ ಹೋಗಲು ಅವಕಾಶ ನೀಡಲು ಸಾಧ್ಯವಿಲ್ಲ. ರಾಜಭವನಕ್ಕೆ ತೆರಳಿ ಮನವಿ ಸಲ್ಲಿಸಲು ಐವರು ಸದಸ್ಯರ ನಿಯೋಗವನ್ನು ಕಳುಹಿಸುವಂತೆ ಪ್ರತಿಭಟನಕಾರರಲ್ಲಿ ಮನವಿ ಮಾಡಲಾಯಿತು. ಇದನ್ನು ಅವರು ತಿರಸ್ಕರಿಸಿದರು' ಎಂದರು.

'ನಿತೀಶ್ ಮಾತ್ರ ಜವಾಬ್ದಾರರು'


ನವದೆಹಲಿ: ಹೆಚ್ಚುವರಿ ಜಿಲ್ಲಾಧಿಕಾರಿಯು ಯುವಕನಿಗೆ ಥಳಿಸಿರುವ ಘಟನೆ ಕುರಿತು ಬಿಹಾರ ಸರ್ಕಾರವನ್ನು ಬಿಜೆಪಿ ತರಾಟೆಗೆ ತೆಗೆದುಕೊಂಡಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ ನಾಯಕ ಸುಶೀಲ್ ಕುಮಾರ್ ಮೋದಿ, 'ಪ್ರತಿಭಟನಕಾರರ ಸಮಸ್ಯೆಗಳಿಗೆ ಯಾರಾದರೂ ಜವಾಬ್ದಾರರಾಗಿದ್ದರೆ ಅದು ಮುಖ್ಯಮಂತ್ರಿ ನಿತೀಶ್ ಕುಮಾರ್ ಮಾತ್ರ. ಶಿಕ್ಷಕರ ನೇಮಕಾತಿ ಪ್ರಕ್ರಿಯೆಯು ಹಲವು ತಿಂಗಳಿನಿಂದ ಬಾಕಿ ಇತ್ತು' ಎಂದಿದ್ದಾರೆ.

'ಯುವಕನಿಗೆ ಈ ರೀತಿ ಥಳಿಸುವುದು ಖಂಡನೀಯ. ಹೆಚ್ಚುವರಿ ಜಿಲ್ಲಾಧಿಕಾರಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಅಧಿಕಾರಕ್ಕೆ ಬಂದರೆ, 10 ಲಕ್ಷ ಉದ್ಯೋಗ ಒದಗಿಸುವ ತೀರ್ಮಾನವನ್ನು ಸಚಿವ ಸಂಪುಟದ ಮೊದಲ ಸಭೆಯಲ್ಲಿಯೇ ಕೈಗೊಳ್ಳುವುದಾಗಿ 2020ರ ಚುನಾವಣೆ ಪ್ರಚಾರದ ವೇಳೆ ತೇಜಸ್ವಿ ಯಾದವ್ ಅವರು ಹೇಳಿದ್ದರು. ತೇಜಸ್ವಿ ಅವರು ಅಧಿಕಾರಕ್ಕೆ ಬಂದ ಬಳಿಕ ಸಚಿವ ಸಂಪುಟದ ಮೂರು ಸಭೆಗಳು ನಡೆದಿವೆ. ಆದರೆ, ಶಿಕ್ಷಕರ ನೇಮಕಾತಿಯ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ ಎಂದರು.

ಷೇರುಪೇಟೆ ವಹಿವಾಟು 872



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,758
ಇಂದಿನ ಅಂತ್ಯ	17,490
▼	268
ದಿನದ ಗರಿಷ್ಠ	17,710

ವಿನಿಮಯ ದರ

$ ಡಾಲರ್	79.84
£ ಪೌಂಡ್	94.38
€ ಯುರೊ	79.99
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ (10 ಕೆಜಿಗೆ)



ಶೇಂಗಾ (ರಿಫೈನ್ಡ್)	₹1660 (1660)
ಸೋಯಾ (ರಿಫೈನ್ಡ್)	₹1255 (1255)
ಸೂರ್ಯಕಾಂತಿ (ರಿಫೈನ್ಡ್)	₹1500 (1540
ಪಾಮೋಲಿನ್	₹1130 (1180)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹355-682
ದ್ವಿತಳಿ (ಬಿ.ವಿ)	₹365-766

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹157
ಆರ್‌ಎಸ್‌ಎಸ್-5	₹148
ಗುಡ್ ಲಾಟ್	₹140

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ನೌಕರರ ವೇರಿಯೆಬಲ್ ಪೇ ತಗ್ಗಿಸಿದ ಇನ್ಫೊಸಿಸ್

ನವದೆಹಲಿ (ಪಿಟಿಐ): ದೇಶದ ಎರಡನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ತನ್ನ ನೌಕರರಿಗೆ ನೀಡುವ ವೇರಿಯೆಬಲ್ ಪೇ ಪ್ರಮಾಣವನ್ನು ಸರಾಸರಿ ಶೇಕಡ 70ಕ್ಕೆ ತಗ್ಗಿಸಿದೆ. ಇದು ಜೂನ್ ತ್ರೈಮಾಸಿಕಕ್ಕೆ ಅನ್ವಯವಾಗಲಿದೆ.

ಕಂಪನಿಯ ಲಾಭಾಂಶವು ನಿರೀಕ್ಷೆಯಷ್ಟು ಹೆಚ್ಚಾಗದಿರುವುದು ಹಾಗೂ ನೌಕರರ ಮೇಲಿನ ವೆಚ್ಚಗಳು ಜಾಸ್ತಿ ಆಗಿರುವುದು ಈ ತೀರ್ಮಾನಕ್ಕೆ ಕಾರಣ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಮೂಲದ ಇನ್ನೊಂದು ಪ್ರಮುಖ ಐ.ಟಿ. ಸೇವಾ ಕಂಪನಿ ವಿಪ್ರೊ ಕೂಡ ಈಚೆಗೆ ತನ್ನ ನೌಕರರಿಗೆ ನೀಡುವ ವೇರಿಯೆಬಲ್ ಪೇ ಕಡಿತಗೊಳಿಸಿತ್ತು. ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಕಂಪನಿಯು ತನ್ನ ಕೆಲವು ನೌಕರರಿಗೆ ತ್ರೈಮಾಸಿಕ ವೇರಿಯೆಬಲ್ ಪೇ ಪಾವತಿಯನ್ನು ಒಂದು ತಿಂಗಳ ಮಟ್ಟಿಗೆ ಮುಂದೂಡಿದೆ ಎನ್ನಲಾಗಿದೆ.

'ಇನ್ಫೊಸಿಸ್ ಕಂಪನಿಯು ತನ್ನ ತೀರ್ಮಾನವನ್ನು ನೌಕರರಿಗೆ ತಿಳಿಸಿದೆ. ಈ ಕುರಿತು ಪ್ರತಿಕ್ರಿಯೆ ಕೋರಿ ಇನ್ಫೊಸಿಸ್‌ಗೆ ಇ-ಮೇಲ್ ಕಳುಹಿಸಲಾಗಿದ್ದು, ಉತ್ತರ ದೊರೆತಿಲ್ಲ. ಇನ್ಫೊಸಿಸ್‌ನ ಜೂನ್ ತ್ರೈಮಾಸಿಕದ ಲಾಭವು ನಿರೀಕ್ಷೆಗಿಂತ ಕಡಿಮೆ ಇದೆ.

ಬ್ಯಾಂಕಿಂಗ್, ಐ.ಟಿ., ಲೋಹ, ರಿಯಾಲ್ಟಿ ಷೇರು ಮೌಲ್ಯ ಇಳಿಕೆ

ಸೆನ್ಸೆಕ್ಸ್, ನಿಫ್ಟಿ ಶೇ 1ಕ್ಕೂ ಹೆಚ್ಚು ಇಳಿಕೆ

ಮುಂಬೈ (ಪಿಟಿಐ): ಷೇರುಪೇಟೆಯ ವಾರದ ವಹಿವಾಟಿನ ಮೊದಲ ದಿನ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಶೇಕಡ 1ಕ್ಕೂ ಅಧಿಕ ಇಳಿಕೆ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 872 ಅಂಶ ಇಳಿಕೆ ಕಂಡು 58,774 ಅಂಶಗಳಿಗೆ ತಲುಪಿತು. ವಹಿವಾಟಿನ ಒಂದು ಹಂತದಲ್ಲಿ 941 ಅಂಶಗಳವರೆಗೆ ಕುಸಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 268 ಅಂಶ ಇಳಿಕೆಯಾಗಿ 17,490ಕ್ಕೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಐಟಿಸಿ ಮತ್ತು ನೆಸ್ಲೆ ಇಂಡಿಯಾ ಹೊರತುಪಡಿಸಿ ಉಳಿದೆಲ್ಲ ಕಂಪನಿಗಳು ನಷ್ಟ ಅನುಭವಿಸಿದವು. ಟಾಟಾ ಸ್ಟೀಲ್ ಕಂಪನಿ ಷೇರು ಮೌಲ್ಯ ಶೇ 4.50ರಷ್ಟು ಇಳಿಕೆ ಕಂಡಿತು. ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.80ರಷ್ಟು ಮತ್ತು ಸ್ಮಾಲ್‌ಕ್ಯಾಪ್ ಶೇ 1.17ರಷ್ಟು ಇಳಿಕೆ ಕಂಡಿವೆ.



ಏಷ್ಯಾದಲ್ಲಿ ಸೋಲ್, ಟೋಕಿಯೊ ಮತ್ತು ಹಾಂಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿವೆ. ಶಾಂಘೈ ವಹಿವಾಟು ಮಾತ್ರ ಗಳಿಕೆ ಕಂಡಿತು.

ಜಾಗತಿಕ ಆರ್ಥಿಕ ಚಟುವಟಿಕೆಯು ಮಂದಗತಿಯಲ್ಲಿ ಇರುವುದು ಹಾಗೂ ಅಮೆರಿಕದ ಫೆಡರಲ್ ರಿಸರ್ವ್ ಹಣಕಾಸು ನೀತಿಯನ್ನು ಬಿಗಿಗೊಳಿಸುವ ನಿರೀಕ್ಷೆಯಿಂದಾಗಿ ವಹಿವಾಟು ಇಳಿಕೆ ಕಂಡಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ನಿಫ್ಟಿ 50, ಸದ್ಯ ದೀರ್ಘಾವಧಿಯ ಸರಾಸರಿ ಮೌಲ್ಯಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ವಹಿವಾಟು ನಡೆಸುತ್ತಿದೆ. ಇದು ಹೂಡಿಕೆದಾರರ ಚಿಂತೆಗೆ ಕಾರಣವಾಗಿದೆ. ಡಾಲರ್ ಸೂಚ್ಯಂಕ ವೃದ್ಧಿ ಮತ್ತು ಅಮೆರಿಕದ 10 ವರ್ಷದ ಬಾಂಡ್ ಗಳಿಕೆಯು ಅಲ್ಪಾವಧಿಯಲ್ಲಿ ಮಾರುಕಟ್ಟೆ ಚಲನೆಗೆ ಪ್ರಮುಖ ಅಡ್ಡಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ತೈಲ ದರ ಶೇ 0.95ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 95.80 ಡಾಲರ್‌ಗೆ ತಲುಪಿತು.

₹6.57 ಲಕ್ಷ ಕೋಟಿ ನಷ್ಟ (ನವದೆಹಲಿ (ಪಿಟಿಐ): ಎರಡು ದಿನಗಳ ನಕಾರಾತ್ಮಕ ವಹಿವಾಟಿನಿಂದಾಗಿ ಷೇರುಪೇಟೆ ಹೂಡಿಕೆದಾರರ ಸಂಪತ್ತು ಮೌಲ್ಯ ₹ 6.57 ಲಕ್ಷ ಕೋಟಿಯಷ್ಟು ಕರಗಿದೆ. ಇದರಿಂದಾಗಿ ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯ ₹273 ಲಕ್ಷ ಕೋಟಿಗೆ ತಲುಪಿದೆ.

ಬಿಎಸ್‌ಇ: ವಲಯವಾರು ಇಳಿಕೆ (%)

ಲೋಹ	2.69
ರಿಯಾಲ್ಟಿ	2.47
ಮೂಲ ವಸ್ತುಗಳು	2.44
ಅತಿಅಗತ್ಯವಲ್ಲದ ವಸ್ತುಗಳು	2.01
ಹಣಕಾಸು	1.88

ಎಂಎಸ್‌ಪಿ ಸಮಿತಿ ಸಭೆ ಎಸ್‌ಕೆಎಂ ಗೈರು



ನವದೆಹಲಿ (ಪಿಟಿಐ): ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಪರಿಣಾಮಕಾರಿ ಮತ್ತು ಪಾರದರ್ಶಕಗೊಳಿಸುವ ಸಂಬಂಧ ರಚಿಸಲಾಗಿರುವ ಸಮಿತಿ, ಸೋಮವಾರ ತನ್ನ ಪ್ರಥಮ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿತು. ಈ ಸಭೆಗೆ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಗೈರು ಹಾಜರಾಗಿತ್ತು.

ಕೃಷಿ ಇಲಾಖೆಯ ಮಾಜಿ ಕಾರ್ಯದರ್ಶಿ ಸಂಜಯ್ ಅಗರವಾಲ್ ನೇತೃತ್ವದ ಸಮಿತಿಯು 'ಶೂನ್ಯ ಬಂಡವಾಳ ಆಧರಿತ ಕೃಷಿ ಪದ್ಧತಿ'ಯನ್ನು ಉತ್ತೇಜಿಸುವ, ದೇಶದ ಅಗತ್ಯ ಆಧರಿಸಿ ಬೆಳೆ ಪದ್ಧತಿ ಬದಲಿಸುವ ಹಾಗೂ ಎಂಎಸ್‌ಪಿ ಅನ್ನು ಪರಿಣಾಮಕಾರಿಗೊಳಿಸುವ ಕುರಿತಂತೆ ಚರ್ಚಿಸಿತು.

ಸಮಿತಿಯಲ್ಲಿ ಅಧ್ಯಕ್ಷ ಸೇರಿ 26 ಸದಸ್ಯರಿದ್ದಾರೆ. ಎಸ್‌ಕೆಎಂ ಪ್ರತಿನಿಧಿಸುವವರಿಗಾಗಿ ಮೂರು ಸ್ಥಾನ ಕಾಯ್ದಿಡಲಾಗಿದೆ.

ಸಮಿತಿಯು ಚರ್ಚಿಸಿ, ವರದಿ ನೀಡಬೇಕಾದ ಮೂರು ಅಂಶಗಳ ಕುರಿತು ಸಭೆಯಲ್ಲಿ ಪ್ರಾತ್ಯಕ್ಷಿಕೆ ನೀಡಲಾಯಿತು ಎಂದು ಸಮಿತಿ ಸದಸ್ಯ ವಿನೋದ್ ಆನಂದ್ ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯಗಳ ಹಿರಿಯ ಸದಸ್ಯರು, ಕೇಂದ್ರ ಸರ್ಕಾರದ ಕಾರ್ಯದರ್ಶಿಗಳು, ಕರ್ನಾಟಕ, ಆಂಧ್ರಪ್ರದೇಶ, ಸಿಕ್ಕಿಂ, ಒಡಿಶಾ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ಭರತ್ ಭೂಷಣ್ ತ್ಯಾಗಿ, ಗುಣವಂತ್ ಪಾಟೀಲ್, ಕೃಷ್ಣವೀರ್ ಚೌಧರಿ, ಪ್ರಮೋದ್ ಕುಮಾರ್ ಚೌಧರಿ, ಗುಣಿ ಪ್ರಕಾಶ್ ಮತ್ತಿತರರು ರೈತರ ಪ್ರತಿನಿಧಿಗಳಾಗಿ ಸಭೆಯಲ್ಲಿ ಹಾಜರಿದ್ದರು.

ಸೆ.2ರಂದು ನೌಕಾಪಡೆಗೆ ಐಎಸಿ ವಿಕ್ರಾಂತ್ ಅಧಿಕೃತ ಸೇರ್ಪಡೆ

ಕೊಚ್ಚಿ (ಪಿಟಿಐ): 'ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಮೊದಲ ವಿಮಾನವಾಹಕ ಯುದ್ಧನೌಕೆ 'ಐಎಸಿ ವಿಕ್ರಾಂತ್' ಅನ್ನು ಸೆಪ್ಟೆಂಬರ್ 2ರಂದು ಭಾರತೀಯ ನೌಕಾಪಡೆಗೆ ಅಧಿಕೃತವಾಗಿ ಸೇರ್ಪಡೆ ಮಾಡಲಾಗುತ್ತದೆ. ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ (ಸಿಎಸ್‌ಎಲ್) ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ' ಎಂದು ಮೂಲಗಳು ಹೇಳಿವೆ.

'ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ ಸುಮಾರು ₹20 ಸಾವಿರ ಕೋಟಿ ವೆಚ್ಚದಲ್ಲಿ ಇದನ್ನು ಅಭಿವೃದ್ಧಿಪಡಿಸಿದೆ. ಪ್ರಧಾನಿ ಮೋದಿ ಅವರು ಈ ಯುದ್ಧನೌಕೆಯನ್ನು ನೌಕಾಪಡೆಗೆ ಹಸ್ತಾಂತರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಐಎನ್‌ಎಸ್ ವಿಕ್ರಾಂತ್‌ನ ನಿವೃತ್ತ ನೌಕರರು, ರಕ್ಷಣಾ ಸಚಿವಾಲಯದ ಅಧಿಕಾರಿಗಳು, ರಾಜ್ಯ ಸರ್ಕಾರದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಸುಮಾರು 1,500–2,000 ಮಂದಿ ನಾಗರಿಕರಿಗೂ ಪ್ರವೇಶ ಇರಲಿದೆ' ಎಂದು ತಿಳಿಸಿವೆ.

ಸಮುದ್ರದಲ್ಲಿ ನೌಕೆ ಬಳಕೆಯ ನಾಲ್ಕನೇ ಮತ್ತು ಅಂತಿಮ ಪ್ರಯೋಗವನ್ನು ಹೋದ ತಿಂಗಳು ಯಶಸ್ವಿಯಾಗಿ ನಡೆಸಲಾಗಿತ್ತು.

'ವಿಕ್ರಾಂತ್' ಮೂಲಕ ಮಿಗ್–29ಕೆ ಯುದ್ಧವಿಮಾನ, ಕಾಮೊವ್–31 ಹೆಲಿಕಾಪ್ಟರ್‌ಗಳು, ಎಂಎಚ್–60ಆರ್ ಬಹುಪಯೋಗಿ ಹೆಲಿಕಾಪ್ಟರ್‌ಗಳನ್ನು ನಿರ್ವಹಣೆ ಮಾಡಬಹುದಾಗಿದೆ.

ನೌಕೆಯು 2,300 ವಿಭಾಗಗಳನ್ನು ಹೊಂದಿದ್ದು, 1,700 ಸಿಬ್ಬಂದಿಗೆ ಪೂರಕವಾಗಿ ವಿನ್ಯಾಸಗೊಳಿಸಲಾಗಿದೆ. ಮಹಿಳಾ ಅಧಿಕಾರಿಗಳಿಗಾಗಿಯೇ ವಿಶೇಷವಾಗಿ ಕ್ಯಾಬಿನ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ನೌಕೆಯು 262 ಮೀಟರ್ ಉದ್ದ, 62 ಮೀಟರ್ ಅಗಲ ಮತ್ತು 59 ಮೀಟರ್ ಎತ್ತರವಿದೆ. ಇದರ ನಿರ್ಮಾಣಕಾರ್ಯ 2009ರಲ್ಲಿ ಆರಂಭಗೊಂಡಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	40000-47500
ಕುಂದಾಪುರ	
ಚಿಪ್ಪು	31589-34509
ಕೋಕ	21089-33189
ಫ್ಯಾಕ್ಟರಿ	13899-22429
ಹೊಸಚಾಲಿ	39999-43139
ಹಳೆಚಾಲಿ	50000-56000
ಪುತ್ತೂರು	
ಕೋಕ	11000-26000
ಹೊಸತು	34500-47500
ಸಾಗರ	
ಬಿಳಿಗೋಟು	19811-33700
ಚಾಲಿ	37099-41133
ಕೋಕ	20699-38500
ಕೆಂಪುಗೋಟು	30899-42469
ರಾಶಿ	37989-53099
ತಟ್ಟಿಬೆಟ್ಟೆ	
ಶಿವಮೊಗ್ಗ	
ಬೆಟ್ಟೆ	53999-55639
ಗೊರಬಲು	18009-38299
ರಾಶಿ	47869-53121
ಸರಕು	63159-76999
ಸಿದ್ದಾಪುರ	
ಬಿಳಿಗೋಟು	29699-35422
ಚಾಲಿ	38319-43899
ಕೋಕ	27699-35299
ಕೆಂಪುಗೋಟು	32889-35119
ರಾಶಿ	48599-51299
ತಟ್ಟಿಬೆಟ್ಟೆ	44089-49689
ಶಿರಸಿ	
ಬೆಟ್ಟೆ	40099-47800
ಬಿಳಿಗೋಟು	26899-36368
ಚಾಲಿ	38699-45098
ರಾಶಿ	43689-52200
ಯಲ್ಲಾಪುರ	
ಬಿಳಿಗೋಟು	27699-35299
ಚಾಲಿ	38175-44090
ಕೋಕ	18029-32912
ಕೆಂಪುಗೋಟು	33199-35619
ರಾಶಿ	50030-55799
ತಟ್ಟಿಬೆಟ್ಟೆ	39299-49710

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	15700	16000	214.70 ಸೆಂಟ್ಸ್
ಎಸಿ	9100	8200	8900	
ಆರ್‌ಪಿ	9900	9500	9750	ಲಂಡನ್
ಆರ್‌ಸಿ	4835	4500	4700	2215 ಡಾಲರ್ಸ್

ಮೈಸೂರು ಸ್ಯಾಂಡಲ್ ಮಾರುಕಟ್ಟೆಗೆ ಡಿಜಿಟಲ್ ಸ್ಪರ್ಶ: ಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

> **ಕಾರ್ಖಾನೆಯನ್ನು ಯಾವ ಕಾರಣಕ್ಕೂ ದಾಬಸ್‌ಪೇಟೆಗೆ ಸ್ಥಳಾಂತರ ಮಾಡುವುದಿಲ್ಲ. ಕಾರ್ಮಿಕರಿಗೆ ಆತಂಕ ಬೇಡ**
> **ಕೆ.ಗೋಪಾಲಯ್ಯ,** ಅಬಕಾರಿ ಸಚಿವ

ಬೆಂಗಳೂರು: 'ಮೈಸೂರು ಸ್ಯಾಂಡಲ್ ಸಾಬೂನು ಕಾರ್ಖಾನೆಯಲ್ಲಿ ಆಧುನಿಕ ಯಂತ್ರೋಪಕರಣ ಅಳವಡಿಸಿಕೊಳ್ಳುವ ಜತೆಗೆ ಮಾರುಕಟ್ಟೆ ವ್ಯವಸ್ಥೆಗೆ ಡಿಜಿಟಲ್ ಸ್ಪರ್ಶ ನೀಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ಆವರಣದಲ್ಲಿ ಸೋಮವಾರ ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಶ್ರೀಗಂಧವನ ಉದ್ಘಾಟಿಸಿ ಮಾತನಾಡಿದರು.

ಹೊಸ ಚಿಂತನೆ, ಹೊಸ ವ್ಯವಸ್ಥೆ ಅಡಿ ಸಂಸ್ಥೆಯು ಉತ್ಪನ್ನ ತಯಾರಿಸಿದರೆ ಮನೆಮನೆಗೂ ತಲುಪಲು ಸಾಧ್ಯ ಆಗಲಿದೆ. ಇದು ಪೈಪೋಟಿಯ ಯುಗ. ಹಿಂದೂಸ್ಥಾನ್ ಯುನಿಲಿವರ್ ಕಂಪನಿಯೊಂದೇ ಶೇ 65ರಷ್ಟು ಮಾರುಕಟ್ಟೆ ವ್ಯಾಪ್ತಿ ಹೊಂದಿದೆ. ಮೈಸೂರು ಸ್ಯಾಂಡಲ್ ಸೇರಿ ಉಳಿದ ಸಾಬೂನು ತಯಾರಿಕಾ ಕಂಪನಿಗಳಿಗೆ ಶೇ 35 ಮಾರುಕಟ್ಟೆ ಪಾಲಿದೆ. ಒಂದು ಕಾಲದಲ್ಲಿ ನಿರ್ಮಾ ಸಂಸ್ಥೆಯೇ ಹಿಂದೂಸ್ಥಾನ್ ಯುನಿ ಲಿವರ್‌ಗೆ ಸ್ಪರ್ಧೆ ಒಡ್ಡಿತ್ತು ಎಂದರು.

ಮೈಸೂರು ಸ್ಯಾಂಡಲ್ ಕಾರ್ಖಾನೆಯು ಸರ್ಕಾರಿ ಸ್ವಾಮ್ಯದಲ್ಲಿ ಲಾಭದಾಯಕವಾಗಿ ಮುನ್ನಡೆಯುತ್ತಿದ್ದರೂ ಉತ್ಪನ್ನಗಳ ತಯಾರಿಕೆಯಲ್ಲಿ ಮತ್ತಷ್ಟು ವೃತ್ತಿಪರತೆ ಅಗತ್ಯ. ಶ್ರೀಗಂಧದ ದ್ರವ್ಯದಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದು ಸೂಚಿಸಿದರು.

ಸರ್ಕಾರದ ವಿಶೇಷ ವಲಯದಲ್ಲಿ ಖಾಸಗಿ ಸಂಸ್ಥೆಗಳೇ ಉತ್ಪಾದನಾ ಘಟಕ ಆರಂಭಿಸುತ್ತಿವೆ. ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯೂ ಅಲ್ಲಿ ಉತ್ಪನ್ನ ತಯಾರಿಕೆ ಘಟಕ ಸ್ಥಾಪಿಸಿ, ಪ್ರತಿ ವರ್ಷ ₹ 10 ಸಾವಿರ ಕೋಟಿ ವಹಿವಾಟು ನಡೆಸಬೇಕು ಎಂದ ಅವರು, 'ಹೆಚ್ಚಿನ ಉದ್ಯೋಗ ಅವಕಾಶ ಕಲ್ಪಿಸಿದ ಸಂಸ್ಥೆಗಳಿಗೆ ಸಹಾಯಧನ ನೀಡಲಾಗುವುದು. ಕನ್ನಡಿಗರಿಗೆ ಹೆಚ್ಚು ಉದ್ಯೋಗಗಳು ಲಭಿಸಬೇಕು' ಎಂದರು.

ಒಳಗೆ ಏನ್ ನಡೆಯುತ್ತಿದೆ ತಿಳಿದಿದೆ: 'ಕಾರ್ಖಾನೆಯ ಒಳಗೆ ಏನೆಲ್ಲಾ ನಡೆಯುತ್ತಿದೆ ಎಂಬುದು ನನಗೆ ತಿಳಿದಿದೆ. ಪ್ರಾಮಾಣಿಕತೆ ಹಾಗೂ ಬದಲಾವಣೆ ತರವುದು ಅಗತ್ಯ. ಮಾಡಾಳ್ ವಿರೂಪಾಕ್ಷಪ್ಪ ಅವರು ಒಂದೂವರೆ ವರ್ಷದಿಂದೀಚೆಗೆ ಅಧ್ಯಕ್ಷರಾಗಿದ್ದಾರೆ. ಸರ್ಕಾರ ಎಲ್ಲ ನೆರವೂ ನೀಡಲಿದೆ' ಎಂದು ಬೊಮ್ಮಾಯಿ ಹೇಳಿದರು.

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಬೆಂಗಳೂರು	₹16000-19000
ಕೆ.ಆರ್. ಪೇಟೆ	₹8250-8250
ಪುತ್ತೂರು	₹400-8500
ತುರುವೇಕೆರೆ	₹13550-13550

ಮುಂಬೈ ಧಾರಣೆ

ಶೇಂಗಾ

22–8-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1670)
ಒಂದು ವಾರದ ಡೆಲಿವರಿ	1665 (1665)
ಸೋಯಾ ಕಚ್ಚಾ	1210 (1210)
ಪಾಮ್ ವಾರದ ಡೆಲಿವರಿ	1128 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1450 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,250 (51,250)
ಬೆಳ್ಳಿ ಕೆ.ಜಿ 55,150 (55,600)

ಆವರಣದಲ್ಲಿ ಶನಿವಾರದ ಧಾರಣೆ

ಉತ್ತರಾಖಂಡದಲ್ಲಿ ಮೊದಲ ವಾಣಿಜ್ಯ ಬಾಹ್ಯಾಕಾಶ ವೀಕ್ಷಣಾಲಯ

ನವದೆಹಲಿ(ಪಿಟಿಐ): ಭೂ ಕಕ್ಷೆಯಲ್ಲಿ 10 ಸೆಂಟಿಮೀಟರ್‌ನಷ್ಟು ಸಣ್ಣ ವಸ್ತುಗಳನ್ನೂ ಪತ್ತೆ ಮಾಡುವ ಮತ್ತು ಬಾಹ್ಯಾಕಾಶ ಚಟುವಟಿಕೆಗಳ ಮೇಲೆ ನಿಗಾ ಇರಿಸುವ ಭಾರತದ ಮೊದಲ ಬಾಹ್ಯಾಕಾಶ ಸಾಂದರ್ಭಿಕ ಅರಿವಿನ ವಾಣಿಜ್ಯ ವೀಕ್ಷಣಾಲಯವನ್ನು ಉತ್ತರಾಖಂಡದ ಗಢ್ವಾಲ್ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದೆ.

ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದ ನವೋದ್ಯಮ ಕಂಪನಿ 'ದಿಗಂತರ' ಈ ವೀಕ್ಷಣಾಲಯವನ್ನು ಸ್ಥಾಪಿಸುತ್ತಿದೆ. ಬಾಹ್ಯಾಕಾಶದಲ್ಲಿನ ತ್ಯಾಜ್ಯ, ಮಿಲಿಟರಿ ಉಪಗ್ರಹಗಳು ಸೇರಿ ಬಾಹ್ಯಾಕಾಶದಲ್ಲಿನ ಯಾವುದೇ ಚಟುವಟಿಕೆಗಳ ಮೇಲೆ ನಿಗಾವಹಿಸಲು ಈ ವೀಕ್ಷಣಾಲಯ (ಎಸ್‌ಎಸ್‌ಎ–ಸ್ಪೇಸ್ ಸಿಚುವೇಷನಲ್ ಅವೇರ್‌ನೆಸ್ ಅಬ್ಸರ್‌ವೇಟರಿ) ನೆರವಾಗಲಿದೆ.

ಸದ್ಯ, ಅಮೆರಿಕ ತಾನು ಹೊಂದಿರುವ ಇಂತಹ ಹಲವು ವೀಕ್ಷಣಾಲಯಗಳು ಮತ್ತು ಜಗತ್ತಿನಾದ್ಯಂತ ಬಾಹ್ಯಾಕಾಶ ವಾಣಿಜ್ಯ ಕಂಪನಿಗಳು ಒದಗಿಸುವ ಹೆಚ್ಚುವರಿ ಮಾಹಿತಿಗಳ ನೆರವಿನೊಂದಿಗೆ ಬಾಹ್ಯಾಕಾಶ ತ್ಯಾಜ್ಯ ನಿರ್ವಹಣೆಯಲ್ಲಿ ಪ್ರಾಬಲ್ಯ ಸಾಧಿಸಿದೆ. ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ನಡುವೆ ಇಂತಹ ವೀಕ್ಷಣಾಲಯ ಸೌಲಭ್ಯಗಳ ಕೊರತೆ ಇದ್ದು, ಉತ್ತರಾಖಂಡದಲ್ಲಿ ಸ್ಥಾಪಿಸಲಾಗುತ್ತಿರುವ ಬಾಹ್ಯಾಕಾಶ ವೀಕ್ಷಣಾಲಯವು ಆ ಕೊರತೆ ನೀಗಿಸಲಿದೆ ಎಂದು ದಿಗಂತರ ಕಂಪನಿಯ ಸಿಇಒ ಅನಿರುದ್ಧ ಶರ್ಮಾ ತಿಳಿಸಿದರು.

ಈ ವೀಕ್ಷಣಾಲಯವು ಒದಗಿಸಲಿರುವ ದತ್ತಾಂಶ, ಉಪಗ್ರಹಗಳು ಮತ್ತು ಇತರ ಬಾಹ್ಯಾಕಾಶ ನೌಕೆಗಳಿರುವ ಸ್ಥಳ, ಅವುಗಳ ವೇಗ ಮತ್ತು ಚಲಿಸುತ್ತಿರುವ ಪಥದ ಬಗ್ಗೆ ಹೆಚ್ಚು ನಿಖರ ಮುನ್ಸೂಚನೆ ನೀಡುತ್ತದೆ. ಆ ಮೂಲಕ ಉಪಗ್ರಹ ಮತ್ತು ಬಾಹ್ಯಾಕಾಶ ನೌಕೆಗಳ ನಡುವಿನ ಘರ್ಷಣೆಗಳನ್ನು ತಪ್ಪಿಸಲು ನೆರವಾಗಲಿದೆ.

ಉಪಖಂಡದ ಬಾಹ್ಯಾಕಾಶ ಚಟುವಟಿಕೆಯ ಮೇಲೆ ನಿಗಾ ಇರಿಸಲು ಭಾರತಕ್ಕೆ ದೇಶೀಯ ಸಾಮರ್ಥ್ಯವನ್ನೂ ಹೆಚ್ಚಿಸಲಿದೆ. ಚೀನಾದ ಉಪಗ್ರಹಗಳು ಭಾರತದ ಒಂದು ನಿರ್ದಿಷ್ಟ ಪ್ರದೇಶದ ಮೇಲೆ ದೀರ್ಘಕಾಲದಿಂದ ಕಣ್ಣಿಟ್ಟಿದ್ದರೆ ಅದರ ಪತ್ತೆಗೆ ಅಮೆರಿಕದಂತಹ ರಾಷ್ಟ್ರಗಳನ್ನು ಅವಲಂಬಿಸಬೇಕಿಲ್ಲ. ಈ ವೀಕ್ಷಣಾಲಯವೇ ಭಾರತಕ್ಕೆ ಒಂದು ವರವಾಗಲಿದೆ ಎಂದು ಶರ್ಮಾ ಹೇಳಿದರು.

ಜೈಪುರದ ಟೊಂಕ್ ಜಿಲ್ಲೆಯಲ್ಲಿ ಪ್ರವಾಹ; ದಂಪತಿ ಸಾವು

ಉತ್ತರ ಭಾರತದ ಹಲವೆಡೆ ನಿಲ್ಲದ ಮಳೆ

ಭೋಪಾಲ್/ಜೈಪುರ/ಭುವನೇಶ್ವರ/ಶಿಮ್ಲಾ(ಪಿಟಿಐ): ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಸೋಮವಾರ ಧಾರಾಕಾರ ಮಳೆ ಮುಂದುವರಿದಿದೆ.

ಜೈಪುರದ ಟೊಂಕ್ ಜಿಲ್ಲೆಯ ಮಂಡವಾಡ ಗ್ರಾಮದಲ್ಲಿ ಪ್ರವಾಹಕ್ಕೆ ಮನೆ ಕುಸಿದು, ದಂಪತಿ ಮೃತಪಟ್ಟಿದ್ದಾರೆ.

'ರಾಜಸ್ಥಾನದ ಹಲವೆಡೆ ಹಿಂದಿನ 24 ಗಂಟೆಗಳಲ್ಲಿ ಜೋರು ಮಳೆ ಸುರಿದಿದ್ದು, ಕೋಟಾ, ಝಾಲವಾಡ್ ಹಾಗೂ ಸುತ್ತಲಿನ ಜಿಲ್ಲೆಗಳಲ್ಲಿ ಪ್ರವಾಹ ಸ್ಥಿತಿ ಎದುರಾಗಿದೆ. ಕೋಟಾ ಅಣೆಕಟ್ಟೆಯಿಂದ ನೀರು ಬಿಡುಗಡೆ ಮಾಡಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಸಾವಿರಾರು ಜನರನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ಸತತ ಮೂರು ದಿನಗಳಿಂದ ಭಾರಿ ಮಳೆಯಾಗುತ್ತಿದ್ದು, ಭೋಪಾಲ್, ಜಬಲ್‌ಪುರ ಸೇರಿ ರಾಜ್ಯದ ವಿವಿಧೆಡೆ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.



ಒಡಿಶಾದ ಬಾಲಸೋರ್‌ನಲ್ಲಿ ಸುವರ್ಣರೇಖಾ ನದಿಯು ಉಕ್ಕಿ ಹರಿಯುತ್ತಿರುವುದರಿಂದ ನದಿ ಪಾತ್ರದ ಜನವಸತಿ ಪ್ರದೇಶ ಹಾಗೂ ಕೃಷಿ ಭೂಮಿಗೆ ನೀರು ನುಗ್ಗಿರುವುದು —ಪಿಟಿಐ ಚಿತ್ರ

'ರಾಜ್ಯದ ಪಶ್ಚಿಮ ಭಾಗಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದ್ದಿದ್ದರಿಂದ ಸೋಮವಾರ ರೆಡ್ ಅಲರ್ಟ್ ಘೋಷಿಸಲಾಗಿತ್ತು. ನದಿ ಹಾಗೂ ಹಳ್ಳ–ಕೊಳ್ಳಗಳು ತುಂಬಿ ಹರಿಯುತ್ತಿವೆ. ಜಲಾಶಯಗಳ ಒಳಹರಿವು ಹೆಚ್ಚಿದೆ. ಕೆಲ ಜಲಾಶಯಗಳಿಂದ ನೀರು ಬಿಡುಗಡೆ ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಒಡಿಶಾದಲ್ಲೂ ಮಳೆ ಮುಂದುವರಿದಿದೆ. ರಾಜ್ಯದ ಉತ್ತರ ಜಿಲ್ಲೆಗಳಲ್ಲಿ ಪ್ರವಾಹ ಸ್ಥಿತಿ ಎದುರಾಗಿದೆ.

'ಸುವರ್ಣರೇಖಾ ನದಿಯು ಉಕ್ಕಿ ಹರಿಯುತ್ತಿದ್ದು, ನದಿ ತಟದಲ್ಲಿದ್ದ 100ಕ್ಕೂ ಹೆಚ್ಚು ಗ್ರಾಮಗಳು ಜಲಾವೃತಗೊಂಡಿವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೃತರ ಕುಟುಂಬಗಳಿಗೆ ತಲಾ ₹4 ಲಕ್ಷ ಪರಿಹಾರ: ಹಿಮಾಚಲ ಪ್ರದೇಶದಲ್ಲಿ ಪ್ರವಾಹ ಹಾಗೂ ಭೂಕುಸಿತದಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ ₹4 ಲಕ್ಷ ಪರಿಹಾರ ಒದಗಿಸುವುದಾಗಿ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಹೇಳಿದ್ದಾರೆ.ನೆರೆಪೀಡಿತ ಹಾಗೂ ಭೂಕುಸಿತ ಉಂಟಾಗಿದ್ದ ಸ್ಥಳಗಳಿಗೆ ಅವರು ಸೋಮವಾರ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಇ.ಡಿಗೆ ಆಸ್ತಿ ಜಪ್ತಿ, ಬಂಧನದ ಅಧಿಕಾರ: 'ಸುಪ್ರೀಂ' ಪರಿಶೀಲನೆ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ (ಪಿಎಂಎಲ್‌ಎ) ಆರೋಪಿಗಳ ಬಂಧನ ಹಾಗೂ ಆಸ್ತಿ ಜಪ್ತಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯಕ್ಕೆ ಇರುವ ಅಧಿಕಾರವನ್ನು ಎತ್ತಿಹಿಡಿದು ನೀಡಿದ್ದ ತೀರ್ಪು ಮರುಪರಿಶೀಲಿಸಲು ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿದೆ.

'ಸರಿ, ಇದರ ವಿಚಾರಣೆಗೆ ದಿನ ಗೊತ್ತುಪಡಿಸುತ್ತೇವೆ' ಎಂದು ಇದಕ್ಕೆ ಸಂಬಂಧಿಸಿದ ಅರ್ಜಿ ಪರಿಶೀಲನೆಗೆ ಬಂದಾಗ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ನ್ಯಾಯಪೀಠ ಹೇಳಿತು.

ಆರ್ಥಿಕವ್ಯವಸ್ಥೆಯಸುಗಮಕಾರ್ಯಾಚರಣೆಗೆ ಹಣ ಅಕ್ರಮ ವರ್ಗಾವಣೆಯು ಧಕ್ಕೆ ತರಲಿದೆ ಎಂಬುದು ಸಾಮಾನ್ಯ ಅಭಿಪ್ರಾಯ ಎಂದು ಸುಪ್ರೀಂ ಕೋರ್ಟ್ ಜುಲೈ 27ರಂದು ಅಭಿಪ್ರಾಯಪಟ್ಟಿತ್ತು. 'ಇದು, ಸಾಮಾನ್ಯ ಅಪರಾಧವಲ್ಲ' ಎಂದೂ ಪ್ರತಿಪಾದಿಸಿತ್ತು.

'ಹಣ ಅಕ್ರಮ ವರ್ಗಾವಣೆಯು ಅಪರಾಧ. ಇದನ್ನು ಕೆಲ ನಿರ್ಲಜ್ಜ ಉದ್ಯಮಿಗಳಷ್ಟೇ ಮಾಡುತ್ತಿಲ್ಲ; ಕೆಲ ಉಗ್ರ ಸಂಘಟನೆಗಳು ಮಾಡುತ್ತಿದ್ದು, ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರುತ್ತಿವೆ' ಎಂದು ಕೇಂದ್ರ ಸರ್ಕಾರವು ಪ್ರತಿಪಾದಿಸಿತ್ತು.

ಪ್ರೊಫೆಸರ್ ಹುದ್ದೆಗೆ ಸಿ.ಎಂ ಆಪ್ತನ ಪತ್ನಿ ಆಯ್ಕೆ: ಹೈಕೋರ್ಟ್ ತಡೆ

ತಿರುವನಂತಪುರ: ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಅವರ ಆಪ್ತ ಕಾರ್ಯದರ್ಶಿಯ ಪತ್ನಿಯನ್ನು ಕಣ್ಣೂರು ವಿಶ್ವವಿದ್ಯಾಲಯದ ಸಹಾಯಕ ಪ್ರೊಫೆಸರ್ ಹುದ್ದೆಗೆ ಮಾಡಿರುವ ಆಯ್ಕೆಯನ್ನು ಕೇರಳ ಹೈಕೋರ್ಟ್ ಸೋಮವಾರ ತಡೆಹಿಡಿದಿದೆ.

ಆಯ್ಕೆಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಜೋಸೆಫ್ ಸ್ಕಾರಿಯಾ ಅವರು ಪ್ರಿಯಾ ವರ್ಗೀಸ್ ಅವರ ಆಯ್ಕೆಯನ್ನು ತಡೆಹಿಡಿಯುವಂತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮುಖ್ಯಮಂತ್ರಿ ಅವರಿಗೆ ಹತ್ತಿರ ಇರುವ ಕಾರಣಕ್ಕೆ ಪ್ರಿಯಾ ಅವರಿಗೆ ಸಂದರ್ಶನ ಮಂಡಳಿ ಹೆಚ್ಚು ಅಂಕ ನೀಡಿದೆ ಎಂದು ಜೋಸೆಫ್ ಅವರು ಅರ್ಜಿಯಲ್ಲಿ ಆರೋಪಿಸಿದ್ದರು.

ಮುಖ್ಯಮಂತ್ರಿಯ ಆಪ್ತ ಕಾರ್ಯದರ್ಶಿ ಮತ್ತು ಮಾಜಿ ಸಂಸದ ಕೆ.ಕೆ. ರಾಜೇಶ್ ಅವರ ಪತ್ನಿ ಪ್ರಿಯಾ ವರ್ಗೀಸ್ ಅವರ ಆಯ್ಕೆಯು ಸ್ವಜನ ಪಕ್ಷಪಾತದಿಂದ ಕೂಡಿದೆ ಎಂಬ ಆರೋಪ ಕೇಳಿಬಂದಿತ್ತು. ಜತೆಗೆ ಪ್ರಿಯಾ ಅವರಿಗೆ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಹೇಳಿರುವಂತೆ ಪಾಠ ಮಾಡಿರುವ ಅನುಭವವೂ ಇಲ್ಲ ಎಂದೂ ಆರೋಪಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಪೆಗಾಸಸ್‌ನ ಸಿಇಒ ರಾಜೀನಾಮೆ

ಜೆರುಸಲೇಂ: ಇಸ್ರೇಲ್‌ನ ಎನ್‌ಎಸ್‌ಒ ಸಮೂಹದ ಪೆಗಾಸಸ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ(ಸಿಇಒ) ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಎನ್‌ಎಸ್‌ಒ ಖಾಸಗಿ ಕಂಪನಿಯಾಗಿದ್ದು, ಬೇಹುಗಾರಿಕೆಯ ಅಪ್ಲಿಕೇಶನ್‌ಗಳನ್ನು ಮಾರಾಟ ಮಾಡುತ್ತದೆ.

ಕಳೆದ ವರ್ಷದ ಜುಲೈನಲ್ಲಿ ಎನ್‌ಎಸ್‌ಒ ಕಂಪನಿ, ವಿವಿಧ ಸರ್ಕಾರಗಳಿಗೆ ಬೇಹುಗಾರಿಕೆ ಅಪ್ಲಿಕೇಶನ್ ಅನ್ನು ಮಾರಾಟ ಮಾಡುತ್ತಿದೆ ಎಂದು ತನಿಖಾ ವರದಿಯೊಂದು ಹೇಳಿತ್ತು.

ಪಾಕ್: ಇಮ್ರಾನ್‌ಗೆ ಜಾಮೀನು

ಇಸ್ಲಾಮಾಬಾದ್ (ಪಿಟಿಐ): ಭಯೋತ್ಪಾದಕ ಕೃತ್ಯ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಇಸ್ಲಾಮಾಬಾದ್ ಹೈಕೋರ್ಟ್ ಗುರುವಾರದವರೆಗೆ ರಕ್ಷಣಾ ಜಾಮೀನು ನೀಡಿದೆ.

ಕಳೆದ ಶನಿವಾರ ನಡೆದ ರ‍್ಯಾಲಿಯಲ್ಲಿ ಪೊಲೀಸ್, ನ್ಯಾಯಾಂಗ ಮತ್ತು ಇತರ ಸಂಸ್ಥೆಗಳಿಗೆ ಬೆದರಿಕೆ ಒಡ್ಡಿದ್ದ ಆರೋಪ ಸಂಬಂಧ ಇಮ್ರಾನ್ ಖಾನ್ ವಿರುದ್ಧ ಭಯೋತ್ಪಾದನೆ ವಿರೋಧಿ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

'ಕಾರು ಬಾಂಬ್ ಸ್ಫೋಟ ಉಕ್ರೇನ್ ಪ್ರಾಯೋಜಿತ'

ಮಾಸ್ಕೊ: 'ರಷ್ಯಾದ ರಾಷ್ಟ್ರವಾದಿ ಅಲೆಕ್ಸಾಂಡರ್ ಡುಗಿನಾ ಅವರ ಮಗಳು ಡೇರಿಯಾ ಡುಗಿನಾ ಅವರ ಹತ್ಯೆಯನ್ನು ಉಕ್ರೇನ್‌ನ ಗುಪ್ತಚರ ಸಂಸ್ಥೆಗಳೇ ಆಯೋಜಿಸಿವೆ' ಎಂದು ರಷ್ಯಾದ ಉನ್ನತ ಗುಪ್ತಚರ ಸಂಸ್ಥೆಯು ಸೋಮವಾರ ಆರೋಪಿಸಿದೆ.

ರಷ್ಯಾದ ಪ್ರಮುಖ ರಕ್ಷಣಾ ಏಜೆನ್ಸಿ ಕೆಜಿಬಿಯ ಭಾಗವಾಗಿರುವ ಫೆಡರಲ್ ಸೆಕ್ಯುರಿಟಿ ಸರ್ವೀಸ್, 'ಡೇರಿಯಾ ಡುಗಿನಾ ಅವರ ಹತ್ಯೆಯನ್ನು ಉಕ್ರೇನ್‌ನ ವಿಶೇಷ ಸೇವಾ ಸಿಬ್ಬಂದಿಯಿಂದ ಸಿದ್ಧಪಡಿಸಿ, ಕಾರ್ಯರೂಪಕ್ಕೆ ತರಲಾಗಿದೆ. ಹತ್ಯೆ ನಡೆದ ಬಳಿಕ ಉಕ್ರೇನ್‌ನ ಪ್ರಜೆ ರಷ್ಯಾವನ್ನು ತೊರೆದಿದ್ದಾಳೆ' ಎಂದು ಹೇಳಿದೆ.

ಶ್ರೀಲಂಕಾದಿಂದ ನಿರ್ಗಮಿಸಿದ ಚೀನಾ ಹಡಗು

ಹಂಬಂಟೋಟಾ: ಭಾರತ ಮತ್ತು ಅಮೆರಿಕದ ಆಕ್ಷೇಪದ ಹೊರತಾಗಿಯೂ, ಶ್ರೀಲಂಕಾದ ಹಂಬಂಟೋಟ ಬಂದರಿನಲ್ಲಿ ಲಂಗರು ಹಾಕಿದ್ದ ಚೀನಾದ ಬೇಹುಗಾರಿಕಾ ನೌಕೆ ಸೋಮವಾರ ಅಲ್ಲಿಂದ ನಿರ್ಗಮಿಸಿದೆ.

ಆಗಸ್ಟ್ 16ರಂದು ಶ್ರೀಲಂಕಾದ ಹಂಬಂಟೋಟದಲ್ಲಿರುವ, ಚೀನಾ ನಿರ್ಮಿತ ಬಂದರಿಗೆ ಬಂದಿದ್ದ 'ಯುವಾನ್ ವಾಂಗ್ 5' ಹೆಸರಿನ ಚೀನಾ ನೌಕೆ ಏಳು ದಿನಗಳ ಕಾಲ ಅಲ್ಲಿಯೇ ಲಂಗರು ಹಾಕಿತ್ತು.

ಯಾವುದೇ ಬೇಹುಗಾರಿಕಾ ಚಟುವಟಿಕೆಗಳಲ್ಲಿ ತೊಡಗದಂತೆ ಷರತ್ತು ವಿಧಿಸಿ ಲಂಗರು ಹಾಕಲು ಹಡಗಿಗೆ ಶ್ರೀಲಂಕಾ ಸರ್ಕಾರ ಅವಕಾಶ ನೀಡಿತ್ತು.

ಭಾರತೀಯ ವಿದ್ಯಾರ್ಥಿಗಳಿಗೆ ವೀಸಾ: ಚೀನಾ

ಬೀಜಿಂಗ್ (ಪಿಟಿಐ): ಕೋವಿಡ್ ಕಠಿಣ ನಿರ್ಬಂಧದಿಂದಾಗಿ ಎರಡು ವರ್ಷಗಳ ಕಾಲ ಸ್ವದೇಶದಲ್ಲಿ ಉಳಿದಿರುವ ನೂರಾರು ಭಾರತೀಯ ವಿದ್ಯಾರ್ಥಿಗಳಿಗೆ ವೀಸಾ ನೀಡುವುದಾಗಿ ಚೀನಾ ಸೋಮವಾರ ಪ್ರಕಟಿಸಿದೆ.

ವಾಣಿಜ್ಯ ಉದ್ದೇಶದ ವೀಸಾಗಳೂ ಸೇರಿ ವಿವಿಧ ವರ್ಗದ ವೀಸಾಗಳನ್ನು ನೀಡುವ ಮೂಲಕ ಭಾರತೀಯರಿಗೆ ಚೀನಾ ಪ್ರಯಾಣಕ್ಕೆ ಅವಕಾಶ ನೀಡಲಾಗುತ್ತಿದೆ ಎಂದು ಚೀನಾ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಏಷ್ಯಾ ವ್ಯವಹಾರಗಳ ಇಲಾಖೆಯ ಕೌನ್ಸೆಲರ್ ಜಿ ರೊಂಗ್ ಟ್ವೀಟ್ ಮಾಡಿದ್ದಾರೆ.

ಜಿ ರೊಂಗ್ ಅವರ ಟ್ವೀಟ್ ಉಲ್ಲೇಖಿಸಿ ನವದೆಹಲಿಯಲ್ಲಿನ ಚೀನಾ ರಾಯಭಾರ ಕಚೇರಿಯು ವಿದ್ಯಾರ್ಥಿಗಳು, ಉದ್ಯಮಿಗಳು ಮತ್ತು ಚೀನಾದಲ್ಲಿ ಉದ್ಯೋಗನಿರತ ಕುಟುಂಬಗಳಿಗೆ ವೀಸಾ ವಿತರಿಸಲಾಗುವುದು ಎಂದು ಪ್ರಕಟಣೆ ಹೊರಡಿಸಿದೆ.

ಚೀನಾದಲ್ಲಿ ಶಿಕ್ಷಣಮುಂದುವರಿಸಲು ಬಯಸುವವರ ಪಟ್ಟಿ ನೀಡಲು ಚೀನಾ ಕೋರಿದ ನಂತರ, ನೂರಾರು ವಿದ್ಯಾರ್ಥಿಗಳ ಪಟ್ಟಿಯನ್ನು ಭಾರತ ಸಲ್ಲಿಸಿದೆ.

ರಷ್ಯಾದ ಫೆಡರಲ್ ಸೆಕ್ಯೂರಿಟಿ ಸರ್ವೀಸಸ್‌ನಿಂದ ಮಾಹಿತಿ

ಐಎಸ್ ಉಗ್ರನಿಗೆ ಟೆಲಿಗ್ರಾಂನಲ್ಲಿ ತರಬೇತಿ

ಮಾಸ್ಕೊ (ಪಿಟಿಐ): 'ಪ್ರವಾದಿ ಮಹಮ್ಮದರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದ ಭಾರತದ ನಾಯಕರ ಹತ್ಯೆಗೆ ನಿಯೋಜಿತನಾಗಿದ್ದ ಉಗ್ರನಿಗೆ ಇಸ್ಲಾಮಿಕ್ ಸ್ಟೇಟ್ ನಾಯಕರು ಟೆಲಿಗ್ರಾಂ ಮೆಸೆಂಜರ್ ಮೂಲಕ ತರಬೇತಿ ನೀಡಿದ್ದರು' ಎಂದು ರಷ್ಯಾದ ಫೆಡರಲ್ ಸೆಕ್ಯೂರಿಟಿ ಸರ್ವೀಸಸ್ (ಎಫ್‌ಎಸ್‌ಬಿ) ಹೇಳಿದೆ.

'ಈಚಿನ ವರ್ಷಗಳಲ್ಲಿ ಉಗ್ರ ಸಂಘಟನೆಗಳು ನೇಮಕಾತಿ, ತರಬೇತಿ ಮತ್ತು ದಾಳಿ ನಿಯೋಜನೆ ಚಟುವಟಿಕೆಗಳನ್ನು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳ ಮೂಲಕ ನಡೆಸುತ್ತಿವೆ. ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರರ ಆನ್‌ಲೈನ್ ಚಟುವಟಿಕೆಗಳು ಗರಿಷ್ಠ ಪ್ರಮಾಣದಲ್ಲಿವೆ. ಐಎಸ್ ಅನ್ನು ರಷ್ಯಾದಲ್ಲಿ ನಿಷೇಧಿಸಲಾಗಿದೆ. ಅದರ ಎಲ್ಲಾ ಚಟುವಟಿಕೆಗಳ ಮೇಲೆ ಕಣ್ಣಿರಿಸಲಾಗಿದೆ. ಹೀಗಾಗಿಯೇ ಭಾರತದ ನಾಯಕರ ಹತ್ಯೆಗೆ ರೂಪಿಸಿದ್ದ ಯೋಜನೆಯನ್ನು ಪತ್ತೆ ಮಾಡಲು ಸಾಧ್ಯವಾಯಿತು' ಎಂದು ಎಫ್‌ಎಸ್‌ಬಿ ವಿವರಿಸಿದೆ.

> ### ನೂಪುರ್ ಶರ್ಮಾ ಗುರಿ?
>
> ಬಿಜೆಪಿಯ ಉಚ್ಚಾಟಿತ ವಕ್ತಾರೆ ನೂಪುರ್ ಶರ್ಮಾ ಅವರು ಐಎಸ್ ದಾಳಿಯ ಗುರಿಯಾಗಿದ್ದರೇ ಎಂಬುದರ ಬಗ್ಗೆ ಚರ್ಚೆಯಾಗುತ್ತಿದೆ.
>
> 'ಭಾರತದ ನಾಯಕರೊಬ್ಬರು ಪ್ರವಾದಿ ಮಹಮ್ಮದರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದನ್ನು ಕೇಳಿದ್ದೆ. ಅದು ದೊಡ್ಡ ಸುದ್ದಿಯಾಗಿತ್ತು. ಮಹಮ್ಮದರಿಗೆ ಮಾಡಿದ ಅವಮಾನಕ್ಕೆ ಪ್ರತಿಯಾಗಿ ಅವರನ್ನು ಕೊಲ್ಲಲು ಯೋಜಿಸಿದ್ದೆ. ನಾನೇ ಅಲ್ಲಿ ಬಾಂಬ್ ಸ್ಫೋಟಿಸಿಕೊಂಡು ಅವರನ್ನು ಕೊಲ್ಲಲು ಸಿದ್ಧವಾಗಿದ್ದೆ' ಎಂದು ಹೇಳಿದ್ದಾನೆ ಎಂದು ಎಫ್‌ಎಸ್‌ಎಸ್ ಹೇಳಿದೆ.
>
> ನೂಪುರ್ ಶರ್ಮಾ ಮತ್ತು ದೆಹಲಿ ಬಿಜೆಪಿ ಮಾಧ್ಯಮ ಘಟಕದ ಮುಖ್ಯಸ್ಥರಾಗಿದ್ದ ನವೀನ್ ಕುಮಾರ್ ಜಿಂದಾಲ್ ಅವರು ಪ್ರವಾದಿ ಮಹಮ್ಮದರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದರು. ಇದಕ್ಕೆ ದೇಶದಾದ್ಯಂತ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಮುಸ್ಲಿಂ ರಾಷ್ಟ್ರಗಳು ಸಹ ಈ ಬಗ್ಗೆ ತಮ್ಮ ಆಕ್ಷೇಪ ದಾಖಲಿಸಿದ್ದವು. ಈ ಇಬ್ಬರು ನಾಯಕರ ವಿರುದ್ಧ ಬಿಜೆಪಿ ಕ್ರಮ ತೆಗೆದುಕೊಂಡಿತ್ತು. ನೂಪುರ್ ಶರ್ಮಾ ಅವರಿಗೆ ಜೀವ ಬೆದರಿಕೆ ಕರೆಗಳು ಬಂದ ಕಾರಣ ಅವರಿಗೆ ಭದ್ರತೆ ನೀಡಲಾಗಿದೆ.

'ಈ ದಾಳಿಗೆ ನಿಯೋಜಿತನಾಗಿದ್ದ ಉಗ್ರನನ್ನು ಐಎಸ್ 'ರಿಂಗ್ ಲೀಡರ್'ಗಳು ಇದೇ ಏಪ್ರಿಲ್ ಮತ್ತು ಜೂನ್ ಮಧ್ಯೆ ಸಂಪರ್ಕಿಸಿದ್ದಾರೆ. ತಮ್ಮ ಸಿದ್ಧಾಂತಗಳನ್ನು ಆತನಿಗೆ ಟೆಲಿಗ್ರಾಂ ಮೆಸೆಂಜರ್ ಆ್ಯಪ್ ಮೂಲಕ ಬೋಧಿಸಿದ್ದಾರೆ. ದಾಳಿ ಸಂಬಂಧ ಯೋಜನೆ ರೂಪಿಸಲು ಐಎಸ್ ರಿಂಗ್ ಲೀಡರ್‌ಗಳು ಆತನನ್ನು ಟರ್ಕಿಯ ಇಸ್ತಾಂಬುಲ್‌ನಲ್ಲಿ ಎರಡು ಬಾರಿ ಭೇಟಿ ಮಾಡಿದ್ದಾರೆ. ಈ ಮಾಹಿತಿಯನ್ನು ಬಂಧಿತನೇ ಬಹಿರಂಗಪಡಿಸಿದ್ದಾನೆ' ಎಂದು ರಷ್ಯಾ ಹೇಳಿದೆ.

'ಯೋಜನೆ ಸಿದ್ಧವಾದ ನಂತರ ಐಎಸ್ ಮುಖ್ಯಸ್ಥರು ಈ ಉಗ್ರನ ಜತೆಗೆ ಮಾತನಾಡಿದ್ದಾರೆ. ಆನಂತರ ಆತ ರಷ್ಯಾಕ್ಕೆ ಬಂದಿದ್ದಾನೆ. ಭಾರತಕ್ಕೆ ಹೋಗಲು ಅಗತ್ಯವಿದ್ದ ದಾಖಲೆಗಳನ್ನು ರಷ್ಯಾದಲ್ಲಿ ಹೊಂದಿಸಿಕೊಳ್ಳುವಂತೆ ಆತನಿಗೆ ಸೂಚನೆ ನೀಡಲಾಗಿತ್ತು. ಆನಂತರ ಭಾರತಕ್ಕೆ ತೆರಳಿ, ದಾಳಿಯನ್ನು ನಡೆಸಲು ಸೂಚಿಸಲಾಗಿತ್ತು' ಎಂದು ಎಫ್‌ಎಸ್‌ಎಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಂಧಿತ ಯಾವ ದೇಶದವನು?: ಬಂಧಿತ ಉಗ್ರ ಯಾವ ದೇಶದವನು ಎಂಬುದನ್ನು ರಷ್ಯಾ ಬಹಿರಂಗಪಡಿಸಿಲ್ಲ. ಆತ ಮಧ್ಯ ಏಷ್ಯಾದ ದೇಶದವನು ಎಂದಷ್ಟೇ ಹೇಳಿದೆ. ಆದರೆ, ಟರ್ಕಿಯ ಇಸ್ತಾಂಬುಲ್‌ನಲ್ಲಿ ಆತ ಐಎಸ್ ನಾಯಕರನ್ನು ಭೇಟಿ ಮಾಡಿದ್ದ ಎಂದು ಎಫ್‌ಎಸ್‌ಎಸ್ ಹೇಳಿದೆ. ಇದನ್ನು ಟರ್ಕಿ ಸರ್ಕಾರದ ಸುದ್ದಿ ಸಂಸ್ಥೆ ತಾಸ್ ಸಹ ದೃಢಪಡಿಸಿದೆ.

ಹುಕ್ಕಾ ಬಾರ್, ಮಾದಕವಸ್ತು ದಂಧೆ: 800 ಜನರ ಬಂಧನ

ಲಖನೌ (ಪಿಟಿಐ): ಹುಕ್ಕಾ ಬಾರ್ ಮತ್ತು ಮಾದಕ ದ್ರವ್ಯ ಕಳ್ಳಸಾಗಣೆ ಜಾಲ ಗುರಿಯಾಗಿಸಿ ಉತ್ತರಪ್ರದೇಶ ಪೊಲೀಸರು ರಾಜ್ಯದಾದ್ಯಂತ ಏಕ ಕಾಲಕ್ಕೆ ದಾಳಿ ನಡೆಸಿ, ಸುಮಾರು 800 ಜನರನ್ನು ಬಂಧಿಸಿದ್ದಾರೆ. ಅಲ್ಲದೇ ₹5.58 ಕೋಟಿ ಮೌಲ್ಯದ ಮಾದಕ ವಸ್ತು ವಶಪಡಿಸಿಕೊಂಡಿದ್ದಾರೆ.

ಆಗ್ರಾ, ಬರೇಲಿ, ಗೋರಖ್‌ಪುರ, ಬಸ್ತಿ, ಸಂತ ಕಬೀರನಗರ, ಸಿದ್ಧಾರ್ಥನಗರ, ರಾಯ್‌ಬರೇಲಿ, ಉನ್ನಾವ್, ಅಯೋಧ್ಯೆ, ಬಾರಾಬಂಕಿ, ಮೀರತ್, ಗಾಜಿಯಾಬಾದ್, ಸಹರಾನ್‌ಪುರ, ಗಾಜಿಪುರ, ಪ್ರಯಾಗ್‌ರಾಜ್, ಲಖನೌ, ಕಾನ್ಪುರ, ವಾರಾಣಸಿ, ಗೌತಮಬುದ್ಧ ನಗರ ಸೇರಿ ರಾಜ್ಯದ 4,338 ಸ್ಥಳಗಳಲ್ಲಿ ಭಾನುವಾರ ಕಾರ್ಯಾಚರಣೆ ನಡೆಸಲಾಯಿತು. 22 ಜಿಲ್ಲೆಗಳಲ್ಲಿ 342 ಹುಕ್ಕಾ ಬಾರ್‌ಗಳ ಮೇಲೂ ದಾಳಿ ನಡೆಸಲಾಯಿತು. 702 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಜಯ್ ರಾವುತ್ ನ್ಯಾಯಾಂಗ ಬಂಧನ ಸೆ. 5ರವರೆಗೆ ವಿಸ್ತರಣೆ

ಮುಂಬೈ: ಶಿವಸೇನಾ ಸಂಸದ ಸಂಜಯ್ ರಾವುತ್ ನ್ಯಾಯಾಂಗ ಬಂಧನದ ಅವಧಿಯನ್ನು ಇಲ್ಲಿನ ವಿಶೇಷ ನ್ಯಾಯಾಲಯವು ಸೆಪ್ಟೆಂಬರ್ 5ರವರೆಗೆ ವಿಸ್ತರಿಸಿ ಸೋಮವಾರ ಆದೇಶ ನೀಡಿದೆ.

ಪತ್ರಾ ಚಾಳ್ ಭೂಹಗರಣದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾವುತ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಆಗಸ್ಟ್ 1ರಂದು ವಶಕ್ಕೆ ಪಡೆದು ಬಳಿಕ ಬಂಧಿಸಿದ್ದರು.

ಆಗಸ್ಟ್ 8ರಂದು ನ್ಯಾಯಾಲಯವು ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶ ನೀಡಿತ್ತು. ಸೋಮವಾರ ರಾವುತ್ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ವಿಚಾರಣೆ ಬಳಿಕ ನ್ಯಾಯಾಂಗ ಬಂಧನದ ಅವಧಿ ವಿಸ್ತರಿಸಲಾಯಿತು.

ಎಐಎಫ್‌ಎಫ್: ಫಿಫಾ ಷರತ್ತುಗಳಿಗೆ ಕೇಂದ್ರ ಅಸ್ತು; ಸಿಒಎ ರದ್ದುಗೊಳಿಸಿದ ಸುಪ್ರೀಂ ಕೋರ್ಟ್

ಅಮಾನತು ತೆರವಿಗೆ ಹಾದಿ ಸುಗಮ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಆಡಳಿತದ ಸುಧಾರಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ತೀರ್ಪನ್ನು ಮಾರ್ಪಾಡು ಮಾಡಿರುವುದರಿಂದ ಅಮಾನತು ತೆರವಿನ ಹಾದಿ ಸುಗಮವಾಗಿದೆ.

ಪ್ರಫುಲ್ ಪಟೇಲ್ ಅವರನ್ನು ಎಐಎಫ್‌ಎಫ್ ಅಧ್ಯಕ್ಷ ಸ್ಥಾನದಿಂದ ಮೇ 18 ರಂದು ಕೆಳಗಿಳಿಸಿದ್ದ ಸುಪ್ರೀಂ ಕೋರ್ಟ್, ನಿವೃತ್ತ ನ್ಯಾಯಮೂರ್ತಿ ಎ.ಆರ್. ದವೆ, ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ. ಖುರೇಷಿ ಹಾಗೂ ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಭಾಸ್ಕರ್ ಗಂಗೂಲಿ ಅವರಿದ್ದ ಆಡಳಿತ ಸಮಿತಿಯನ್ನು (ಸಿಒಎ) ನೇಮಿಸಿತ್ತು.

ಆದರೆ ತನ್ನ ತೀರ್ಪನ್ನು ಮಾರ್ಪಾಡು ಮಾಡಿರುವ ಸುಪ್ರೀಂ ಕೋರ್ಟ್, ಸಿಒಎಯ ಅಸ್ತಿತ್ವವನ್ನು ರದ್ದುಗೊಳಿಸಿದೆ. ಮೇ 18 ಮತ್ತು ಆ.3 ರಂದು ನೀಡಿದ್ದ ಆದೇಶಗಳನ್ನು ಮಾರ್ಪಾಡು ಮಾಡುವಂತೆ ಕೋರಿ ಕೇಂದ್ರ ಕ್ರೀಡಾ ಸಚಿವಾಲಯ ಸಲ್ಲಿಸಿದ್ದ ಅರ್ಜಿಯ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಸೋಮವಾರ ಹೊಸ ಆದೇಶ ಹೊರಡಿಸಿದೆ.

‘ಈ ಪ್ರಕ್ರಿಯೆಯು ತಾರ್ಕಿಕ ಅಂತ್ಯ ಕಾಣದೇ ಇದ್ದರೆ, ಮುಂದಿನ ದಿನಗಳಲ್ಲಿ ಅಗತ್ಯಬಿದ್ದರೆ ಬೇರೆ ಆದೇಶ ಹೊರಡಿಸಲಾಗುವುದು’ ಎಂದು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ಪೀಠ ಹೇಳಿದೆ.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ‘ಹಿಂದಿನ ತೀರ್ಪು ಮಾರ್ಪಾಡು ಮಾಡದಿದ್ದರೆ ದೇಶವು ಎರಡು ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ವಿಶ್ವಕಪ್ ಆತಿಥ್ಯದ ಹಕ್ಕನ್ನು ಭಾರತ ಕಳೆದುಕೊಳ್ಳಲಿದೆ. ನಮ್ಮ ತಂಡ ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡುವ ಅವಕಾಶ ಕಳೆದುಕೊಳ್ಳಲಿದೆ’ ಎಂಬುದನ್ನು ಪೀಠದ ಗಮನಕ್ಕೆ ತಂದರು.

ಚುನಾವಣೆ ಮುಂದೂಡಿಕೆ: ಮತದಾರರ ಪಟ್ಟಿ ಪರಿಷ್ಕರಣೆ ಮತ್ತು ನಾಮಪತ್ರ ಸಲ್ಲಿಕೆ ಪ್ರಕ್ರಿಯೆಗೆ ಅನುಕೂಲ ಕಲ್ಪಿಸಲು ಎಐಎಫ್‌ಎಫ್ ಚುನಾವಣೆಯನ್ನು ಸುಪ್ರೀಂ ಕೋರ್ಟ್ ಒಂದು ವಾರ ಮುಂದೂಡಿದೆ. ಚುನಾವಣೆಯನ್ನು ಆ.28 ರಂದು ನಡೆಸಲು ಉದ್ದೇಶಿಸಲಾಗಿತ್ತು.

ಚುನಾವಣೆಗೆ ಮತದಾರರ ಪಟ್ಟಿಯು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಫುಟ್‌ಬಾಲ್ ಸಂಸ್ಥೆಗಳ 36 ಪ್ರತಿನಿಧಿಗಳನ್ನು ಒಳಗೊಂಡಿರಲಿದೆ ಎಂದು ಪೀಠ ಹೇಳಿದೆ. ರಾಜ್ಯ ಸಂಸ್ಥೆಗಳ ಪ್ರತಿನಿಧಿಗಳ ಜತೆ 36 ಮಾಜಿ ಆಟಗಾರರಿಗೆ ಮತದಾನದ ಹಕ್ಕು ನೀಡಬೇಕೆಂಬ ಸಿಒಎ ಸೂಚನೆ ರದ್ದುಗೊಂಡಿದೆ.

ಎಐಎಫ್‌ಎಫ್ ಚುನಾವಣೆಗೆ ಸಿಒಎ ನೇಮಿಸಿದ್ದ ಚುನಾವಣಾ ಅಧಿಕಾರಿ ಉಮೇಶ್ ಸಿನ್ಹಾ ಮತ್ತು ಸಹಾಯಕ ಚುನಾವಣಾ ಅಧಿಕಾರಿ ತಪಸ್ ಭಟ್ಟಾಚಾರ್ಯ ಅವರೇ ಮುಂದುವರಿಯಲಿದ್ದಾರೆ ಎಂದು ಪೀಠ ಹೇಳಿದೆ.

‘ಮೂರನೇ ವ್ಯಕ್ತಿಗಳ ಅನಗತ್ಯ ಹಸ್ತಕ್ಷೇಪ’ದ ಕಾರಣ ಮುಂದಿಟ್ಟು, ಆ.16 ರಂದು ಫಿಫಾ, ಎಐಎಫ್‌ಎಫ್ ಮೇಲೆ ಅಮಾನತು ಹೇರಿತ್ತು. ಆ.17 ರಂದು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದ ಕೇಂದ್ರ, ‘ಅಮಾನತು ತೆರವಿಗೆ ಮಧ್ಯಪ್ರವೇಶಿಸಬೇಕು’ ಎಂದು ಕೋರಿತ್ತು. ಫಿಫಾ ಷರತ್ತುಗಳಿಗೆ ಕೇಂದ್ರ ಸರ್ಕಾರ ಅಸ್ತು ಎಂದಿತ್ತು.

‘ಕ್ರಿಕೆಟ್ ವಿಶ್ವಕಪ್ ಆಗಿದ್ದರೆ...’



ಬೈಚುಂಗ್ ಭುಟಿಯಾ

ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ ಮತ್ತು ಸಿಒಎ ಸದಸ್ಯರು ತೀರ್ಪಿನ ಮಾರ್ಪಾಡು ನಿರ್ಧಾರವನ್ನು ವಿರೋಧಿಸಿದರು. ‘ಎಐಎಫ್‌ಎಫ್ ಆಡಳಿತ ಸುಧಾರಣೆ ಕ್ರಮವನ್ನು ಫಿಫಾ ಒತ್ತಡಕ್ಕೆ ಮಣಿದು ಅರ್ಧಕ್ಕೆ ಕೈಬಿಡಬಾರದು’ ಎಂದು ಕೋರಿದರು.

ಅದಕ್ಕೆ ಪೀಠ, ‘ಪರಿಸ್ಥಿತಿಯ ಗಂಭೀರತೆ ನಮಗೆ ಅರ್ಥವಾಗಿದೆ. ಆದರೆ ದೇಶದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, 17 ವರ್ಷದೊಳಗಿನ ವಿಶ್ವಕಪ್ ಟೂರ್ನಿಯನ್ನು ತ್ಯಾಗ ಮಾಡಲು ಸಾಧ್ಯವಿಲ್ಲ’ ಎಂದಿತು.

‘ಅದು ಫುಟ್‌ಬಾಲ್ ಬದಲು ಕ್ರಿಕೆಟ್ ವಿಶ್ವಕಪ್ ಆಗಿದ್ದರೆ ಮತ್ತು ನ್ಯಾಯಾಲಯದ ಆದೇಶದಿಂದಾಗಿ ರದ್ದುಗೊಂಡಿದ್ದರೆ ಎಲ್ಲರೂ ನಮ್ಮನ್ನು ಗುರಿಯಾಗಿಸುತ್ತಿದ್ದರು. ವಿಶ್ವಕಪ್ ಟೂರ್ನಿ ನಿಗದಿಯಂತೆ ಭಾರತದಲ್ಲಿ ನಡೆಯಬೇಕು ಎಂಬುದೇ ನಮ್ಮ ಕಾಳಜಿ’ ಎಂದು ಹೇಳಿತು.

‘ಹುದ್ದೆಯಲ್ಲಿ ಆಸಕ್ತಿಯಿಲ್ಲ’

ಎಐಎಫ್‌ಎಫ್ ಮಾಜಿ ಅಧ್ಯಕ್ಷ ಪ್ರಫುಲ್ ಪಟೇಲ್ ಅವರನ್ನು ಪ್ರತಿನಿಧಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ‘ಎಐಎಫ್‌ಎಫ್‌ನಲ್ಲಿ ಯಾವುದೇ ಹುದ್ದೆ ವಹಿಸಿಕೊಳ್ಳುವುದರಲ್ಲಿ ಪ್ರಫುಲ್‌ಗೆ ಆಸಕ್ತಿಯಿಲ್ಲ. ವಿಶ್ವಕಪ್ ಟೂರ್ನಿಯ ಆತಿಥ್ಯವನ್ನು ಅವರು ಭಾರತಕ್ಕೆ ತಂದಿದ್ದಾರೆ. ಅದು ಭಾರತದಲ್ಲೇ ನಡೆಯಬೇಕು ಎಂಬುದಷ್ಟೇ ಅವರ ಬಯಕೆ’ ಎಂಬ ವಿಚಾರವನ್ನು ಪೀಠದ ಗಮನಕ್ಕೆ ತಂದರು.



ಎನ್‌. ಸಿಕ್ಕಿರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ– ಪಿಟಿಐ ಚಿತ್ರ

ವಿಶ್ವ ಬ್ಯಾಡ್ಮಿಂಟನ್: ಕಿದಂಬಿ ಶ್ರೀಕಾಂತ್, ಪ್ರಣಯ್‌ಗೆ ಜಯ

ಲಕ್ಷ್ಯ, ಅಶ್ವಿನಿ–ಸಿಕ್ಕಿ ಶುಭಾರಂಭ

ಟೋಕಿಯೊ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್, ಭಾರತದ ಲಕ್ಷ್ಯ ಸೇನ್ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದ್ದಾರೆ. ಆದರೆ ಬಿ.ಸಾಯಿ ಪ್ರಣೀತ್ ಮೊದಲ ಸುತ್ತಿನಲ್ಲೇ ಎಡವಿದರು.

ಸೋಮವಾರ ಇಲ್ಲಿ ಆರಂಭವಾದ ಟೂರ್ನಿಯ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಲಕ್ಷ್ಯ 21-12, 21-11ರಿಂದ ಡೆನ್ಮಾರ್ಕ್‌ನ ಹಾನ್ಸ್ ಕ್ರಿಸ್ಟಿಯನ್ ಸೋಲ್‌ಬರ್ಗ್ ವಿಟಿಂಗಸ್ ಅವರನ್ನು ಪರಾಭವಗೊಳಿಸಿದರು.

ಇಲ್ಲಿ 9ನೇ ಶ್ರೇಯಾಂಕ ಪಡೆದಿರುವ ಲಕ್ಷ್ಯ, ಅದ್ಭುತ ಕ್ರಾಸ್‌ಕೋರ್ಟ್ ರಿಟರ್ನ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು.

ಕಿದಂಬಿ ಶ್ರೀಕಾಂತ್ 22–20, 21-19ರಿಂದ ಐರ್ಲೆಂಡ್‌ನ ನಹತ್ ಎನ್‌ಗುಯೆನ್ ಎದುರು, ಎಚ್.ಎಸ್. ಪ್ರಣಯ್ 21–12, 21–11ರಿಂದ ಆಸ್ಟ್ರಿಯಾದ ಲೂಕಾ ರಾಬರ್ ಅವರನ್ನು ಪರಾಭವಗೊಳಿಸಿ ಎರಡನೇ ಸುತ್ತು ತಲುಪಿದರು.

ಪ್ರಣೀತ್ 15–21, 21–15, 15–21ರಿಂದ ಚೀನಾ ತೈಪೆಯ, ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಚೊ ಟಿಯೆನ್ ಚೆನ್ ಎದುರು ಮುಗ್ಗರಿಸಿದರು.

ಮಹಿಳಾ ಡಬಲ್ಸ್‌ನಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ– ಎನ್.ಸಿಕ್ಕಿ ರೆಡ್ಡಿ ಜೋಡಿಯು ಮುನ್ನಡೆಯಿತು. ಭಾರತದ ಆಟಗಾರ್ತಿಯರು ಮೊದಲ ಪಂದ್ಯದಲ್ಲಿ 21-7, 21-9ರಿಂದ ಮಾಲ್ದೀವ್ಸ್‌ನ ಅಮಿನತ್ ನಬೀಹಾ ಅಬ್ದುಲ್ ರಜಾಕ್– ಫಾತಿಮಾ ನಭಾಹಾ ಅಬ್ದುಲ್ ರಜಾಕ್ ಎದುರು ಗೆದ್ದರು. ಎರಡನೇ ಸುತ್ತಿನಲ್ಲಿ ಅಶ್ವಿನಿ–ಸಿಕ್ಕಿ, ಅಗ್ರಶ್ರೇಯಾಂಕದ ಜೋಡಿ, ಚೀನಾದ ಚೆನ್ ಕಿಂಗ್ ಚೆನ್ ಮತ್ತು ಜಿಯಾ ಯಿ ಫಾನ್ ಅವರನ್ನು ಎದುರಿಸುವರು.

ಮಿಶ್ರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ– ಇಶಾನ್ ಭಟ್ನಾಗರ್ 21-13 21-13ರಿಂದ ಜರ್ಮನಿಯ ಪ್ಯಾಟ್ರಿಕ್ ಶಿಯಲ್– ಫ್ರಾನ್ಸಿಸ್ಕಾ ವೊಲ್ಕಮನ್ ವಿರುದ್ಧ ಗೆದ್ದರು. ಪುರುಷರ ಡಬಲ್ಸ್‌ನಲ್ಲಿ ಬಿ.ಸುಮೀತ್ ರೆಡ್ಡಿ– ಮನು ಅತ್ರಿ ನಿರಾಸೆ ಅನುಭವಿಸಿದರು. ಮೊದಲ ಸುತ್ತಿನಲ್ಲಿ ಅವರು 11-21, 21-19, 15-21ರಿಂದ ಜಪಾನ್‌ನ ಮಸಾಯುಕಿ ಒನೊದೆರಾ– ಹಿರೋಕಿ ಎದುರು ಸೋತರು.

ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋದ್ 14-21, 12-21ರಿಂದ ಡೆನ್ಮಾರ್ಕ್‌ನ ಲಿನೆ ಕ್ರಿಸ್ಟೊಫರ್ಸನ್ ಎದುರು ಮಣಿದರು.

ಕೆಂಟೊ ಮೊಮೊಟಾ ಜಯಭೇರಿ

ಜಪಾನ್‌ನ ಬ್ಯಾಡ್ಮಿಂಟನ್ ತಾರೆ ಕೆಂಟೊ ಮೊಮೊಟಾ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಜಯ ಗಳಿಸುವ ಮೂಲಕ ತವರಿನ ಅಭಿಮಾನಿಗಳಲ್ಲಿ ಪುಳಕ ಮೂಡಿಸಿದರು.

ಎರಡು ವರ್ಷಗಳ ಹಿಂದೆ ಮಲೇಷ್ಯಾದಲ್ಲಿ ನಡೆದ ಕಾರು ಅಪಘಾತದಲ್ಲಿ ಮೊಮೊಟಾ ಗಂಭೀರವಾಗಿ ಗಾಯಗೊಂಡಿದ್ದರು. ಆ ಬಳಿಕ ಸುಮಾರು ದಿನಗಳಿಂದ ಕಣಕ್ಕಿಳಿದಿರಲಿಲ್ಲ. ಸೋಮವಾರ ಅವರು 21-16, 21-14ರಿಂದ ಮೆಕ್ಸಿಕೊದ ಲಿನೊ ಮುನೊಜ್ ವಿರುದ್ಧ ಗೆದ್ದರು.

ಏಕದಿನ ಕ್ರಿಕೆಟ್ ಸರಣಿ: ಜಿಂಬಾಬ್ವೆ ಸೋಲಿನಲ್ಲೂ ಮಿಂಚಿದ ಸಿಕಂದರ್ ರಝಾ

ಗಿಲ್ ಶತಕ: ಭಾರತ ‘ಕ್ಲೀನ್‌ಸ್ವೀಪ್’ ಸಾಧನೆ

ಹರಾರೆ (ಪಿಟಿಐ): ಯುವ ಆಟಗಾರ ಶುಭಮನ್ ಗಿಲ್ ಅವರ ಚೊಚ್ಚಲ ಶತಕ ಭಾರತದ ಸರಣಿ ‘ಕ್ಲೀನ್‌ಸ್ವೀಪ್’ ಸಾಧನೆಗೆ ಕಾರಣವಾದರೆ, ಸಿಕಂದರ್ ರಝಾ ಅವರ ಹೋರಾಟದ ಶತಕ ಜಿಂಬಾಬ್ವೆಗೆ ಸೋಲಿನಲ್ಲೂ ಅಲ್ಪ ಸಮಾಧಾನ ನೀಡಿತು.

ಹರಾರೆ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಮೂರನೇ ಏಕದಿನ ಪಂದ್ಯವನ್ನು ಭಾರತ 13 ರನ್‌ಗಳಿಂದ ಗೆದ್ದಿತು. ಇದರೊಂದಿಗೆ ಕೆ.ಎಲ್.ರಾಹುಲ್ ಬಳಗ ಸರಣಿಯನ್ನು 3–0 ರಲ್ಲಿ ಜಯಿಸಿತು.

ಮೊದಲ ಬ್ಯಾಟ್ ಮಾಡಿದ ಭಾರತ ಶುಭಮನ್ (130ರನ್, 97 ಎ., 4X15, 6X1) ಅವರ ಭರ್ಜರಿ ಶತಕದ ಬಲದಿಂದ 8 ವಿಕೆಟ್‌ಗೆ 289 ರನ್ ಪೇರಿಸಿದರೆ, ಆತಿಥೇಯ ತಂಡ 49.3 ಓವರ್‌ಗಳಲ್ಲಿ 276 ರನ್‌ಗಳಿಗೆ ಆಲೌಟಾಯಿತು.

ಅನುಭವಿ ಬ್ಯಾಟರ್ ಸಿಕಂದರ್ ರಝಾ ಏಕಾಂಗಿ ಹೋರಾಟ ನಡೆಸಿ ಶತಕ ಗಳಿಸಿದರೂ (115 ರನ್, 95 ಎ., 4X9, 6X3) ತಂಡವನ್ನು ಗೆಲುವಿನ ಗಡಿ ದಾಟಿಸಲು ವಿಫಲರಾದರು.

ಸವಾಲಿನ ಗುರಿ ಬೆನ್ನಟ್ಟಿದ ಜಿಂಬಾಬ್ವೆ ತಂಡ, ಕುಲದೀಪ್ ಯಾದವ್ (38ಕ್ಕೆ 2) ಮತ್ತು ಅಕ್ಷರ್ ಪಟೇಲ್ (30ಕ್ಕೆ 2) ಅವರ ಸ್ಪಿನ್ ದಾಳಿಗೆ ನಲುಗಿ 122 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿತು. 36ನೇ ಓವರ್‌ನಲ್ಲಿ 7 ವಿಕೆಟ್‌ಗೆ 169 ರನ್ ಗಳಿಸಿ ಸೋಲಿನ ಹಾದಿ ಹಿಡಿದಿತ್ತು.

ಆದರೆ ಸುಲಭದಲ್ಲಿ ತಲೆಬಾಗಲು ಸಿದ್ಧರಿಲ್ಲದ ರಝಾ, ಮರುಹೋರಾಟ ನಡೆಸಿದರು. ಅವರಿಗೆ ಬ್ರಾಡ್ ಇವಾನ್ಸ್ (28, 36 ಎ.) ತಕ್ಕ ಸಾಥ್ ನೀಡಿದರು. ಈ ಜೋಡಿ ಎಂಟನೇ ವಿಕೆಟ್‌ಗೆ 77 ಎಸೆತಗಳಲ್ಲಿ 104 ರನ್ ಸೇರಿಸಿತು.

ಆತಿಥೇಯರ ಗೆಲುವಿಗೆ ಕೊನೆಯ 3 ಓವರ್‌ಗಳಲ್ಲಿ 33 ರನ್‌ಗಳು ಬೇಕಿದ್ದವು. ಆವೇಶ್ ಖಾನ್ ಬೌಲ್ ಮಾಡಿದ 47ನೇ ಓವರ್‌ನ ಮೊದಲ ಐದು ಎಸೆತಗಳಲ್ಲಿ ಇಬ್ಬರೂ 16 ರನ್ ಕಲೆಹಾಕಿದರು. ಆದರೆ ಕೊನೆಯ ಎಸೆತದಲ್ಲಿ ಇವಾನ್ಸ್ ಎಲ್‌ಬಿ ಬಲೆಗೆ ಬಿದ್ದರು.

ಶಾರ್ದೂಲ್ ಠಾಕೂರ್ ಬೌಲ್ ಮಾಡಿದ ಮುಂದಿನ ಓವರ್‌ನಲ್ಲಿ ಸಿಕಂದರ್ ಅವರು ಶುಭಮನ್ ಗಿಲ್ ಹಿಡಿದ ಉತ್ತಮ ಕ್ಯಾಚ್‌ಗೆ ಔಟಾಗುವುದರೊಂದಿಗೆ ಜಿಂಬಾಬ್ವೆಯ ಅಚ್ಚರಿಯ ಗೆಲುವಿನ ಕನಸು ನುಚ್ಚುನೂರಾಯಿತು.

ಗಿಲ್ ಮೆರೆದಾಟ: ಮೊದಲು ಬ್ಯಾಟ್ ಮಾಡಿದ ಭಾರತದ ಆರಂಭ ನಿಧಾನವಾಗಿತ್ತು. 15 ಓವರ್‌ಗಳಲ್ಲಿ 63 ರನ್ ಮಾತ್ರ ಪೇರಿಸಿತು. ಶಿಖರ್ ಧವನ್ (40) ಮತ್ತು ಕೆ.ಎಲ್. ರಾಹುಲ್ (30) ಉತ್ತಮ ಆರಂಭವನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸುವಲ್ಲಿ ವಿಫಲರಾದರು. ಗಾಯದಿಂದ ಚೇತರಿಸಿಕೊಂಡ ಬಳಿಕ ಆಡುತ್ತಿರುವ ರಾಹುಲ್, ಸಾಮರ್ಥ್ಯ ತೋರಿಸಲು ತಮಗೆ ಲಭಿಸಿದ ಉತ್ತಮ ಅವಕಾಶ ಹಾಳುಮಾಡಿಕೊಂಡರು. ಯುವ ಆಟಗಾರರಾದ ಗಿಲ್ ಮತ್ತು ಇಶಾನ್ ಕಿಶನ್ (50, 61 ಎ.) ಜತೆಯಾದ ಬಳಿಕ ಸ್ಕೋರಿಂಗ್‌ನ ವೇಗ ಹೆಚ್ಚಿತು.

ಆರಂಭದಲ್ಲಿ ಅಲ್ಪ ತಿಣುಕಾಡಿದರೂ, ಪರಿಸ್ಥಿತಿಗೆ ಹೊಂದಿಕೊಂಡ ಬಳಿಕ ಲೀಲಾಜಾಲವಾಗಿ ಬ್ಯಾಟ್ ಬೀಸಿದರು. ಮೂರನೇ ವಿಕೆಟ್‌ಗೆ ಇವರು 140ರನ್ ಸೇರಿಸಿದರು.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಮೂರು ವರ್ಷಗಳ ಬಳಿಕ ಗಿಲ್ ಚೊಚ್ಚಲ ಶತಕದ ಸಂಭ್ರಮ ಆಚರಿಸಿದರು. ಅಂಗಳದ ಮೂಲೆ ಮೂಲೆಗೆ ಚೆಂಡನ್ನಟ್ಟಿದ ಅವರು ಸ್ಟ್ರೇಟ್ ಡ್ರೈವ್ ಮತ್ತು ಕವರ್ ಡ್ರೈವ್‌ಗಳ ಮೂಲಕ ಇನಿಂಗ್ಸ್‌ನ ಕಳೆ ಹೆಚ್ಚಿಸಿದರು. ಕೊನೆಯ ಓವರ್‌ನಲ್ಲಿ ಅವರು ಔಟಾದರು.



ಮುಖ್ಯಾಂಶಗಳು
- ಗಿಲ್ ಚೊಚ್ಚಲ ಶತಕ ಸಾಧನೆ
- 97 ಎಸೆತಗಳಲ್ಲಿ 130 ರನ್
- ಇಶಾನ್ ಕಿಶನ್ ಅರ್ಧಶತಕ

ಶತಕ ಗಳಿಸಿದ ಶುಭಮನ್ ಗಿಲ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಭಾರತ 8ಕ್ಕೆ 289 (50 ಓವರ್)

ಧವನ್ ಸಿ ವಿಲಿಯಮ್ಸ್ ಬಿ ಇವಾನ್ಸ್ 40 (68 ಎ., 4X5), ರಾಹುಲ್ ಬಿ ಇವಾನ್ಸ್ 30 (46 ಎ., 4X1, 6X1), ಗಿಲ್ ಸಿ ಕೈಯಾ ಬಿ ಇವಾನ್ಸ್ 130 (97 ಎ., 4X15, 6X1), ಇಶಾನ್ ರನೌಟ್ 50 (61 ಎ., 4X6), ಹೂಡಾ ಬಿ ಇವಾನ್ಸ್ 1 (3 ಎ), ಸಂಜು ಸಿ ಕೈಟಾನೊ ಬಿ ಜಾಂಗ್ವೆ 15 (13 ಎ., 6X2), ಅಕ್ಷರ್ ಸಿ ರಝಾ ಬಿ ನಯುಚಿ 1 (4 ಎ), ಶಾರ್ದೂಲ್ ಸಿ ನಯುಚಿ ಬಿ ಇವಾನ್ಸ್ 9 (6 ಎ., 4X2), ಚಾಹರ್ ಔಟಾಗದೆ 1 (1 ಎ), ಕುಲದೀಪ್ ಔಟಾಗದೆ 2 (2 ಎ)

ಇತರೆ 10 (ಲೆಗ್‌ಬೈ1, ನೋಬಾಲ್ 1, ವೈಡ್ 8)

ವಿಕೆಟ್ ಪತನ: 1-63 (ಕೆ.ಎಲ್. ರಾಹುಲ್; 14.6), 2–84 (ಶಿಖರ್ ಧವನ್; 20.6), 3–224 (ಇಶಾನ್ ಕಿಶನ್; 42.1), 4–227 (ದೀಪಕ್ ಹೂಡಾ; 42.6), 5–256 (ಸಂಜು ಸ್ಯಾಮ್ಸನ್; 45.6), 6–272 (ಅಕ್ಷರ್ ಪಟೇಲ್; 47.4), 7–282 (ಶುಭಮನ್ ಗಿಲ್; 49.1), 8–286 (ಶಾರ್ದೂಲ್ ಠಾಕೂರ್; 49.3)

ಬೌಲಿಂಗ್: ರಿಚರ್ಡ್ ಎನ್‌ಗರ್ವಾ 9–0–58–0, ವಿಕ್ಟರ್ ನಯುಚಿ 10–1–48–1, ಬ್ರಾಡ್ ಇವಾನ್ಸ್ 10–0–54–5, ಸಿಕಂದರ್ ರಝಾ 10–1–39–0, ಲೂಕ್ ಜಾಂಗ್ವೆ 5–0–49–1, ಸೀನ್ ವಿಲಿಯಮ್ಸ್ 5–0–30–0, ಟೋನಿ ಮುನ್ಯಾಂಗೊ 1–0–10–0

ಜಿಂಬಾಬ್ವೆ 276 (49.3 ಓವರ್))

ಕೈಟಾನೊ ಸಿ ಇಶಾನ್ ಬಿ ಕುಲದೀಪ್ 13 (22 ಎ., 4X1, 6X1), ಕೈಯಾ ಎಲ್‌ಬಿಡಬ್ಲ್ಯು ಬಿ ಚಾಹರ್ 6 (9 ಎ., 4X1), ವಿಲಿಯಮ್ಸ್ ಎಲ್‌ಬಿಡಬ್ಲ್ಯು ಬಿ ಪಟೇಲ್ 45 (46 ಎ., 4X7), ಮುನ್ಯಾಂಗೊ ಸಿ ರಾಹುಲ್ ಬಿ ಆವೇಶ್ 15 (31 ಎ., 4X2), ರಝಾ ಸಿ ಗಿಲ್ ಬಿ ಠಾಕೂರ್ 115 (95 ಎ., 4X9, 6X3), ಚಕಾಬ್ವಾ ಸಿ ಮತ್ತು ಬಿ ಪಟೇಲ್ 16 (27 ಎ., 4X1), ಬರ್ಲ್ ಸಿ ಧವನ್ ಬಿ ಚಾಹರ್ 8 (16 ಎ), ಜಾಂಗ್ವೆ ಸಿ ಗಿಲ್ ಬಿ ಕುಲದೀಪ್ 14 (13 ಎ., 4X1, 6X1), ಇವಾನ್ಸ್ ಎಲ್‌ಬಿಡಬ್ಲ್ಯು ಬಿ ಆವೇಶ್ 28 (36 ಎ., 4X2), ಎನ್‌ಗರ್ವಾ ಔಟಾಗದೆ 2 (4 ಎ), ನಯುಚಿ ಬಿ ಆವೇಶ್ 0 (3 ಎ)

ಇತರೆ 14 (ಲೆಗ್‌ಬೈ-3, ನೋಬಾಲ್ -4, ವೈಡ್-7)

ವಿಕೆಟ್ ಪತನ: 1–7 (ಇನೊಸೆಂಟ್ ಕೈಯಾ; 2.3), 1–26 (5.6), 2–82 (ಸೀನ್ ವಿಲಿಯಮ್ಸ್; 16.4), 3–84 (ಟೋನಿ ಮುನ್ಯಾಂಗೊ; 17.5), 4–120 (ರೆಗಿಸ್ ಚಕಾಬ್ವಾ; 26.1), 5–122 (ತಕುಡಾವಾಂಶೆ ಕೈಟಾನೊ; 27.2), 6–145 (ರಿಯಾನ್ ಬರ್ಲ್; 32.1), 7–169 (ಲೂಕ್ ಜಾಂಗ್ವೆ; 35.5), 8–273 (ಬ್ರಾಡ್ ಇವಾನ್ಸ್; 47.6), 9–275 (ಸಿಕಂದರ್ ರಝಾ; 48.4), 10–276 (ವಿಕ್ಟರ್ ನಯುಚಿ; 49.3)

ಬೌಲಿಂಗ್: ದೀಪಕ್ ಚಾಹರ್ 10–0–75–2, ಆವೇಶ್ ಖಾನ್ 9.3–1–66–3, ಶಾರ್ದೂಲ್ ಠಾಕೂರ್ 9–0–55–1, ಕುಲದೀಪ್ ಯಾದವ್ 10–0–38–2, ದೀಪಕ್ ಹೂಡಾ 1–0–9–0, ಅಕ್ಷರ್ ಪಟೇಲ್ 10–1–30–2

ಫಲಿತಾಂಶ: ಭಾರತಕ್ಕೆ 13 ರನ್ ಗೆಲುವು, ಸರಣಿಯಲ್ಲಿ 3–0 ಜಯ

ಸಂಕ್ಷಿಪ್ತ ಸುದ್ದಿ

ಬಿಎಫ್‌ಸಿಗೆ ಏರ್‌ಫೋರ್ಸ್ ಸವಾಲು

ಕೋಲ್ಕತ್ತ: ಮೊದಲ ಪಂದ್ಯದ ಗೆಲುವಿನಿಂದ ಆತ್ಮವಿಶ್ವಾಸದಲ್ಲಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಇಂಡಿಯನ್ ಏರ್‌ಫೋರ್ಸ್ ಸವಾಲು ಎದುರಿಸಲಿದೆ.

ಎ ಗುಂಪಿನಲ್ಲಿ ತಾನಾಡಿದ ಮೊದಲ ಪಂದ್ಯದಲ್ಲಿ ಬುಧವಾರ ಬಿಎಫ್‌ಸಿ 2–1ರಿಂದ ಜಮ್ಶೆಡ್‌ಪುರ ಎಫ್‌ಸಿ ತಂಡಕ್ಕೆ ಸೋಲುಣಿಸಿತ್ತು. ಅದೇ ಲಯದೊಂದಿಗೆ ಇಲ್ಲಿಯೂ ಗೆಲುವಿನ ತವಕದಲ್ಲಿದೆ.

ಹೈದರಾಬಾದ್ ಜಯಭೇರಿ: ಹೈದರಾಬಾದ್ ಎಫ್‌ಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಸೋಮವಾರ ನಡೆದ ಪಂದ್ಯದಲ್ಲಿ 2–0ಯಿಂದ ತಿದ್ದಿಮ್ ರೋಡ್ ಅಥ್ಲೆಟಿಕ್ ಯೂನಿಯನ್ (ಟ್ರಾ) ಎಫ್‌ಸಿ ಎದುರು ಗೆದ್ದಿತು. ಇಂಫಾಲ್‌ನಲ್ಲಿ ಈ ಪಂದ್ಯ ನಡೆಯಿತು.

ಪಂದ್ಯ ಆರಂಭ: ಸಂಜೆ 6
ನೇರ ಪ್ರಸಾರ: ಸ್ಪೋರ್ಟ್ಸ್ 18

ವಾಲಿಬಾಲ್: ಭಾರತ ಯುವ ತಂಡಕ್ಕೆ ಕಂಚು

ನವದೆಹಲಿ (ಪಿಟಿಐ): ಭಾರತ 18 ವರ್ಷದೊಳಗಿನವರ ವಾಲಿಬಾಲ್ ತಂಡವು ಟೆಹ್ರಾನ್‌ನಲ್ಲಿ ನಡೆದ ಏಷ್ಯನ್ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ.

ಸೋಮವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತ 25-20, 25-21, 26-28, 19-25 15-12ರಿಂದ ಕೊರಿಯಾ ತಂಡವನ್ನು ಸೋಲಿಸಿತು.

ಆಶಿಶ್ ಸ್ವೇನ್, ಆರ್ಯನ್ ಬಲಿಯಾನ್, ಕುಶ್ ಸಿಂಗ್ ಮತ್ತು ಕಾರ್ತಿಕ್ ಶರ್ಮಾ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಯಶಸ್ವಿನಿಗೆ ಪ್ರಶಸ್ತಿ



ಯಶಸ್ವಿನಿ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಈಕ್ವೆಡಾರ್‌ನಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

19 ವರ್ಷದೊಳಗಿನವರ ವಿಭಾಗದಲ್ಲಿ ಸ್ಪರ್ಧಿಸಿದ್ದ ಯಶಸ್ವಿನಿ ಫೈನಲ್ ಪಂದ್ಯದಲ್ಲಿ 10-12,11-5,11-6,11-7ರಿಂದ ಅಮೆರಿಕದ ಸ್ಯಾಲಿ ಮೊಯ್ಲಾಂಡ್ ಅವರನ್ನು ಮಣಿಸಿದರು. ಮೊದಲ ಗೇಮ್ ಸೋತರೂ ಛಲಬಿಡದೆ ಆಡಿದ ಅವರು ಗೆಲುವು ಒಲಿಸಿಕೊಂಡರು.


ಕ್ರಿಪ್ಟೊ ಕಪ್ ಟೂರ್ನಿಯಲ್ಲಿ ‘ರನ್ನರ್ಸ್ ಅಪ್’

ಟೂರ್ನಿಯ ಏಳು ಸುತ್ತುಗಳಲ್ಲಿ ಕಾರ್ಲ್‌ಸನ್ ಒಟ್ಟು 16 ಪಾಯಿಂಟ್ಸ್ ಕಲೆಹಾಕಿದರೆ, ಪ್ರಗ್ನಾನಂದ 15 ಪಾಯಿಂಟ್ಸ್ ಗಳಿಸಿದರು.

ಚೆಸ್: ಕಾರ್ಲ್‌ಸನ್‌ಗೆ ಸೋಲುಣಿಸಿದ ಪ್ರಗ್ನಾನಂದ

ಮಿಯಾಮಿ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಗ್ನಾನಂದ ಅವರು ಸೋಮವಾರ ಇಲ್ಲಿ ಕೊನೆಗೊಂಡ ಎಫ್‌ಟಿಎಕ್ಸ್ ಕ್ರಿಪ್ಟೊ ಕಪ್ ಚೆಸ್ ಟೂರ್ನಿಯ ಕೊನೆಯ ಸುತ್ತಿನಲ್ಲಿ ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ 4–2 ರಲ್ಲಿ ಗೆದ್ದರು.

ಆದರೆ ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರನ ಎದುರು ಜಯಿಸಿದರೂ ಅವರು ‘ರನ್ನರ್ಸ್ ಅಪ್’ ಆದರು. ನಾರ್ವೆಯ ಕಾರ್ಲ್‌ಸನ್ ಚಾಂಪಿಯನ್ ಆದರು.



ಪ್ರಗ್ನಾನಂದ

ಇರಾನ್ ಮೂಲದ ಫ್ರಾನ್ಸ್‌ನ ಆಟಗಾರ ಅಲಿರೆಜಾ ಫಿರೋಜಾ ಅವರೂ 15 ಪಾಯಿಂಟ್ಸ್ ಕಲೆಹಾಕಿದರು. ಆದರೆ ಅವರು ಪ್ರಗ್ನಾನಂದ ಎದುರು ಸೋತಿದ್ದರಿಂದ ಮೂರನೇ ಸ್ಥಾನ ಪಡೆದರು.

ಪ್ರಗ್ನಾನಂದ ಮತ್ತು ಕಾರ್ಲ್‌ಸನ್ ನಡುವಿನ ಪಂದ್ಯ ತೀವ್ರ ಪೈಪೋಟಿಯಿಂದ ಕೂಡಿತ್ತು. ನಾಲ್ಕು ಸುತ್ತುಗಳ ಹಣಾಹಣಿಯ ಮೊದಲ ಎರಡು ಗೇಮ್‌ಗಳನ್ನು ಇಬ್ಬರೂ ಡ್ರಾ ಮಾಡಿಕೊಂಡರು.

ಮೂರನೇ ಗೇಮ್ ಗೆದ್ದ ಕಾರ್ಲ್‌ಸನ್ 2–1 ಮುನ್ನಡೆ ಪಡೆದರು. ಆದರೆ ನಾಲ್ಕನೇ ಗೇಮ್ ಜಯಿಸಿದ ಪ್ರಗ್ನಾನಂದ 2–2 ರಲ್ಲಿ ಸಮಬಲ ಮಾಡಿಕೊಂಡರು. ಇದರಿಂದ ವಿಜೇತರನ್ನು ನಿರ್ಣಯಿಸಲು ಟೈಬ್ರೇಕರ್ ಮೊರೆ ಹೋಗಲಾಯಿತು. ಟೈಬ್ರೇಕರ್‌ನ ಎರಡೂ ಗೇಮ್‌ಗಳಲ್ಲಿ ಎದುರಾಳಿಗೆ ಆಘಾತ ನೀಡಿದ ಪ್ರಗ್ನಾನಂದ, ಅಚ್ಚರಿಯ ಗೆಲುವು ಸಾಧಿಸಿದರು.

ಗಾಲ್ಫ್ ಕಣಕ್ಕೆ ಮುರಳಿ ವಿಜಯ್

ಚೆನ್ನೈ (ಪಿಟಿಐ): ಭಾರತ ಕ್ರಿಕೆಟ್ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ತಮಿಳುನಾಡಿನ ಬ್ಯಾಟರ್ ಮುರಳಿ ವಿಜಯ್ ಅವರು ಗಾಲ್ಫ್‌ನಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಮಂಗಳವಾರ ಇಲ್ಲಿ ಆರಂಭವಾಗಲಿರುವ ಚೆನ್ನೈ ಓಪನ್ ಗಾಲ್ಫ್ ಚಾಂಪಿಯನ್‌ಷಿಪ್‌ನಲ್ಲಿ ಅಮೆಚೂರ್ ಆಟಗಾರನಾಗಿ ಅವರು ಕಣಕ್ಕಿಳಿಯಲಿದ್ದಾರೆ.

ಹಿರಿಯ ಕ್ರಿಕೆಟಿಗ ಕೃಷ್ಣಮಾಚಾರಿ ಶ್ರೀಕಾಂತ್ ಅವರ ಪುತ್ರ ಅನಿರುದ್ಧ ಶ್ರೀಕಾಂತ್ ಅವರೂ ಅಮೆಚೂರ್ ಸ್ಪರ್ಧಿಯಾಗಿ ಪಾಲ್ಗೊಳ್ಳಲಿದ್ದಾರೆ.

ತಮಿಳುನಾಡು ಗಾಲ್ಫ್ ಫೆಡರೇಷನ್ ಕೋರ್ಸ್‌ನಲ್ಲಿ ಟೂರ್ನಿ ನಡೆಯಲಿದೆ

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ

ಪ್ಲೇಆಫ್‌ಗೆ ಹುಬ್ಬಳ್ಳಿ ಟೈಗರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ಲವನೀತ್ ಸಿಸೋಡಿಯಾ (80) ಅವರ ಆಕರ್ಷಕ ಅರ್ಧಶತಕದ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮಂಗಳೂರು ಯುನೈಟೆಡ್ ವಿರುದ್ಧ 6 ವಿಕೆಟ್ ಜಯ ಗಳಿಸಿ ಪ್ಲೇ ಆಫ್ ಹಂತ ತಲುಪಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮಂಗಳೂರು ಯುನೈಟೆಡ್ ನೀಡಿದ 185 ರನ್‌ಗಳ ಕಠಿಣ ಸವಾಲನ್ನು ಹುಬ್ಬಳ್ಳಿ ಟೈಗರ್ಸ್ ಇನ್ನೂ 13 ಎಸೆತ ಬಾಕಿ ಇರುವಾಗಲೇ ತಲುಪಿತು. ಸಿಸೋಡಿಯಾ ಅವರು 40 ಎಸೆತಗಳನ್ನೆದುರಿಸಿ 11 ಬೌಂಡರಿ ಹಾಗೂ 2 ಸಿಕ್ಸರ್ ಸಿಡಿಸಿ ಜಯದ ರೂವಾರಿ ಎನಿಸಿದರು.

ಹುಬ್ಬಳ್ಳಿ ತಂಡವು ಮಂಗಳವಾರ ಬಲಿಷ್ಠ ಮೈಸೂರು ವಾರಿಯರ್ಸ್ ತಂಡವನ್ನು ಎದುರಿಸಲಿದೆ.

ಶಿವಮೊಗ್ಗಕ್ಕೆ ಜಯ: ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಗೆಲುವು ಸಾಧಿಸಿತು. 6 ವಿಕೆಟ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವನ್ನು ಮಣಿಸಿತು. ಈ ಮೂಲಕ ಟೂರ್ನಿಯಲ್ಲಿ ತನ್ನ ಅಭಿಯಾನ ಕೊನೆಗೊಳಿಸಿತು.

ಮೊದಲು ಬ್ಯಾಟ್ ಮಾಡಿದ ಗುಲ್ಬರ್ಗ ತಂಡ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 118 ರನ್ ಗಳಿಸಿತು. ಸ್ಟ್ರೈಕರ್ಸ್ ಇನಿಂಗ್ಸ್ ವೇಳೆ ಮಳೆಯಿಂದ ಕೆಲಹೊತ್ತು ಆಟ ನಷ್ಟವಾದ ಕಾರಣ ಗೆಲುವಿಗೆ 54 ರನ್ ಗುರಿ ನೀಡಲಾಯಿತು. 6.3 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಜಯ ಸಾಧಿಸಿತು.


ಮಿಸ್ಟಿಕ್ಸ್ ತಂಡ ಈಗಾಗಲೇ ಪ್ಲೇ ಆಫ್ ಪ್ರವೇಶಿಸಿರುವುದರಿಂದ, ಈ ಸೋಲು ತಂಡದ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಸ್ಟ್ರೈಕರ್ಸ್ ಗೆಲುವಿಗೆ ಕೊನೆಯ ಓವರ್‌ನಲ್ಲಿ ಎಂಟು ರನ್‌ಗಳು ಬೇಕಿ ದ್ದವು. ಡಿ.ಅವಿನಾಶ್ ಅವರು ಸಿಕ್ಸರ್ ಹೊಡೆದು ತಂಡಕ್ಕೆ ಸಮಾಧಾನಕರ ಗೆಲುವು ತಂದಿತ್ತರು.

ಸಂಕ್ಷಿಪ್ತ ಸ್ಕೋರುಗಳು: ಮಂಗಳೂರು ಯುನೈಟೆಡ್: 20 ಓವರ್‌ಗಳಲ್ಲಿ 5ಕ್ಕೆ 184 (ಸಮರ್ಥ್ ಆರ್. 31, ಅಮಿತ್ ವರ್ಮಾ 47, ಅಭಿನವ್ ಮನೋಹರ್ 69; ಅಭಿಮನ್ಯು ಮಿಥುನ್ 40ಕ್ಕೆ 1, ವಿ. ಕೌಶಿಕ್ 40ಕ್ಕೆ1, ಬಿ.ಯು. ಶಿವಕುಮಾರ್ 28ಕ್ಕೆ 1, ನವೀನ್ ಎಂ.ಜಿ. 22ಕ್ಕೆ 2). ಹುಬ್ಬಳ್ಳಿ ಟೈಗರ್ಸ್ 17.5 ಓವರ್‌ಗಳಲ್ಲಿ 4ಕ್ಕೆ 189 (ಲವನೀತ್ ಸಿಸೋಡಿಯಾ 80, ಮೊಹಮ್ಮದ್ ತಾಹಾ 34, ಶಿವಕುಮಾರ್ 34; ವಿಜಯಕುಮಾರ್ ವೈಶಾಖ್ 36ಕ್ಕೆ 2, ಶಶಿಕುಮಾರ್ ಕೆ. 30ಕ್ಕೆ 1). ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ ಆರು ವಿಕೆಟ್‌ಗಳ ಜಯ.

ಗುಲ್ಬರ್ಗ ಮಿಸ್ಟಿಕ್ಸ್ 20 ಓವರ್‌ಗಳಲ್ಲಿ 9ಕ್ಕೆ 118 (ಜಸ್ವಂತ್ ಆಚಾರ್ಯ 22, ರಿತೇಶ್ ಭಟ್ಕಳ್ 38, ಡಿ.ಅವಿನಾಶ್ 24ಕ್ಕೆ 3, ಉತ್ತಮ್ ಅಯ್ಯಪ್ಪ 23ಕ್ಕೆ 2, ಕೆ.ಸಿ.ಕಾರ್ಯಪ್ಪ 22ಕ್ಕೆ 2) ಶಿವ ಸ್ಟ್ರೈಕರ್ಸ್: 6.3 ಓವರ್‌ಗಳಲ್ಲಿ 4 ವಿಕೆಟ್‌ಗೆ 54 (ಕೆ.ಸಿದ್ಧಾರ್ಥ 18, ಡಿ.ಅವಿನಾಶ್ 11, ವಿದ್ವತ್ ಕಾವೇರಪ್ಪ 22ಕ್ಕೆ 1)

ಮಂಗಳವಾರ ಪಂದ್ಯಗಳು: ಎಲಿಮಿನೇಟರ್: ಮೈಸೂರು ವಾರಿಯರ್ಸ್– ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 3)

ಕ್ವಾಲಿಫೈರ್1: ಬೆಂಗಳೂರು ಬ್ಲಾಸ್ಟರ್ಸ್– ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 7)



ಶಿವಮೊಗ್ಗ ತಂಡದ ಡಿ.ಅವಿನಾಶ್

ಉಚಿತ ಪ್ರವೇಶ

ಮಂಗಳವಾರ ನಡೆಯುವ ಕ್ವಾಲಿಫೈಯರ್ ಮತ್ತು ಎಲಿಮಿನೇಟರ್ ಪಂದ್ಯಗಳಿಗೆ ಕ್ರೀಡಾಂಗಣದ ‘ಅಪ್ಪರ್ ಬಿ‘ ಸ್ಟ್ಯಾಂಡ್‌ಗೆ ಪ್ರೇಕ್ಷಕರಿಗೆ ಉಚಿತ ಪ್ರವೇಶ ಇರಲಿದೆ. ಕ್ರೀಡಾಂಗಣದ ಎರಡನೇ ಗೇಟ್ ಮೂಲಕ ಪ್ರವೇಶ ಪಡೆಯಬಹುದು. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.